

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 13 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 295 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4



ತಾಳ್ಮೆಯೂ ಫಲ ನೀಡುತ್ತೆ...

ನಿರಂತರ ಯಶಸ್ಸಿಗೆ ಸ್ವಲ್ಪ ಶ್ರಮ ಬೇಕಷ್ಟೇ; ಡಿಸಿಎಂ ಡಿಕೆಶಿ ಮಾರ್ಮಿಕ ನುಡಿ



ನವದೆಹಲಿ: ತಾಳ್ಮೆ ಕೂಡ ಸಾಕಷ್ಟು ಫಲ ನೀಡುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ದೆಹಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ರಾಜಕಾರಣದಲ್ಲಿದ್ದೇವೆ ಅಂದ ಮೇಲೆ ರಾಜಕಾರಣ ಮಾಡಲೇಬೇಕು. ನನಗೆ ಸದಾ ಯಶಸ್ಸು ಸಿಗುತ್ತದೆ. ಅದಕ್ಕೆ ಸ್ವಲ್ಪ ಶ್ರಮ ಬೇಕಾಗುತ್ತದೆ ಅಷ್ಟೇ. ತಾಳ್ಮೆಯೂ ಸಾಕಷ್ಟು ಫಲ ನೀಡುತ್ತದೆ ಎಂದರು.

ನಿಮ್ಮ ಭೇಟಿ ಫಲಪ್ರದವಾಗಿದೆಯೇ, ಅಧಿಕಾರ ಹಂಚಿಕೆ ವಿಚಾರವಾಗಿ ಹೈಕಮಾಂಡ್‌ನಿಂದ ಸ್ಪಷ್ಟನೆ ಸಿಕ್ಕಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾವು ಈ ವಿಚಾರವಾಗಿ ಚರ್ಚೆ ಮಾಡಿಲ್ಲ. ಪಕ್ಷ ತನ್ನದೇ ಆದ ಗುರಿ ಹೊಂದಿದ್ದು, ಪಕ್ಷದ ಯಶಸ್ಸು ಹಾಗೂ ಪಕ್ಷದ ಹಿತಾಸಕ್ತಿ, ಕರ್ನಾಟಕ ಹಾಗೂ ದೇಶದ ಹಿತದೃಷ್ಟಿ ಆಧಾರದ ಮೇಲೆ ನಮ್ಮ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ. ಮಾಧ್ಯಮಗಳು ಹಾಗೂ ಬೇರೆಯವರು ಈ ಭೇಟಿಗೆ ಹೊಸ ರೂಪ, ಬೇರೆ ಬಣ್ಣ ನೀಡುತ್ತಿದ್ದೀರಿ. ನಮಗೆ ಇದರಲ್ಲಿ ವಿಶೇಷವಿಲ್ಲ ಎಂದು ಹೇಳಿದರು.

ರಾಜಕಾರಣ ಚರ್ಚೆ ಸಹಜ: ಹೈಕಮಾಂಡ್ ನಾಯಕರ ಭೇಟಿ ಬಗ್ಗೆ ಕೇಳಿದಾಗ, ನಾನು ದೆಹಲಿಗೆ ಬಂದಾಗ ಎಲ್ಲರನ್ನೂ ಭೇಟಿ ಮಾಡುತ್ತೇನೆ. ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ಸುರ್ಜೆವಾಲ, ಟಿ.ಬಿ.ಜಯಚಂದ್ರ ಸೇರಿದಂತೆ ಎಲ್ಲರನ್ನು ಭೇಟಿ ಮಾಡಿರುವೆ. ರಾಜಕಾರಣಿಗಳು ಭೇಟಿಯಾದಾಗ ರಾಜಕಾರಣ ಚರ್ಚೆ ಮಾಡದೇ ಇರುತ್ತಾರಾ? ರಾಜಕೀಯ ಚರ್ಚೆ ಮಾಡುತ್ತೇವೆ. ಆದರೆ ಆ ಚರ್ಚೆಯ ವಿವರವನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸಲಾರೆ. ಕರ್ನಾಟಕದ ಹಿತ ಸೇರಿದಂತೆ ಅಸ್ಸಾಂ, ದೆಹಲಿ ಬಗ್ಗೆ ಚರ್ಚೆ ಮಾಡಿರುತ್ತೇವೆ ಎಂದಷ್ಟೇ ತಿಳಿಸಿದರು. ಯತೀಂದ್ರ ಅವರು ನಾಯಕತ್ವ ಬದಲಾವಣೆ ಇಲ್ಲ ಎಂದು ಹೇಳುತ್ತಿದ್ದಾರೆ ಎಂದಾಗ, ಅವರು ನಮ್ಮ ಹೈಕಮಾಂಡ್ ಅಲ್ಲವೇ, ಅವರ ಮಾತನ್ನು ನಾವು ಸ್ವೀಕರಿಸಬೇಕು ಎಂದು ಡಿಕೆಶಿ ವ್ಯಂಗ್ಯವಾಡಿದರು.

ವಿದೇಶ ಪ್ರವಾಸದ ಬಗ್ಗೆ ಗೊತ್ತಿಲ್ಲ: ಶಾಸಕರು ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾರೆ ಎಂದು ಕೇಳಿದಾಗ, ಈ ವಿಚಾರವಾಗಿ ನಾನು ಏನನ್ನೂ ಮಾತನಾಡುವುದಿಲ್ಲ. ಶಾಸಕರುಂಟು, ಮುಖ್ಯಮಂತ್ರಿಗಳುಂಟು. ಸಿಎಂ ಅವರಿಗೆ ಯಾವ ಮಾರ್ಗದರ್ಶನ ನೀಡಿದ್ದಾರೋ ನನಗೆ ಗೊತ್ತಿಲ್ಲ. ಈ ವಿಚಾರ ನನ್ನ ಜತೆ ಚರ್ಚೆಯಾಗಿಲ್ಲ. ಈ ವಿಚಾರವಾಗಿ ನಾನು ಮಾಧ್ಯಮಗಳಿಂದ ತಿಳಿಯುತ್ತಿದ್ದೇನೆ ಹೊರತು, ಬೇರೆ ಯಾರು ಈ ಬಗ್ಗೆ ಮಾಹಿತಿ

■6ನೇ ಪುಟಕ್ಕೆ

ರಾಹುಲ್ ಗಾಂಧಿ ಮನವೊಲಿಸುವಲ್ಲಿ ಯಶಸ್ವಿ

ಬೆಂಗಳೂರು, ಫೆ.12(ಕೆಎಂಶಿ)– ಅಧಿಕಾರ ಹಂಚಿಕೆ ಸಂಬಂಧ ಕೊನೆಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.


ರಾಹುಲ್ ಗಾಂಧಿ

ಶಿವಕುಮಾರ್ ಮನವಿ ಆಲಿಸಿದ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆಸಿ ಚರ್ಚಿಸುವ ಭರವಸೆ ನೀಡಿದ್ದಾರೆ.

ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಶಿವಕುಮಾರ್ ಇಂದು ಬೆಳಗ್ಗೆ 10 ಜನಪಥ್‌ಗೆ ತೆರಳಿ, ಸೋನಿಯಾಗಾಂಧಿ ಸಮ್ಮುಖದಲ್ಲೇ ರಾಹುಲ್ ಗಾಂಧಿ ಭೇಟಿ ಮಾಡಿ ಸುಮಾರು 15 ನಿಮಿಷಗಳವರೆಗೆ ಚರ್ಚೆ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ನೀವು ಮಧ್ಯಪ್ರವೇಶಿಸಿ ಇತ್ಯರ್ಥಪಡಿಸಿ ಎಂದು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಈ ವೇಳೆ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸಹ ಉಪಸ್ಥಿತರಿದ್ದು, ಶಿವಕುಮಾರ್ ಮನವಿ ಆಲಿಸಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಡೆದ ಒಪ್ಪಂದ ಪಾಲಿಸುವಲ್ಲಿ ಸಿದ್ದರಾಮಯ್ಯ ಹಿಂದೆ ಸರಿಯುತ್ತಿದ್ದಾರೆ.

ಒಪ್ಪಂದದಂತೆ ನಡೆದುಕೊಳ್ಳದಿರುವುದು ಪಕ್ಷದಲ್ಲಿ ಶಾಸಕರ ಒಂದು ಗುಂಪಿಗೆ ತೀವ್ರ ಬೇಸರ ತರಿಸಿದ್ದು, ನಾಯಕತ್ವ ವಿರುದ್ಧವೇ ಧ್ವನಿ ಎತ್ತಲು ಮುಂದಾಗಿದ್ದಾರೆ. ಅದರಲ್ಲೂ ಕೆಲವು ಶಾಸಕರು ನನ್ನ ಮಾತಿಗೂ ಓಗೊಡದೆ, ಬಹಿರಂಗವಾಗಿಯೇ ಅಧಿಕಾರ ಹಸ್ತಾಂತರ ಕುರಿತು ಪ್ರಸ್ತಾಪಿಸುತ್ತಿದ್ದಾರೆ.

■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರು, ಶಾಸಕರ ಪ್ರವಾಸಕ್ಕೆ ಕಾಂಗ್ರೆಸ್ ವರಿಷ್ಠರು ಬ್ರೇಕ್

ಬೆಂಗಳೂರು, ಫೆ.12(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರು ಮತ್ತು ಶಾಸಕರು ಹೊರಟಿದ್ದ ವಿದೇಶ ಪ್ರವಾಸಕ್ಕೆ ಎಐಸಿಸಿ ಬ್ರೇಕ್ ಹಾಕಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಇಂದು ಪಕ್ಷದ ಅಧಿನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಭೇಟಿ ನಂತರ ಈ ಬೆಳವಣಿಗೆ ನಡೆದಿದೆ. ಪಕ್ಷದ ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಇಂದು ಬೆಳಗ್ಗೆ ಸಿದ್ದರಾಮಯ್ಯ ಹಾಗೂ ಕೆಲವು ಸಚಿವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಪಕ್ಷದ ಶಾಸಕರು ವಿದೇಶ ಪ್ರವಾಸ ಕೈಗೊಳ್ಳುವುದನ್ನು ತಡೆಯುವಂತೆ ಸೂಚಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನನಗೆ ನೀಡಿದ ಸಂದೇಶ ನಿಮಗೆ ತಲುಪಿಸಿದ್ದೇನೆ. ಈ ಸಂದರ್ಭದಲ್ಲಿ ಅದರಲ್ಲೂ ಬಜೆಟ್ ಅಧಿವೇಶನ ಹತ್ತಿರ ಆಗುತ್ತಿರುವ ವೇಳೆ ವಿದೇಶ ಪ್ರವಾಸ ಸರಿಯಲ್ಲ ಎಂದಿದ್ದಾರೆ.





ಮೈಸೂರು ಕೆ.ಸಿ.ನಗರ ಕೆರೆ ಅತಿಕ್ರಮಣಕ್ಕೆ ಆಕ್ರೋಶ

ಅಕ್ರಮ ಕಾಂಪೌಂಡ್ ತೆರವಿಗೆ 48 ಗಂಟೆ ಗಡುವು

ತಪ್ಪಿದಲ್ಲಿ ನಾವೇ ಒಡೆದು ಹಾಕ್ತೇವೆ: ಶಾಸಕ ಟಿ.ಎಸ್.ಶ್ರೀವತ್ಸ ಎಚ್ಚರಿಕೆ


ಮೈಸೂರಿನ ಕೆ.ಸಿ.ಬಡಾವಣೆಯಲ್ಲಿ ಒತ್ತುವರಿಯಾಗಿರುವ ಕೆರೆ ಜಾಗವನ್ನು ಶಾಸಕ ಟಿ.ಎಸ್.ಶ್ರೀವತ್ಸ ಖುದ್ದು ಪರಿಶೀಲಿಸಿದರು.

- ಭೂ ಮಾಫಿಯಾಗೆ ಶರಣಾಗಿರುವ ಜಿಲ್ಲಾಡಳಿತ
- ಮುಡಾ ನಕ್ಷೆಯಲ್ಲಿ ಕೆರೆ ಉಲ್ಲೇಖ; ದಾಖಲಾತಿಯಲ್ಲೂ ಸ್ಪಷ್ಟ
- ಕೆರೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ
- ಈ 'ಸಾಹಸ'ದ ಹಿಂದಿರುವ ಮಾಸ್ಟರ್ ಮೈಂಡ್ ಯಾರು

ಮೈಸೂರು, ಫೆ.12(ಬಿಎಲ್‌ಯು)–ಚಾಮುಂಡಿಬೆಟ್ಟ ತಪ್ಪಲಿನ ಕೆ.ಸಿ.ನಗರ (ಕೆಂಪು ಚೆಲುವಾಜಮ್ಮಣ್ಣಿ ಬಡಾವಣೆ)ದಲ್ಲಿನ ಕೆರೆ ಅತಿಕ್ರಮಣವನ್ನು ಇನ್ನು 48 ಗಂಟೆಯಲ್ಲಿ ತೆರವುಗೊಳಿಸದಿದ್ದರೆ, ಶಿವರಾತ್ರಿ ಹಬ್ಬವಾದ ಮಾರನೆ ದಿನ ಕಾಂಪೌಂಡ್ ಒಡೆದು ನಾವೇ ಒತ್ತುವರಿಯನ್ನು ತೆರವುಗೊಳಿಸುತ್ತೇವೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಎಚ್ಚರಿಸಿದರು.

ಕೆ.ಸಿ.ನಗರದ ವಿವಾದಿತ ಕೆರೆ ಮುಂದೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಆಸ್ತಿಯಾಗಿರುವ ಕೆರೆ ಭೂಮಿಯನ್ನು ಕಬಳಿಸುತ್ತಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿರುವುದನ್ನು ಗಮನಿಸಿದರೆ ರಾಜ್ಯ ಸರ್ಕಾರ ಭೂ ಮಾಫಿಯಾಗೆ ಶರಣಾಗಿದೆ ಎನ್ನಿಸುತ್ತದೆ ಎಂದು ಆರೋಪಿಸಿದರು.

ಕುರುಬರಹಳ್ಳಿ ಸರ್ವೇ ನಂಬರ್ 4ರ ವ್ಯಾಪ್ತಿಯಲ್ಲಿ ಬರುವ ಇದು ಕೆರೆ ಜಾಗವೆಂದು ಮುಡಾದ ಅಧಿಕೃತ ನಕ್ಷೆ ಮಾತ್ರವಲ್ಲದೆ ಹಲವು ದಾಖಲಾತಿಗಳು ಸಾರಿ ಸಾರಿ ಹೇಳುತ್ತವೆ ಎಂದರು. ಇಲ್ಲಿ ಕೆರೆ ಇರುವುದನ್ನು ಸ್ಥಳೀಯ ನಿವಾಸಿಗಳು ಖಚಿತಪಡಿಸಿದ್ದಾರೆ.

■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯರಿಗಿಂತ ಭೂ ಮಾಫಿಯಾ ಶಕ್ತಿಶಾಲಿಯೇ...

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಸರ್ಕಾರಿ ಭೂಮಿಯನ್ನು ಒಂದೊಂದಾಗಿ ಕಬಳಿಸುತ್ತಿದ್ದು, ಮುಖ್ಯಮಂತ್ರಿಗಳಿಗಿಂತಲೂ ಈ ಭೂ ಮಾಫಿಯಾ ಶಕ್ತಿಶಾಲಿಯೇ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಪ್ರಶ್ನಿಸಿದರು.


ಸಿದ್ದರಾಮಯ್ಯ

ಕೆ.ಸಿ.ನಗರದ ಕೆರೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ ಜಿಲ್ಲಾಡಳಿತ ಮೌನ ವಹಿಸಿದೆ. ಇದನ್ನು ನೋಡಿದರೆ ಮುಖ್ಯಮಂತ್ರಿಗಿಂತಲೂ ಈ ಭೂ ಮಾಫಿಯಾ ಪ್ರಭಾವಶಾಲಿ ಎಂಬುದು ಸ್ಪಷ್ಟವಾಗುತ್ತದೆ ಎಂದು ಗಂಭೀರವಾಗಿ ಪ್ರಶ್ನಿಸಿದರು. ರಾಜಾರೋಷವಾಗಿ ಕೆರೆ ಜಾಗಕ್ಕೆ ಸುತ್ತ ತಂತಿ ಬೇಲಿ, ಕಾಂಪೌಂಡ್ ಹಾಕಲಾಗಿದೆ. ಸರ್ಕಾರಿ ಭೂಮಿ ಕಬಳಿಸಿದರೂ ಅಧಿಕಾರಿಗಳು

■6ನೇ ಪುಟಕ್ಕೆ

ಈ ಕೆರೆ ಒತ್ತುವರಿ ಇಂದು–ನಿನ್ನೆಯದಲ್ಲ

ಕೆ.ಸಿ.ನಗರದ ಕೆರೆ ಒತ್ತುವರಿಯ ಪ್ರಯತ್ನ ಇಂದು–ನಿನ್ನೆಯದಲ್ಲ. ಸುಮಾರು 10 ವರ್ಷದ ಹಿಂದೆಯೇ ಇದೇ ರೀತಿ ಕೆರೆ ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಲಾಗಿತ್ತು. ಆ ವೇಳೆ ಕುರುಬಾರಹಳ್ಳಿಯ ನಿವಾಸಿಗಳು ತೀವ್ರ ವಿರೋಧ ವ್ಯಕ್ತಪಡಿಸಿ ಪೊಲೀಸ್ ಠಾಣೆ ಮೆಟ್ಟಿಲು ಸಹ ಹತ್ತಿದ್ದರು. ಮಾ.19ರ 2015 ರಂದು ಇಂತಹ ಪ್ರಯತ್ನ ನಡೆದಾಗ ಅಂದು ಕೆರೆ ಉಳಿವಿಗಾಗಿ ತೀವ್ರ ರೀತಿಯ ಹೋರಾಟ ನಡೆದಿತ್ತು.

ಕುರುಬಾರಹಳ್ಳಿ ಮುಖಂಡರಿಗೆ ಸಂಕಷ್ಟ!

ತರುವಾಯ ಅಂದಿನ ಜಿಲ್ಲಾಧಿಕಾರಿಗಳು ಕಾಂಪೌಂಡ್ ಒಡೆದು ಒತ್ತುವರಿ ತೆರವುಗೊಳಿಸಿದರು. ಈಗ ಕೆರೆ ಜಾಗವನ್ನು ಕಬಳಿಸುವ ಮತ್ತೊಂದು ಪ್ರಯತ್ನ ನಡೆದಾಗಲೂ ಕಳೆದ ಜ.21ರಂದು ಕುರುಬಾರಹಳ್ಳಿ ನಿವಾಸಿ ಜೆ.ಪ್ರಕಾಶ್ ನಜರ್‌ಬಾದ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದರೆ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ದೂರು ಸ್ವೀಕರಿಸಿದ್ದಕ್ಕೆ ಎನ್‌ಸಿಆರ್ ಕೂಡ ನೀಡದೇ, ವಿಚಾರಣೆ ನಡೆಸುವುದಾಗಿ ಹೇಳಿ ಕಳಿಸಿದರೆಂದು ಪ್ರಕಾಶ್ ದೂರಿದ್ದಾರೆ. ಇದು ನಮ್ಮೂರಿನ ಕೆರೆ, ಬಾಯಾರಿ ಬಳಲಿದ ಜಾನುವಾರುಗಳು ನೀರು ಕುಡಿಯಲು ಆಶ್ರಯಿಸಿದಂತಹ ಕೆರೆ. ಇದನ್ನು ಕಬಳಿಸುವ ಯತ್ನ ನಿರಂತರವಾಗಿ ನಡೆಯುತ್ತಿದೆ. ಹಿಂದೊಮ್ಮೆ ಕಬಳಿಕೆ ಯತ್ನದ ವಿರುದ್ಧ ಹೋರಾಟಕ್ಕೆ ಮುಂದಾದ ಗ್ರಾಮದ ಮುಖಂಡರ ವಿರುದ್ಧ ಪೊಲೀಸರು ಕೇಸ್ ಹಾಕಿ ಕೋರ್ಟ್ ಅಲೆಯುವಂತಾಯಿತು. ಇತ್ತೀಚೆಗೆ ಖುಲಾಸೆ ಆಗಿ ಬಂದಿದ್ದಾರೆ ಎಂದು ಜೆ.ಪ್ರಕಾಶ್ ತಮ್ಮ ಅಳಲು ತೋಡಿಕೊಂಡರು. ಶಾಸಕ ಶ್ರೀವತ್ಸ ಅವರು ಮಾಧ್ಯಮ ಗೋಷ್ಠಿ ನಡೆಸಿದ ಬಳಿಕ ಎಚ್ಚೆತ್ತ ಪ್ರಕಾಶ್, ತಾವು ಜ.21ರಂದು ನೀಡಿದ್ದ, ದೂರಿನ ಬಗ್ಗೆ ನಜರ್‌ಬಾದ್ ಪೊಲೀಸರನ್ನು ಪ್ರಶ್ನಿಸಿದ್ದಾರೆ. ಅಲ್ಲದೆ, ಅದಕ್ಕೆ ಸಂಬಂಧಿಸಿದಂತೆ ಎನ್‌ಸಿಆರ್ ಪಡೆದುಕೊಂಡಿರುವುದಾಗಿ ಗ್ರಾಮದ ಪ್ರಕಾಶ್ ತಿಳಿಸಿದ್ದಾರೆ.


ಜೆ. ಪ್ರಕಾಶ್

ದೂರಿನ ವಿವರ: ಕುರುಬಾರಹಳ್ಳಿ ಸರ್ವೆ ನಂ.4ರಲ್ಲಿ 15–01–1971ರಲ್ಲಿ ಮಹಾರಾಜರ ಪರವಾಗಿ

■6ನೇ ಪುಟಕ್ಕೆ



ಮೈಸೂರು ಮಿತ್ರ ಶುಕ್ರವಾರ 13 ಫೆಬ್ರವರಿ 2026

ಕೊ.ನಾ.ಪುರುಷೋತ್ತಮರಿಗೆ ನುಡಿನಮನ



ಮೈಸೂರು,ಫೆ.12– ಶ್ರೀರಂಗಪಟ್ಟಣ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಶ್ರೀರಂಗಪಟ್ಟಣ ಯುವ ಜನ ಸೇವಾ ಸಬಲೀಕರಣ ಕಚೇರಿ ಆವರಣದಲ್ಲಿ ಮೊನ್ನೆ ನಿಧನ ಹೊಂದಿದ ಶಿಕ್ಷಕ, ಕವಿ ಕೊಡಗಹಳ್ಳಿ ಪುರುಷೋತ್ತಮ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶ್ರೀನಿವಾಸ್ ಸಿ.ಜೆ., ಶಾರದವಿಲಾಸ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ರಾಜೇಂದ್ರ ಪ್ರಸಾದ್ ಹೊನ್ನೆಲಗೆರೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ಧಲಿಂಗು, ಹಿರಿಯ ಶಿಕ್ಷಕರಾದ ಗಣಂಗೂರು ಮಂಜುನಾಥ್, ಚಿಕ್ಕಪಾಳ್ಯ ಪುರುಷೋತ್ತಮ್, ಸ್ವಾಮಿಗೌಡ, ಶೆಟ್ಟಿಳ್ಳಿ ಅಪ್ಪಾಜಿ, ಗಣಪತಿ, ಎಂ.ಬಿ.ರಾಮೇಗೌಡ, ಹೆಚ್.ಟಿ.ರಾಜಶೇಖರ್, ಗೌರಿಶಂಕರ್, ರವಿಕುಮಾರ್, ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀಮತಿ ವಾಣಿ, ಉಮಾಶಂಕರ್, ಗೋಪಾಲಕೃಷ್ಣ, ಗಂಜಾಂ ಬಾಲು, ನಗುವನಹಳ್ಳಿ ಪ್ರಕಾಶ್, ಬೆಳವಾಡಿ ಹರೀಶ್, ಸೈಯದ್‌ಖಾನ್, ನಾರಾಯಣ ಸ್ವಾಮಿ, ಶೆಟ್ಟಿಳ್ಳಿ ರಾಜಶೇಖರ್, ಬಸವರಾಜು ಸಾಹಿತ್ಯಾಭಿಮಾನಿಗಳು ಭಾಗವಹಿಸಿದ್ದರು.

ಜೆಎಸ್‌ಎಸ್ ಪದವಿ ಕಾಲೇಜಿಗೆ ದ್ವಿತೀಯ ಬಹುಮಾನ



ಮೈಸೂರು ನಗರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ ಕ್ರೈಸ್ಟ್ ಕಪ್ 2025–26 ನೇ ಸಾಲಿನ ಅಂತರ ಕಾಲೇಜುಗಳ ಪುರುಷರ ಫುಟ್‌ಬಾಲ್ ಸ್ಪರ್ಧೆಯಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿದ್ದಾರೆ. ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಎಂ. ಕಾರ್ತಿಕ್, ಸಿ.ಎಸ್. ನಿರಂಜನ್ ಹಾಗೂ ಬೋಧಕ, ಬೋಧಕೇತರರು ಅಭಿನಂದಿಸಿದ್ದಾರೆ.

ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಚುನಾವಣೆ ರದ್ದು

ಮೈಸೂರು, ಫೆ.12– ಮೈಸೂರು ವಿದ್ಯಾರಣ್ಯಪುರಂನ ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಆಡಳಿತ ಮಂಡಳಿಗೆ ಅವಿರೋಧವಾಗಿ ನಿರ್ದೇಶಕರ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಫೆ.14ರಂದು ನಿಗದಿ ಯಾಗಿದ್ದ ಚುನಾವಣೆ ಯನ್ನು ರದ್ದುಗೊಳಿಸಲಾಗಿದೆ ಎಂದು ಸಂಘದ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಸದಸ್ಯರು: ಸಂಘದ 2026–2031ನೇ ಸಾಲಿನ ಆಡಳಿತ ಮಂಡಳಿಯ 11 ನಿರ್ದೇಶಕರ ಸ್ಥಾನಗಳಿಗೆ ಸಾಮಾನ್ಯ ಕ್ಷೇತ್ರದಿಂದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ಆರ್.ಸತ್ಯ ನಾರಾಯಣ, ಕೆ.ಆರ್.ಮಂಜುನಾಥ್, ಹೆಚ್.ಎಸ್.ಶ್ರೀಕಂಠಶರ್ಮ, ವಿ.ವೆಂಕಟೇಶ್, ಕೆ.ಆರ್.ಉದಯಕುಮಾರ್, ಮಹಿಳಾ ಮೀಸಲು ಕ್ಷೇತ್ರದಿಂದ ರೇಣುಕಾ ವಿಶ್ವನಾಥ್, ಅನುಸೂಯ ಚಂದ್ರಶೇಖರ್, ಹಿಂದುಳಿದ ವರ್ಗ ಪ್ರವರ್ಗ ಎ ಕ್ಷೇತ್ರದಿಂದ ವಿ.ತೇಜರಾಜ್, ಶಿವ ಕುಮಾರ್ ಹಾಗೂ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಬಿ.ಟಿ.ರಾಮಚಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪ್ರಕಟಿಸಿದ್ದಾರೆ.

ಅಭಿನಂದನೆ



ಮೈಸೂರಿನ ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನೂತನ ಪ್ರಿನ್ಸಿಪಾಲ್ ಮತ್ತು ಅಂಕಣಕಾರ ಗುಬ್ಬಿಗೂಡು ರಮೇಶ್ ಅವರು ಶಾಸಕ ಟಿ.ಎಸ್. ಶ್ರೀವತ್ಸ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು. ಈ ವೇಳೆ ಇತರರು ಉಪಸ್ಥಿತರಿದ್ದರು

ಮಹಾಶಿವರಾತ್ರಿಯಂದು ವಿಶೇಷ ಪೂಜೆ

ಮೈಸೂರು, ಫೆ.12– ಮೈಸೂರಿನ ಕುವೆಂಪುನಗರ, 2ನೇ ಹಂತ, ಕೆಹೆಚ್‌ಬಿ ಕಾಲೋನಿ ಯಲ್ಲಿರುವ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ (ಫೆ.15)ಯಂದು ವಿಶೇಷ ಪೂಜೆ ನೆರವೇರಲಿದೆ.ಅಂದು ಬೆಳಗ್ಗೆ 6ಕ್ಕೆ ರುದ್ರಾಭಿಷೇಕ, ಮಹಾ ಮಂಗಳಾರತಿ, ಸಂಜೆ 6ಕ್ಕೆ ಮೊದಲನೇ ಜಾವದ ಪೂಜೆ, ರಾತ್ರಿ 9ಕ್ಕೆ ಎರಡನೇ ಜಾವದ ಪೂಜೆ, ಮಧ್ಯರಾತ್ರಿ 12ಕ್ಕೆ ಮೂರನೇ ಜಾವದ ಪೂಜೆ ಹಾಗೂ ಮುಂಜಾನೆ 4ಕ್ಕೆ ನಾಲ್ಕನೇ ಜಾವದ ಪೂಜೆಯೊಂದಿಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಭಜನೆ ಹಾಗೂ ನೃತ್ಯ ಕಾರ್ಯಕ್ರಮಗಳು ಜರುಗಲಿದ್ದು, ಹೆಚ್ಚಿನ ಭಕ್ತರು ಪಾಲ್ಗೊಳ್ಳುವಂತೆ ದೇವಸ್ಥಾನದ ಎನ್.ಪ್ರಕಾಶ್ (9448092818) ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸೋಮೇಗೌಡ ನಿಧನ



ಕೆ.ಆರ್.ನಗರ, ಫೆ.12– ತಾಲೂಕಿನ ಹೆಬ್ಬಾಳು ಗ್ರಾಮದ ನಿವಾಸಿ, ನಿವೃತ್ತ ಮುಖ್ಯಶಿಕ್ಷಕ ಸೋಮೇಗೌಡ(82) ಅವರು ಗುರುವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ತೋಟದಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದ್ದಾರೆ.

ಎಂ.ಬಿ.ವಿಜಯಕುಮಾರ್



ಮೈಸೂರು, ಫೆ.12– ಮಾಜಿ ಶಾಸಕ ದಿವಂಗತ ಕೆ.ಕೆಂಪೀರೇಗೌಡರ ಅಳಿಯ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಕೆ.ವನಜ ಅವರ ಪತಿ ಎಂ.ಬಿ.ವಿಜಯ ಕುಮಾರ್(76) ಅವರು ಗುರುವಾರ ಬೆಳಗ್ಗೆ ನಿಧನರಾದರು. ಇವರು ಪತ್ನಿ, ಪುತ್ರ ವಿ.ರವಿಕುಮಾರ್, ಪುತ್ರಿ ವಿ.ರಂಜಿತ, ಭಾಮೈದ ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಚೇಗೌಡನ ಕೊಪ್ಪಲಿನ ರುದ್ರಭೂಮಿಯಲ್ಲಿ ಸಂಜೆ 5 ಗಂಟೆಗೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಕೆ.ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಜಿಪಂ ಮಾಜಿ ಸದಸ್ಯರಾದ ಲಲಿತಾ ಜಿ.ಟಿ.ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಚೆಲುವರಾಜು, ನಿರ್ದೇಶಕರಾದ ಓಂಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯ ಕೆ.ಟಿ.ಚೆಲುವೇಗೌಡ, ಭರತೇಶ್ ಮತ್ತಿತರರು ಅಂತಿಮ ದರ್ಶನ ಪಡೆದರು.

ನಾಳೆ ಮೈಸೂರಲ್ಲಿ ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ

60 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ, ಸಕಲ ಸಿದ್ಧತೆ

ಮೈಸೂರು, ಫೆ.12(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವತಿಯಿಂದ ಫೆ.14ರಂದು ಬೆಳಗ್ಗೆ 9 ಗಂಟೆಯಿಂದ ಆರಂಭವಾಗುವ 'ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ' ಕಾರ್ಯಕ್ರಮದಲ್ಲಿ 60 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಅದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನ ದಲ್ಲಿ ಹನುಮಾನ್ ಚಾಲೀಸಾ ಪಾರಾಯಣ ಕಾರ್ಯಕ್ರಮಕ್ಕಾಗಿ ಮಾಡುತ್ತಿರುವ ಸಿದ್ಧತಾ ಕಾರ್ಯ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಅಂತಿಮ ಹಂತದ ಸಿದ್ಧತಾ ಕಾರ್ಯ ನಡೆಯುತ್ತಿದೆ ಎಂದರು.

ಫೆ.14ರಂದು ಬೆಳಗ್ಗೆ 9ರಿಂದಲೇ ಗಣಪತಿ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ಹನುಮಾನ್ ಚಾಲೀಸಾ ಪಾರಾಯಣ ಕಾರ್ಯಕ್ರಮ ಆರಂಭವಾಗುತ್ತದೆ. ಈಗಾಗಲೇ ವಿವಿಧ ಸಂಘ ಸಂಸ್ಥೆಗಳ ಮೂಲಕ ಮೈಸೂರಿನ ಎಲ್ಲಾ ಕಡೆ ಪ್ರಚಾರ ಮಾಡಲಾಗಿದ್ದು, ಕಾರ್ಯಕ್ರಮದಲ್ಲಿ 60 ಸಾವಿರಕ್ಕಿಂತ ಹೆಚ್ಚಿನ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಅಲ್ಲದೆ, ಪ್ರತಿವರ್ಷ ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯಲು ವಿವಿಧೆಡೆಯಿಂದ 15 ಸಾವಿರಕ್ಕೂ ಹೆಚ್ಚು ಮಂದಿ ಬರುತ್ತಾರೆ. ಈ ವರ್ಷ ಆಶ್ರಮಕ್ಕೆ ಬರುವ ಭಕ್ತರು ಹನುಮಾನ್ ಚಾಲೀಸಾ ಪಾರಾಯಣ ಕಾರ್ಯಕ್ರಮಕ್ಕೆ ಬಂದು ಶ್ರೀಗಳ ಆಶೀರ್ವಾದ ಪಡೆಯಲಿದ್ದಾರೆ ಎಂದರು.

ಪೊಲೀಸ್ ಬಂದೋಬಸ್ತ್: ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವು ದರಿಂದ, ಸುರಕ್ಷತೆ ಮತ್ತು ಶಿಸ್ತು ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿದೆ. ಮಹಾರಾಜ ಕಾಲೇಜು ಮೈದಾನದಲ್ಲಿ ಭಕ್ತರ ಉಪಯೋಗಕ್ಕಾಗಿ ಶಾಮಿಯಾನ (ಪೆಂಡಾಲ್) ಅಳವಡಿಸಲಾಗಿದೆ. 45 ಸಾವಿರ ಕುರ್ಚಿ ಹಾಕಲಾಗುತ್ತಿದೆ. ಭಕ್ತರನ್ನು ನಿಯಂತ್ರಿಸಲು ಹಾಗೂ ಮಾರ್ಗದರ್ಶನ ನೀಡಲು 800 ಮಂದಿ ಸ್ವಯಂ ಸೇವಕರು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹನುಮಾನ್ ಚಾಲೀಸಾ ಪಾರಾಯಣದ ಕಾರ್ಯಕ್ರಮಕ್ಕಾಗಿ ಮಾಡಿಕೊಳ್ಳುತ್ತಿರುವ ಸಿದ್ಧತಾ ಕಾರ್ಯವನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಗಣಪತಿ ಆಶ್ರಮದ ಟ್ರಸ್ಟಿಗಳು ಪರಿಶೀಲನೆ ನಡೆಸಿದರು.

ಮೂಲಸೌಕರ್ಯ: ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ ಹಾಗೂ ಪ್ರವೇಶ ದ್ವಾರದಲ್ಲಿಯೇ ನೀರಿನ ಬಾಟಲ್ ವಿತರಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವವರ ಅರಸು ಬೋರ್ಡಿಂಗ್ ಶಾಲೆ ಹಾಗೂ ಯುವರಾಜ ಕಾಲೇಜು ಆವರಣದಲ್ಲಿ ವಾಹನ ನಿಲುಗಡೆ ಅವಕಾಶ ಕಲ್ಪಿಸಲಾಗಿದೆ. ಭಕ್ತರಿಗೆ ಯಾವುದೇ ಲೋಪ ಆಗದಂತೆ ಕ್ರಮ ಕೈಗೊಂಡಿದ್ದು ಪಾರಾಯಣ ಸ್ಥಳದಲ್ಲೇ ಅನ್ನ ಪ್ರಸಾದ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಇದಲ್ಲದೆ ಅಗ್ನಿ ಶಾಮಕ ವಾಹನ ಹಾಗೂ ಆಂಬುಲೆನ್ಸ್ ವ್ಯವಸ್ಥೆ ಗಳನ್ನು ಸಹ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉದ್ಯಮಿ ರಾಮೇಗೌಡ, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಆಶ್ರಮದ ಟ್ರಸ್ಟಿಗಳಾದ ಪ್ರಮೋದ್, ರಮೇಶ್, ವಿನಯ ಬಾಬು, ವಾಸು, ವಿಜಯ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಉದ್ಯಮಿ ಅಂಜಲಿ ಬಿ.ಗುಪ್ತಾಗೆ ಮಿಸ್ ಪ್ಲಸ್ ಸೈಜ್ ಇಂಡಿಯಾ ಕಿರೀಟ

ದೇಶದಾದ್ಯಂತ ಭಾಗವಹಿಸಿದ್ದ ಸ್ಪರ್ಧಿಗಳು

ಮೈಸೂರು,ಫೆ.12(ಜಿಎ)–ಮೈಸೂರಿನ ಉದ್ಯಮಿ, ಕ್ರೀಡಾಪಟು ಅಂಜಲಿ ಬಿ. ಗುಪ್ತಾ ಇತ್ತೀಚೆಗೆ ಚಂಡೀಗಢದಲ್ಲಿ ನಡೆದ ಮಾವೆನ್ ಮಿಸ್ ಪ್ಲಸ್ ಸೈಜ್ ಇಂಡಿಯಾ ಸೀಸನ್ 8ರ ಕಿರೀಟವನ್ನು ತಮ್ಮದಾಗಿಸಿಕೊಂಡಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅಂಜಲಿ ಬಿ. ಗುಪ್ತಾ ತಮಗೆ ಲಭಿಸಿರುವ ಕಿರೀಟ ಮತ್ತು ಪ್ರಮಾಣ ಪತ್ರವನ್ನು ಪ್ರದರ್ಶಿಸಿ, ಮಾತನಾಡಿದ ಅವರು, ಚಂಡೀಗಢದ ಟ್ರೈಸಿಟಿ ಪ್ರದೇಶದಲ್ಲಿ ಮಾವೆನ್ ಮಿಸ್ ಪ್ಲಸ್ ಸೈಜ್ ಇಂಡಿಯಾ ನಡೆಸಿದ ಸ್ಪರ್ಧೆಯಲ್ಲಿ ದೇಶದ ಎಲ್ಲಾ ರಾಜ್ಯಗಳಿಂದ ಸ್ಪರ್ಧಿಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ನಡೆದ ಎಲ್ಲಾ ಸುತ್ತುಗಳನ್ನು ಉತ್ತಮವಾಗಿ ನಿರ್ವಹಿಸಿ, ಅಂತಿಮ ಸುತ್ತಿನಲ್ಲಿ ಮಿಸ್ ಪ್ಲಸ್ ಸೈಜ್ ಇಂಡಿಯಾ ಸೀಸನ್ 8ರ ಕೀರಿಟವನ್ನು ಪಡೆದುಕೊಂಡೆ ಎಂದರು.

ಈ ಸ್ಪರ್ಧೆಯಲ್ಲಿ ಈವರೆಗೂ ಕೇವಲ ಉತ್ತರ ಭಾರತದವರು ಮಾತ್ರ ಕಿರೀಟ ಪಡೆದುಕೊಳ್ಳುತ್ತಿದ್ದರು. ಆದರೆ, ಈ ಬಾರಿ ದಕ್ಷಿಣ ಭಾರತದಿಂದ ಪ್ರತಿನಿಧಿಸಿ, ಇದೇ ಮೊದಲ ಬಾರಿ ವಿಜೇತೆಯಾಗಿರುವುದು ಸಂತಸ ತಂದಿದೆ ಎಂದರು.

ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ದೇಶಾದ್ಯಂತದಿಂದ ಸುಮಾರು 50 ಮಂದಿ ಪಾಲ್ಗೊಂಡು 15 ಮಂದಿ ಅಂತಿಮ ಸುತ್ತು ಪ್ರವೇಶಿಸಿದರು. ಈ ವೇಳೆ ನಡೆದ ಕಠಿಣ ಪ್ರಶ್ನೋತ್ತರ ಸುತ್ತಿನಲ್ಲಿಯೂ ಉತ್ತಮ ಸಾಮರ್ಥ್ಯ ತೋರಿದ ಕಾರಣ ತಾವು ರಾಷ್ಟ್ರೀಯ ವಿಜೇತರಾಗಿ ಹೊರ ಹೊಮ್ಮಿ ಕಿರೀಟ ತಮ್ಮದಾಗಿಸಿ ಕೊಂಡಿದ್ದಾರೆ ವಿವರಿಸಿದರು.

ಮೈಸೂರಿನ ವೈಫೈಲ್ರೋನಿಕ್ಸ್ ಪ್ರೈವೇಟ್ ಲಿಮಿಟೆಡ್ ಮಾಲೀಕರಾಗಿದ್ದು, ಕಿಕ್ ಬಾಕ್ಸಿಂಗ್ ಕ್ರೀಡಾ ಪಟುವೂ ಆಗಿದ್ದು, ಇಂದು ಎಲ್ಲರಲ್ಲೂ ದೇಹದ ಬೆಳವಣಿಗೆಯಲ್ಲಿ ವ್ಯತ್ಯಾಸ ಇದೆ. ಈ ಹಿನ್ನೆಲೆಯಲ್ಲಿ ವಿವಿಧ ಶಾಲೆ–ಕಾಲೇಜು, ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ನಾನು ಅವರಿಗೆ ಪ್ರೇರಣ ಭಾಷಣ ಮಾಡುವ ಮೂಲಕ ಮನಪರಿವರ್ತನೆ ಮಾಡುತ್ತಿದ್ದೇನೆ ತಿಳಿಸಿದರು.

ಮೈಸೂರಿನಲ್ಲಿ ಕುಮಾರವ್ಯಾಸ ಜಯಂತಿ; ಕಾವ್ಯಾಧಾರಿತ ಕೃತಿಗಳ ಪ್ರದರ್ಶನ

ಮೈಸೂರು, ಫೆ. 12– ಫೆ. 15 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಮೈಸೂರಿನ ವಿಜಯನಗರದ ಒಂದನೇ ಹಂತ ದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು ಭವನ ದಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು ಮೈಸೂರು ಜಿಲ್ಲಾ ಘಟಕ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕುಮಾರವ್ಯಾಸ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾ ಕನ್ನಡ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ಖ್ಯಾತಮಾರನಹಳ್ಳಿ ಎಂ. ಮಹೇಶ, ಕೆಂಗೇರಿ ಉಪನಗರದ ಸುರಾನ ಸಂಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಗೀತಾ ಡಿ. ಆಗಮಿಸುವರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಗಮಕ ಕಲಾ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ. ಕೃ. ಪಾ. ಮಂಜುನಾಥ್ ಪ್ರಾಸ್ತಾವಿಕ ನುಡಿಯೊಂದಿಗೆ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಕುಮಾರವ್ಯಾಸ ಭಾರತ ಕಾವ್ಯಾಧಾರಿತ ಕೃತಿಗಳ ಅವಲೋಕನ ಮತ್ತು ಪ್ರಾತ್ಯಕ್ಷಿಕೆಯನ್ನು ವಿಶೇಷವಾಗಿ ಆಯೋಜಿಸಿದ್ದು ತತ್ಸಂಬಂಧಿ ಕೃತಿಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಮೈಸೂರಿನ ಹಿರಿಯ ಮತ್ತು ಕಿರಿಯ ಗಮಕಿಗಳಿಂದ ಕುಮಾರವ್ಯಾಸ ಭಾರತದ ಪದ್ಯಗಳ ವಾಚನವಿದ್ದು ಆಸಕ್ತ ಗಮಕಿಗಳು ಮತ್ತು ಪದ್ಯ ವಾಚನ ಮಾಡುವವರು ಗಮಕ ಕಲಾ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ. ಕೃ.ಪಾ. ಮಂಜುನಾಥ್ ಅವರನ್ನು ಮೊ. 9341392624 ಸಂಪರ್ಕಿಸಲು ಕೋರಲಾಗಿದೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.2.2026 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಶ್ರೀ ಜಯದೇವ ಹೃದ್ರೋಗ ಸಂಸ್ಥೆ :** ವೀರ ಯೋಧರಿಗೆ ನಮನದ ಅಂಗವಾಗಿ ರಕ್ತದಾನ ಶಿಬಿರ, ಉದ್ಘಾಟನೆ : ಲೆಫ್ಟಿನೆಂಟ್ ಕರ್ನಲ್ ವೈ.ಕೆ. ಸಂಜೀವ್, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಶ್ರೀಮತಿ ಡಾ. ಗೀತಾ, ಟಿಟಿಎಲ್ ಕಾಲೇಜು ಪ್ರಿನ್ಸಿಪಾಲ್ ಬಿ.ವಿ. ಪ್ರಶಾಂತ್, ಕೆ.ಪಿ. ದಿವಾಕರ್, ನೀಲಕಂಠ ಕುಮಾರ ಶೆಟ್ಟಿ, ಹೆಚ್.ಎಸ್. ನಂಜುಂಡಸ್ವಾಮಿ, ಎಸ್. ನಟರಾಜು, ಸಿ.ಕೆ. ಬಸಪ್ಪ, ಸ್ಥಳ: ಟಿಟಿಎಲ್ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 8.30 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಶೇಷಾದ್ರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ :** ನೀಡ್ಸ್ ಆಫ್ ಎಐ ಟೂಲ್ಸ್ ಫಾರ್ ಹಜಾರ್‌ಡಸ್ ಮೆಟೀರಿಯಲ್ಸ್ ಮ್ಯಾನೇಜ್‌ಮೆಂಟ್ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ವಿವಿ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಡಾ. ಆರ್. ವಿಶ್ವನಾಥ್, ಅಧ್ಯಕ್ಷತೆ : ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಸ್ಥಳ: ಸೆಮಿನಾರ್ ಹಾಲ್, ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕಡಕೊಳ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿ ನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಮ.ಸಿ. ನಾರಾಯಣ ಅಭಿಮಾನಿ ಬಳಗ, ದೇವರತ್ನ ಫೌಂಡೇಷನ್ :** ಮ.ಸಿ. ನಾರಾಯಣ ವಿರಚಿತ ಖಂಡಾಯಗಳು ಮತ್ತು ಶ್ರೀ ಮಾದಾರ ಚನ್ನಯ್ಯ ಶರಣರುಗಳು 'ಕುರುಬನಕಟ್ಟೆ ಶ್ರೀ ಕ್ಷೇತ್ರ' ಪುಸ್ತಕಗಳ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ, ಉದ್ಘಾಟನೆ : ಶ್ರೀ ಮಹರ್ಷಿ ವಾಲ್ಮೀಕಿ ವಿವಿ, ರಾಯಚೂರು ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ, ಪುಸ್ತಕಗಳ ಬಿಡುಗಡೆ : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕ ಪ್ರೊ. ಕೆ. ಸದಾಶಿವ, ಮುಖ್ಯ ಅತಿಥಿಗಳು : ಎನ್. ಮುನಿರಾಜು, ಅರಕಲವಾಡಿ ನಾಗೇಂದ್ರ, ಎಂ. ಶಿವಪ್ರಸಾದ್, ಡಾ. ಸಿ. ರಾಮಸ್ವಾಮಿ, ಹೆಚ್.ಕೆ. ಸೋಮಶೇಖರ್, ಅಂಬಣ್ಣ ಅರೋಲಿಕರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ :** ಕಾರ್ಪೋರೇಟ್ ಕಾಂಪಿಟೆನ್ಸಿ ಬಿಲ್ಡಿಂಗ್ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜ, ಅಧ್ಯಕ್ಷತೆ : ಬಿಮ್ಸ್ ಅಧ್ಯಕ್ಷ ಪ್ರೊ. ಆರ್. ಮಹೇಶ್, ಉಪಸ್ಥಿತರು : ಪ್ರೊ. ಡಿ. ಆನಂದ್, ಪ್ರೊ. ಎಸ್.ಜೆ. ಮಂಜುನಾಥ್, ಪ್ರೊ. ಎಂ. ಅಮೂಲ್ಯ, ಸ್ಥಳ: ಯೂನಿವರ್ಸಿಟಿ ಕೆರಿಯರ್ ಹಬ್, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ದಾರಿ ಫೌಂಡೇಷನ್, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ–ಮುಕ್ತ ಸಂವಾದ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಪಿ. ಬೆಟ್ಟೇಗೌಡ, ವಿದ್ವಾಂಸ ಪ್ರೊ. ರಾಜಪ್ಪ ದಳವಾಯಿ ಅವರಿಂದ ಸಾಹಿತ್ಯ ಮತ್ತು ಸಿನಿಮಾ ಕುರಿತು ಉಪನ್ಯಾಸ, ಉಪಸ್ಥಿತರು : ಡಾ. ಆರ್. ಗುರುಸ್ವಾಮಿ, ಡಾ. ಎಸ್.ವಿ. ಮುರಳೀಧರ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 11ಕ್ಕೆ
- **ಮೈಸೂರು ವಿಶ್ವವಿದ್ಯಾನಿಲಯ :** ಡಾ. ಲಕ್ಷ್ಮಮ್ಮ ಅವರಿಂದ ಗ್ರೋವಿಂಗ್ ಥ್ರೂ ಎಜುಕೇಷನ್ : ಎಕ್ಸ್‌ಪೀರಿಯೆನ್ಸ್ ಫ್ರಂ ಮೈ ಲೈಫ್ ಅಂಡ್ ಕೆರಿಯರ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪ್ರೊ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ.
- **ಭೂಮಿಗಿರಿ ಪ್ರಕಾಶನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ಸಾಹಿತಿ ದಿವಂಗತ ಮಳಲಿ ವಸಂತಕುಮಾರ್ ಅವರ ಪತ್ನಿ ದಿವಂಗತ ಶಾಂತ ಮಳಲಿ ವಸಂತಕುಮಾರ್ ಅವರಿಗೆ ನುಡಿನಮನ, ಉಪಸ್ಥಿತರು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಾಹಿತಿ ಡಾ. ಸಿಪಿಕೆ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಭೂಮಿಗಿರಿ ಪ್ರಕಾಶನದ ಎನ್. ಬೆಟ್ಟೇಗೌಡ, ಪ್ರೊ ಶ್ರೀಮತಿ ಪದ್ಮಾಶೇಖರ್, ಸಾಹಿತಿ ಡಾ. ಶಿವಬಸಪ್ಪ ಹೊರೆಯಾಲ, ಶ್ರೀಮತಿ ಯಶಿಕ, ಯಶೋಧ ರಾಮಕೃಷ್ಣ, ಮೋಹನ್ ಪಾಳೇಗಾರ್, ಶ್ರೀಮತಿ ಲತಾ ಮೋಹನ್, ನೀಲಕಂಠನಹಳ್ಳಿ ತಮ್ಮಣ್ಣಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ ಮೊದಲನೇ ಹಂತ, ಸಂಜೆ 4ಕ್ಕೆ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಚಿಕ್ಕಮಳಲಿ ಆರ್ ಮಹಾದೇವ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕರಿಮುದ್ದನ ಹಳ್ಳಿ, ಹುಣಸೂರು ತಾಲೂಕು. ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 4.30 ರಿಂದ.
- **ಅರ್ಕಧಾಮ :** ಅರ್ಕಧಾಮದಲ್ಲಿ ಆದಿ ಪೂಜಿತನ ಆರಾಧನೋತ್ಸವ, ಶ್ರೀ ಅರ್ಕ ಮಹಾಗಣಪತಿ ಪ್ರಾಣ ಪ್ರತಿಷ್ಠಾಪನೆಯ ದ್ವಿತೀಯ ವಾರ್ಷಿಕೋತ್ಸವದ ಸುದಿನ, ಸಂಜೆ 5.30ಕ್ಕೆ ಪ್ರಧಾನ ಅರ್ಕ ಮಹಾಗಣಪತಿಗೆ ಶಾಸ್ತ್ರೋಕ್ತವಾದ ಪೂಜೆ, ಗಣಪತಿ ಆರಾಧನೆ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ:ಅರ್ಕಧಾಮ, ಬೋಗಾದಿ ಗದ್ದಿಗೆ ರಸ್ತೆ.
- **ಬನಶಂಕರಿ ವಿದ್ಯಾಸಂಸ್ಥೆ :** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ವಿದ್ಯಾಸಂಸ್ಥೆ ಗೌರವಾಧ್ಯಕ್ಷ ಎ. ಗಂಗಾಧರ, ಪ್ರಾಸ್ತಾವಿಕ ನುಡಿ : ಪಾಳ್ಯ ಸುರೇಶ್, ಉಪಸ್ಥಿತರು : ಬಿ. ಬಸವರಾಜು, ಜವರಪ್ಪ, ಎಸ್. ಗುರುಸ್ವಾಮಿ, ಸ್ಥಳ: ಶಾಲಾ ಆವರಣ, ವಾಜಮಂಗಲ, ಸಂಜೆ 5.30ಕ್ಕೆ.
- **ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು :** ಜೋ ಫೆಸ್ಟ್–2026, ಅಧ್ಯಕ್ಷತೆ : ಮಂಡ್ಯ ಬಿಷಪ್ ಮಾರ್ ಸೆಬಾಸ್ಟಿಯನ್ ಅದಯಂತ್ರಾತ್, ಉಪಸ್ಥಿತರು : ರೆ. ಫಾ. ಎಡ್ವರ್ಡ್ ವಿಲಿಯಮ್ ಸಲ್ಡಾನಾ, ಖಜಾಂಚಿ ರೆ. ಫಾ. ಎ. ನವೀನ್ ಕುಮಾರ್, ಹಿನ್ನಲೆ ಗಾಯಕ ಜಸ್‌ಕರಣ್ ಸಿಂಗ್, ಕಾಲೇಜು ಪ್ರಿನ್ಸಿಪಾಲ್ ಡಾ. ಹೆಚ್.ಎನ್. ಚಂದ್ರಶೇಖರ, ಸಿಇಓ ಸೆಬಿ ಮಾವ್ಲಿ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ವಿಶ್ವ ಶಾಂತಿಗಾಗಿ ಸರ್ವ ಧರ್ಮ ಸಭೆ, ಸಾನ್ನಿಧ್ಯ : ಮೈಸೂರು ಉಪ ವಲಯ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಡಾ. ಲಕ್ಷ್ಮೀಜಿ, ಆಶೀರ್ವಚನ : ಅರಮೇರಿ ಕಳಂಚೇರಿ ಮಠದ ಪೀಠಾಧ್ಯಕ್ಷ ಶ್ರೀ ಶಾಂತ ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಮುಖ್ಯ ಅತಿಥಿಗಳು : ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್ ಸಾಹೇಬ್, ಮೈಸೂರು ಡಯಾಸೀಸ್ ಬಿಷಪ್ ರೆ. ಡಾ. ಫ್ರಾನ್ಸಿಸ್ ಸೆರ್ರಾವ್, ರುಹುಲ್ಲ ಖಾದಿರಿ ಸಿಲ್ಸಿಲಾ ಸೂಫಿ ಮೊಹಮ್ಮದ್ ರುಹುಲ್ಲಾ ಶಾಹ್ ಖಾದಿರಿ, ಶ್ರೀ ಗುರುಸಿಂಗ್ ಸಭಾ, ಗುರುಸ್ವಾರದ ಜನರಲ್ ಸೆಕ್ರೆಟರಿ ಹರ್‌ಪ್ರೀತ್ ಸಿಂಗ್‌ಜಿ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ.ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಡಾ.ಪಿ.ಎಸ್. ಮುರಳೀಧರ್ ಹಾಗೂ ಎಂ.ಆರ್. ಸುಧಾ, ವ್ಯಾಖ್ಯಾನ–ಡಾ. ಬಿ.ವಿ. ವಸಂತ ಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನಮ್ಮ ಆರೋಗ್ಯ, 9.40 ಗಾಂಧೀ ಸ್ಮೃತಿ, 9.45 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎಸ್. ಹೇರಂಬಾ ಮತ್ತು ಕೆ.ಎಸ್. ಹೇಮಂತ್– ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ರಜತ್ .ಎಸ್, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ನಾರಾಯಣ ಮತ್ತು ಎಂ.ಎಸ್. ಗೌತಮ್–ಯುಗಳ ನಾದಸ್ವರ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ ಹವಾಮಾನ ಮಿತ್ರ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ, ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಕೆ. ಸರಸ್ವತಿ, 10.00 ಆಕಾಶವಾಣಿ ಸಂಗೀತ ಸಮ್ಮೇಳನ, ಶ್ರೀಮತಿ ಶಕುಂತಲ ಬಾರ್ನೆ–ಕೊಂಕಣಿ ಲಘು ಸಂಗೀತ, ಪ್ರಾಚಿ ಜಾತ್ರಾ– ಮಾರಾಠಿ ನಾಟ್ಯ ಗೀತ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಕ್ಕೆ ಅನುಮತಿ

ಬೆಂಗಳೂರು: ಯುವಕರು ಹಾಗೂ ಕ್ರಿಕೆಟ್ ಕ್ರೀಡೆಯ ಹಿತದೃಷ್ಟಿಯಿಂದ ಇನ್ನು ಮುಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ಆಯೋಜನೆಗೆ ಸರ್ಕಾರ ಅನುಮತಿ ನೀಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕ್ರೀಡಾಂಗಣದ ಸಾಮರ್ಥ್ಯದಷ್ಟು ಮಾತ್ರ ಟಿಕೆಟ್ ಮಾರಾಟ, ಜನದಟ್ಟಣೆ ಅಗತ್ಯಕ್ಕೆ ತಕ್ಕಂತೆ ದೊಡ್ಡ ಗೇಟ್‌ಗಳ ಅಳವಡಿಕೆ, ಆಂಬುಲೆನ್ಸ್ ನಿಯೋಜನೆ ಸೇರಿದಂತೆ ಕುನ್ಹಾ ಅವರ ವರದಿಯ ಶಿಫಾರಸ್ಸುಗಳ ಅನುಗುಣವಾಗಿ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂಬ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕ್ರಿಕೆಟ್ ಪ್ರಿಯರಿಗೆ ಇದೊಂದು ಶುಭ ಸುದ್ದಿಯಾಗಿದ್ದು, ಇಷ್ಟು ದಿನಗಳ ಕಾಲ ಅನುಭವಿಸಿದ ನೋವಿಗೆ ವಿಷಾದಿಸುತ್ತೇನೆ. ನಾವು ಒಂದು ಪ್ರತಿಷ್ಠಿತ ಪಂದ್ಯಾವಳಿ ಕಳೆದುಕೊಂಡಿದ್ದೇವೆ. ಮುಂದಿನ ಬಾರಿ ನಾವು ಜಾಗೃತರಾಗಿರೋಣ ಎಂದು ತಿಳಿಸಿದರು.

ನಾಳಿನ ಹನುಮಾನ್ ಚಾಲೀಸ್ ಪಾರಾಯಣ ಮಹಾ ಯಜ್ಞ ಯಶಸ್ವಿಗೊಳಿಸಲು ಮನವಿ

ಮೈಸೂರು,ಫೆ.12(ಜಿಎ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಫೆ.14 ರಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವತಿಯಿಂದ ಲೋಕ ಕಲ್ಯಾಣಾ ರ್ಥವಾಗಿ ಆಯೋಜಿಸಿರುವ ಹನುಮಾನ್ ಚಾಲೀಸ್ ಪಾರಾಯಣ ಮಹಾ ಯಜ್ಞ ದಲ್ಲಿ ನಗರದ ಜನತೆ ಶ್ರದ್ಧಾ ಭಕ್ತಿಯಿಂದ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸ ಬೇಕೆಂದು ಡಿಟಿಎಸ್ ಪ್ರತಿಷ್ಠಾನದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹನುಮಾನ್ ಚಾಲೀಸ್ ಪಾರಾ ಯಣ ಸರ್ವ ಸಂಕಷ್ಟ ಪರಿಹಾರ ಮಾಡು ತ್ತದೆ. ಶ್ರೀಗಳು ಸುಮಾರು 10 ವರ್ಷ ಹಿಂದೆಯೂ ಹನುಮಾನ್ ಚಾಲೀಸ್ ಪಾರಾ ಯಣ ನಗರದಲ್ಲಿ ಆಯೋಜಿಸಿದ್ದರು. ಅದ ರಲ್ಲಿ ಪಾಲ್ಗೊಂಡ ವರಿಗೆ ಸುಕೃತಗಳು ಲಭಿಸಿವೆ. ಹೀಗಾಗಿ ಲೋಕ ಶಾಂತಿ, ಸುಭಿಕ್ಷೆಯಿಂದ ಇರಲೆಂದು ಈ ಬಾರಿಯೂ ಆಯೋಜಿಸಿದ್ದು, ಬೆಳಿಗ್ಗೆ 9ಗಂಟೆಯಿಂದ ಮಧ್ಯಾಹ್ನ 12.30 ರವರೆಗೆ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಶಿವಕುಮಾರ್, ತಾಲೂಕು ಬ್ರಾಹ್ಮಣರ ಸಂಘದ ಅಧ್ಯಕ್ಷ ಎಸ್.ಆರ್. ಗೋಪಾಲ್ ರಾವ್, ಭೈರತಿ ಲಿಂಗರಾಜು, ಸಂಜಯ್ ಬಾಬು, ಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್ ಉಪಸ್ಥಿತರಿದ್ದರು.

ನಾಳೆ ರಾಷ್ಟ್ರೀಯ ಭಾವೈಕ್ಯತೆ ಕಾರ್ಯಕ್ರಮ

ಮೈಸೂರು,ಫೆ.12(ಜಿಎ)–ಮೈಸೂರಿನ ಶ್ರೀ ಗುರು ಧನ್ನೂರ್ ಪ್ರತಿಷ್ಠಾನದ ವತಿ ಯಿಂದ ಹೆಬ್ಬಾಳ್‌ನಲ್ಲಿರುವ ಸ್ಕ್ಯಾರೀ ಟೆಕ್ನಾಲಜೀಸ್ ಸಭಾಂಗಣದಲ್ಲಿ ಫೆ.14 ರಂದು ಸಂಜೆ 4ರಿಂದ 6.30ರವರೆಗೆ ಭಕ್ತಿ ಸಾಧನ –ಭಕ್ತಿಯ ಮೂಲಕ ರಾಷ್ಟ್ರೀಯ ಭಾವೈಕ್ಯತೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಪಿ.ಲಕ್ಷ್ಮಿ ವಲ್ಲಭ ಈ ವಿಷಯ ತಿಳಿಸಿ, ಪ್ರಸ್ತುತ ಯಾಂತ್ರಿಕ ಜೀವನ ಶೈಲಿಯಲ್ಲಿ ಮುಳುಗಿ ಹೋಗಿರುವ ಯುವ ಸಮೂಹ, ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರಿಗೆ ಆಧ್ಯಾತ್ಮ ಹಾಗೂ ಭಕ್ತಿ ಭಾವ ಮೂಡಿಸುವ ಯತ್ನ ಇದಾಗಿದೆ. ಅಂದು ವಿದುಷಿ ದ್ಯುತಿ ಜಹಗಿರ್ದಾರ್ ಅವರಿಂದ ಅಭಂಗ ಶೈಲಿಯ ಭಜನಾ ಪ್ರಸ್ತುತಿ, ಪಂ. ರಮೇಶ್ ಧನ್ನೂರ ಅವರ ಶಿಷ್ಯರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ವಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆತ್ಮಾರಾಮ್ ನಾಯಕ್, ಎಂ.ನರಹರಿ ಭಟ್, ಸುಜಯೇಂದ್ರ, ಪುನೀತ್ ಉಪಸ್ಥಿತರಿದ್ದರು.



ಗಾಂಜಾ ಮಾರಾಟ ಪ್ರಕರಣ; ಅಪರಾಧಿಗೆ 4 ವರ್ಷ ಜೈಲು

ಮೈಸೂರು, ಫೆ.12– ಗಾಂಜಾ ಮಾರಾಟ ಅಪರಾಧಿಗೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಲಯವು 4 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ಮಹಮದ್ ಮುಷೀರ್, 2023ರ ಜು.17ರಂದು ಹೋಂಡಾ ಆಕ್ಟೀವಾ ಸ್ಕೂಟರ್‌ನ ಸೀಟ್ ಕೆಳಗೆ ಸುಮಾರು ಒಂದೂವರೆ ಕೆಜಿ ಗಾಂಜಾ ಸಾಗಾಣಿಕೆ ಮಾಡುತ್ತಿದ್ದಾಗ ಸೆನ್ ಠಾಣೆ ಪೊಲೀಸರು ದಾಳಿ ನಡೆಸಿ, ಆರೋಪಿಯನ್ನು ಬಂಧಿಸಿದ್ದರು.

ನಂತರ ಈ ಸಂಬಂಧ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ.ರಮೇಶ ಅವರು, ಮಹಮದ್ ಮುಷೀರ್ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ 4 ವರ್ಷ ಜೈಲು ಶಿಕ್ಷೆ ಹಾಗೂ 40 ಸಾವಿರ ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಎನ್.ಬಿ.ವಿಜಯಲಕ್ಷ್ಮಿ ವಾದ ಮಂಡಿಸಿದ್ದರು.

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–19/1242 /2025–26 ದಿನಾಂಕ:12–02–2026

ಅಲ್ಪಾವಧಿ / ಪೂರ್ಣಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಅನುದಾನ ಹಾಗೂ ಪಾಲಿಕೆ ಅನುದಾನದಡಿ **KTPP** ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.30 ಗಂಟೆ	ಸಂಜೆ 4.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ. ಸಂ	ವಿವರ	ಸೇವಾ ಟೆಂಡರ್/ ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-2 & Kw-3	7	521.50	16.02.2026	–	04.03.2026	06.03.2026
2	Kc-11	1	–	16.02.2026	–	04.03.2026	06.03.2026
3	Kc-6	2	83.40	16.02.2026	–	04.03.2026	06.03.2026
4	EOI	2	–	16.02.2026	–	04.03.2026	06.03.2026
5	Kw-2	1	48	13.02.2026	–	21.02.2026	23.02.2026
6	Kw-4	2	700.00	18.02.2026	27–02–2026	20.03.2026	23.03.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಪುರಸಭೆ ಕಾರ್ಯಾಲಯ, ಕುಶಾಲನಗರ, ಕೊಡಗು ಜಿಲ್ಲೆ–571234

ಕಛೇರಿ ದೂರವಾಣಿ ಸಂಖ್ಯೆ: 08276200643, 08276200645
ಇ–ಮೇಲ್: itstaff_ulb_kushalnagar@yahoo.com

ನಂ:ಪು.ಕು/ತಾ.ವಿ/ಟೆಂಡರ್–40/2025–26 ದಿನಾಂಕ: 12–2–2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕುಶಾಲನಗರ ಪುರಸಭೆ ವ್ಯಾಪ್ತಿಯ 2025–26ನೇ ಸಾಲಿನ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ **(SMIDP)** ಮತ್ತು ಪುರಸಭೆ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1, 2 & 3 ರ ನಿಯಮಗಳಿಗನುಸಾರ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.gov.in/** ವೆಬ್ ಸೈಟ್ ಮೂಲಕ ಪಡೆದುಕೊಂಡು, ಭರ್ತಿ ಮಾಡಿದ ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಇ–ಮೇಲ್ **ka.kushalnagar.tmc@gmail.com**

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27-02-2026** ಸಂಜೆ **5** ಗಂಟೆಯವರೆಗೆ
2) ಟೆಂಡರ್ ತೆರೆಯುವ ದಿನಾಂಕ: **02-02-2026** ಸಂಜೆ **5.00** ಗಂಟೆಗೆ

1. DMA/2025-26/RD/WORK_INDENT 54561, 54641, 54701, 54708, 54739, 54738, 55015, 54036, 54101, 54236, 54237, 54242, 54245, 54355, 54417, 54413, 54451, 54914, 54937, 54927, 54764, 54943.
2. DMA/2025-26/OW/WORK_INDENT 54571, 54617, 54633, 54646, 54512, 54732, 54968, 54208, 54246, 54977, 54441, 54419, 54911, 54928, 54935, 54941, 54926
3. DMA/2025-26/BD/WORK_INDENT 54211.
4. DMA/2025-26/EL/WORK_INDENT 54253, 54268, 53648.

ಸಹಿ/– ಶ್ರೀ ನಿತೀನ್ ಚಕ್ಕಿ, ಕೆ.ಎ.ಎಸ್
ಆಡಳಿತಾಧಿಕಾರಿಗಳು,
ಪುರಸಭೆ, ಕುಶಾಲನಗರ.

ಸಹಿ/– ಶ್ರೀ ಗಿರೀಶ್,
ಟಿ.ಎಸ್, ಕೆ.ಎಮ್.ಎ.ಎಸ್
ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ.



ನಕ್ಕರೆ ಅದೇ ಸ್ವರ್ಗ

ವಕೀಲ : ನೋಡಿ, ಮತ್ತೊಂದು ಸಲ ಯೋಚನೆ ಮಾಡಿ. ನೀವು ಡೈವೋರ್ಸ್ ತಗೊಂಡ್ರೆ, ನಿಮ್ಮ ಅರ್ಧ ಸಂಬಳ ನಿಮ್ಮ ಹೆಂಡತಿಗೆ ಕೊಡಬೇಕಾಗುತ್ತೆ!
ಗುಂಡ : ಹಾಗಿದ್ರೆ... ಒಳ್ಳೆದಾಯ್ತು ಸ್ವಾಮಿ. ಡೈವೋರ್ಸ್ ತಗೊಂಡ್ರೆ ಇನ್ಮುಂದೆ ನನ್ನ ಕೈಯಲ್ಲಿ ಅರ್ಧ ಸಂಬಳವಾದ್ರೂ ಉಳಿಯುತ್ತೆ!

ಮೈಸೂರು ಮಿತ್ರ

ಶುಕ್ರವಾರ, ಫೆಬ್ರವರಿ 13, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮನಸ್ಸು ಪರಿಶುದ್ಧವಾದಾಗ ಅದೇ ಗುರುವಾಗಿ ಮುಂದೆ ನಿಂತು ಎಲ್ಲವನ್ನೂ ಬೋಧಿಸುತ್ತದೆ. – ಶ್ರೀ ರಾಮಕೃಷ್ಣ ಪರಮಹಂಸರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ

ನಿಮ್ಮ ಪತ್ರಗಳು

ಪಾರದರ್ಶಕ ಆಡಳಿತಾತ್ಮಕ ವ್ಯವಸ್ಥೆಗೆ ಒಂದು ಸಲಹೆ

ಮಾನ್ಯರೆ,

ಉತ್ತರ ಪ್ರದೇಶ ಸರ್ಕಾರವು ಇತ್ತೀಚೆಗೆ ತನ್ನ ಎಲ್ಲಾ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರಿಗೆ 'ಮಾನವ್ ಸಂಪದ ಪೋರ್ಟಲ್' ಎಂದು ಕರೆಯಲ್ಪಡುವ ಅಧಿಕೃತ ಆನ್‌ಲೈನ್ ಪ್ಲಾಟ್‌ಫಾರಂ ಮೂಲಕ ತಮ್ಮ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಕಡ್ಡಾಯವಾಗಿ ಘೋಷಿಸುವಂತೆ ನಿರ್ದೇಶನ ನೀಡಿದೆ. ಉತ್ತರ ಪ್ರದೇಶ ಸರ್ಕಾರಿ ನೌಕರರ ನಡವಳಿಕೆ, ನಿಯಮಗಳು, 1956ರ ಅಡಿಯಲ್ಲಿ (ವಿಶೇಷವಾಗಿ ಆಸ್ತಿಗಳ ಘೋಷಣೆಗೆ ಸಂಬಂಧಿಸಿದ ನಿಯಮ 24) ಅಡಿಯಲ್ಲಿ ಈ ನಿರ್ದೇಶನವನ್ನು ಹೊರಡಿಸಲಾಗಿದೆ. ಜೊತೆಗೆ, ಅಲ್ಲಿನ ಮುಖ್ಯಮಂತ್ರಿಗಳು ಕೈಗೊಂಡ ಪ್ರಮುಖವಾದ ಹಾಗೂ ಆಶ್ಚರ್ಯಕರವಾದ ನಿರ್ಧಾರ ಅಥವಾ ಹೆಜ್ಜೆಯೆಂದರೆ, ತಮ್ಮ ಆಸ್ತಿಯನ್ನು ಘೋಷಿಸದ ನೌಕರರು, ಅಧಿಕಾರಿಗಳ ಕಳೆದ 2 ತಿಂಗಳ ಸಂಬಳವನ್ನು ತಡೆಹಿಡಿದಿರುವುದು.

ಇದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲೂ ಕೂಡ ಸರ್ಕಾರಿ ನೌಕರರು ಆಸ್ತಿ ಘೋಷಣೆಯನ್ನು ಕರ್ನಾಟಕ ನಾಗರಿಕ ಸೇವೆಗಳ (ನಡವಳಿಕೆ) ನಿಯಮಗಳು, 1966, ವಿಶೇಷವಾಗಿ ನಿಯಮ 23 (ಚರಾಸ್ತಿ, ಸ್ಥಿರ ಮತ್ತು ಮೌಲ್ಯಯುತ ಆಸ್ತಿ) ಮೂಲಕ ನಿಯಂತ್ರಿಸಲ್ಪಡಬಹುದಾಗಿದೆ. ಈ ನಿಯಮದ ಅಡಿಯಲ್ಲಿ, ಸರ್ಕಾರಿ ನೌಕರರು ತಮ್ಮ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಮತ್ತು ಹೊಣೆಗಾರಿಕೆಗಳ ರಿಟರ್ನ್ಸ್ ಅನ್ನು ಮೊದಲು ನೇಮಕಾತಿಯ ಸಮಯದಲ್ಲಿ ಮತ್ತು ನಂತರ ವಾರ್ಷಿಕವಾಗಿ ತಮ್ಮ ಮೇಲಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ.

ಆದರೆ, ಪ್ರಸ್ತುತ, ಈ ವ್ಯವಸ್ಥೆಯು ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂಬ ವಿಷಯ ಎಲ್ಲರ ಅರಿವಿಗೂ ಇದೆ. ಆದುದರಿಂದ, ಪಾರದರ್ಶಕ ಆಡಳಿತವನ್ನು ಉತ್ತೇಜಿಸುವ ಮತ್ತು ಸಾರ್ವಜನಿಕ ವಿಶ್ವಾಸವನ್ನು ಬಲಪಡಿಸುವ ಹಿತದೃಷ್ಟಿಯಿಂದ, ಕರ್ನಾಟಕ ರಾಜ್ಯವೂ ಸಹಾ ಈಗ ಅಸ್ತಿತ್ವದಲ್ಲಿರುವ ನೀತಿ ನಿಯಮಗಳ ಚೌಕಟ್ಟಿನಡಿಯಲ್ಲಿ ಕೆಲವು ಸೇರ್ಪಡೆ ಹಾಗೂ ಮಾರ್ಪಾಡುಗಳ ಮೂಲಕ ಇದೇ ರೀತಿಯ ಕೇಂದ್ರೀಕೃತ ಆನ್‌ಲೈನ್ ಆಸ್ತಿ ಘೋಷಣೆ ಕಾರ್ಯವಿಧಾನವನ್ನು ಪರಿಚಯಿಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವುದು ಒಳಿತೆಂದೆನಿಸುತ್ತದೆ. ಇಂತಹ ಒಂದು ವ್ಯವಸ್ಥೆಯು ರೂಪುಗೊಂಡಲ್ಲಿ ಎಲ್ಲಾ ವರ್ಗದ ಸರ್ಕಾರಿ ನೌಕರರು ಏಕರೂಪದ ಮತ್ತು ಸಮಯೋಚಿತ ಆಸ್ತಿ ಬಹಿರಂಗಪಡಿಸುವಿಕೆ, ವ್ಯವಸ್ಥಿತ ಡಿಜಿಟಲ್ ನಿರ್ವಹಣೆ ಮತ್ತು ಘೋಷಣೆಗಳ ಮೇಲ್ವಿಚಾರಣೆಯನ್ನು ಸುಗಮಗೊಳಿಸುವಿಕೆ, ಹೊಣೆಗಾರಿಕೆ ಮತ್ತು ಭ್ರಷ್ಟಾಚಾರ ವಿರೋಧಿ ಸುರಕ್ಷತಾ ಕ್ರಮಗಳನ್ನು ಬಲಪಡಿಸುವಿಕೆ ಹಾಗೂ ಸರ್ಕಾರದ ಆಡಳಿತದಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸುವಿಕೆ ಎಂಬ ಈ ನಾಲ್ಕು ಪ್ರಮುಖವಾದವುಗಳನ್ನು ಸಾಧಿಸಿದಂತಾಗುತ್ತದೆ ಎಂದು ನನ್ನ ಅನಿಸಿಕೆ.

– ಹೆಚ್.ಕೆ. ಶಶಿಕುಮಾರ್, ರಾಮಕೃಷ್ಣನಗರ, ಮೈಸೂರು.

ರಾಮಕೃಷ್ಣನಗರದ ಮುಖ್ಯ ರಸ್ತೆಗೆ ಡಾಂಬರ್ ಹಾಕಿ

ಮಾನ್ಯರೆ,

ಮೈಸೂರಿನ ರಾಮಕೃಷ್ಣ ನಗರದಲ್ಲಿ ಒಳಚರಂಡಿಗೆ ನೂತನ ಪೈಪುಗಳನ್ನು ಅಳವಡಿಕೆ ಮಾಡುವುದರ ಸಲುವಾಗಿ ರಸ್ತೆಯನ್ನು ಅಗೆದು, ಕೆಲಸ ಕಾರ್ಯಗಳನ್ನು ಮಾಡಿರುವುದು ಶ್ಲಾಘನೀಯ ವಿಷಯ.ಈಗಾಗಲೇ ನೂತನ ಪೈಪುಗಳು ಅಳವಡಿಕೆ ಮಾಡಿ ತಿಂಗಳುಗಳೆ ಆಗಿದೆ. ಆದರೆ ರಸ್ತೆಗೆ ಡಾಂಬರು ಮಾತ್ರ ಹಾಕಿಲ್ಲ. ರಾಮಕೃಷ್ಣನಗರ ಜಿ ಬ್ಲಾಕ್‌ನಲ್ಲಿ ಇರುವ ಗಣಪತಿ ದೇವಸ್ಥಾನದಿಂದ ಹಿಡಿದು ಕುವೆಂಪುನಗರ ಆರಕ್ಷಕ ಠಾಣೆಯುವರೆಗೂ ರಸ್ತೆಯು ಹಳ್ಳಗಳಿಂದ ಕೂಡಿದೆ, ಇಂತಹ ರಸ್ತೆಯಲ್ಲಿ ಒಂದು ಬಸ್ಸು ಬಂದರೆ ಸಾಕು ಅದರ ಹಿಂದೆ ಸಾಕಷ್ಟು ಧೂಳು ಬರತೊಡಗುತ್ತದೆ, ಅದು ಎಷ್ಟರ ಮಟ್ಟಿಗೆ ಎಂದರೆ ರಸ್ತೆಯೇ ಕಾಣುವುದಿಲ್ಲ. ಸುತ್ತಮುತ್ತ ದಟ್ಟವಾಗಿ ಆವರಿಸಿಕೊಳ್ಳುತ್ತದೆ, ದ್ವಿಚಕ್ರ ವಾಹನಗಳು ಸವಾರರಂತು ಒಂದು ಕೈಯಲ್ಲಿ ಮೂಗನ್ನು ಮುಚ್ಚಿಕೊಂಡು, ಮತ್ತೊಂದು ಕೈಯಲ್ಲಿ ವಾಹನ ಚಲಾಯಿಸುತ್ತಾರೆ. ಅಲ್ಲದೆ ರಸ್ತೆಯಲ್ಲಿ ಓಡಾಡುವ ಪಾದಚಾರಿಗಳು ಮಾಸ್ಕನ್ನು ಹಾಕಿಕೊಂಡು ಹೋಗುವ ಪ್ರಸಂಗ ಎದುರಾಗಿದೆ, ಇಂತಹ ಧೂಳಿನಿಂದ ಪರಿಸರ ಹಾಳಾಗುವುದಲ್ಲದೆ ಮನುಷ್ಯನಿಗೂ ನಾನಾ ರೀತಿಯ ಆರೋಗ್ಯ ಸಮಸ್ಯೆ ಎದುರಾಗುತ್ತದೆ. ಆದ್ದರಿಂದ ಸಂಬಂಧಪಟ್ಟವರು ರಸ್ತೆಗೆ ಡಾಂಬರು ಹಾಕಿಸಬೇಕೆಂದು ಮನವಿ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ಅಭಿವೃದ್ಧಿ ಎಂಬ ರಾಕ್ಷಸನಿಂದ ನನ್ನನ್ನು ಉಳಿಸಿ



ಮಾನ್ಯರೆ,

ಹೇಳಿಕೊಳ್ಳುವುದಕ್ಕೆ ಚಾಮುಂಡಿದೇವಿಯನ್ನು ಹೊತ್ತು ನಿಂತಿರುವ ದೊಡ್ಡ ಬೆಟ್ಟ ನಾನು, ಹೆಸರು ಚಾಮುಂಡಿಬೆಟ್ಟ, ರಾಕ್ಷಸ ರಾಜ ಮಹಿಷಾಸುರನನ್ನು ನನ್ನ ತುದಿಯಲ್ಲಿ ಶ್ರೀದುರ್ಗಾ ದೇವಿಯು ಕೊಂದಳು. ನಂತರ ಇದನ್ನು ಮಹಿಷನ ಸ್ಥಳವೆಂದು ಕರೆದರು. ಕ್ರಮೇಣ ಮೈಸೂರು ಆಯಿತೆನ್ನುವುದು ಇತಿಹಾಸ. ನನ್ನ ಆರೋಗ್ಯದಲ್ಲಿ ಕೆಲವು ವರ್ಷಗಳ ಹಿಂದಿನವರೆಗೂ ಎಲ್ಲವೂ ಚೆನ್ನಾಗಿಯೇ ಇತ್ತು. ನಾನು ಕೂಡ ನೆಮ್ಮದಿಯಾಗಿಯೇ ನಿಮ್ಮೊಂದೊಗಿದ್ದೆ. ಕಿಡಿಗೇಡಿಗಳು ಮೈಗೆ ಇಡುವ ಬೆಂಕಿಯಿಂದ ಅಲ್ಲಲ್ಲಿ ಮರಗಳು ಬೆಂದರೂ ಕೆಲವೇ ದಿನಗಳಲ್ಲಿ ಚೇತರಿಸಿಕೊಳ್ಳುತ್ತಿದ್ದೆ. ಆದರೆ ಅಭಿವೃದ್ಧಿ ಮಾಡುತ್ತೇನೆಂದು ಬಂದು ಅನಾವಶ್ಯಕವಾಗಿ ನನ್ನ ಮೇಲೆ ಭಾರವನ್ನು ಹೇರುತ್ತಾ ಬಂದಿರಿ. ತಡೆಯಲಾಗದೆ ನಂದಿ ದಾರಿಯಲ್ಲಿ ಕುಸಿದು ಬಿದ್ದೆ. ಅದನ್ನೇ ಇಲ್ಲಿವರೆಗೂ ಪುನರುಜ್ಜೀವನಗೊಳಿಸಲಾಗದೆ ಹೆಣಗಾಡುತ್ತಿದ್ದೀರಿ. ಈಗ ಮತ್ತೇ 'ಪ್ರಸಾದ್' ಯೋಜನೆ ಹೆಸರಲ್ಲಿ ನನ್ನ ಮೇಲೆ ಅಭಿವೃದ್ಧಿ ಎಂಬ ಮಹಾರಾಕ್ಷಸನನ್ನು ಬಿಟ್ಟಿದ್ದೀರಿ. ಮಹಿಷಾಸುರನನ್ನೇ ಕೊಂದ ದುರ್ಗಾದೇವಿಗೆ ಇವನನ್ನು ಕೊಲ್ಲುವುದು ಕಷ್ಟವೇನಲ್ಲ. ಚಾಮುಂಡಿ ತಾಯಿ ಸಹಿಷ್ಣತೆಯುಳ್ಳವಳು, ಮುನಿಯುವ ಸಮಯ ದೂರವೇನಿಲ್ಲ, ಅದಕ್ಕೂ ಮೊದಲು ಎಚ್ಚೆತ್ತುಕೊಳ್ಳಿ ನನ್ನ ಪ್ರೀತಿಯ ನಾಗರೀಕರೆ, ನನ್ನಿಂದ ನಿಮಗೆ ಆಗಿರುವ ತೊಂದರೆಯಾದರೂ ಏನು? ನಿಮಗಾಗಿ ಶುದ್ಧಗಾಳಿಯನ್ನು ಕೊಡುತ್ತಿಲ್ಲವೇ? ಮೋಡಗಳನ್ನು ತಡೆದು ತಂಪು ಹವಾ ನೀಡುತ್ತಿಲ್ಲವೇ? ನಗರಕ್ಕೆ ಭೌಗೋಳಿಕವಾಗಿ ಹೆಸರು ತಂದಿರುವುದು ನಿಮಗೆ ಗೊತ್ತಿಲ್ಲವೇ? ನನ್ನ ರಕ್ಷಣೆಗೆ ನಿಂತಿರುವ ಪ್ರಜ್ಞಾವಂತರ ತೀವ್ರ ವಿರೋಧ ಇದ್ದರೂ ಕಾಂಕ್ರೀಟ್ ಕಂಬಕ್ಕಾಗಿ ಪಾಯ ತೋಡುತ್ತಿರುವಿರಲ್ಲಾ, ನನಗೆ ಎಷ್ಟು ನೋವಾಗಿದೆ ಎಂಬುದರ ಅರಿವು ನಿಮಗೆ ಇದೆಯೇ?

ಮುಂದೊಂದು ದಿನ ಇಡೀ ನನ್ನನ್ನೇ ಕೊಂದು ಸಮತಟ್ಟು ಮಾಡಿ ನಿವೇಶನಗಳನ್ನಾಗಿ ಮಾಡುತ್ತೀರೆಂಬ ಭಯ ನನ್ನನ್ನು ಕಾಡುತ್ತಿದೆ!. ಸದ್ಯಕ್ಕೆ ಅಭಿವೃದ್ಧಿಯನ್ನು ವಿರೋಧಿಸುವವರ ಕೂಗು ಸಂತೇಲಿ ಮಂತ್ರ ಹೇಳಿದಂಗೆ ಆಗಿರಬಹುದು, ನನ್ನ ರಕ್ಷಣೆಗೆ ನಿಂತವರು ಸೋಲಬಹುದು, ನಾನು ಚಾಮುಂಡಿದೇವಿಯನ್ನು ನಂಬಿದ್ದೇನೆ. ಎಲ್ಲದಕ್ಕೂ ಪರಿಹಾರ ಸಿಗುತ್ತದೆ ಎಂಬ ಗ್ಯಾರಂಟಿ ನನ್ನದು. ಇಂತಿ ನಿತ್ಯವೂ ನೀವು ತಲೆ ಎತ್ತಿ ನೋಡಿದಾಗ ಕಾಣುವ ನಿಮ್ಮ ಚಾಮುಂಡಿಬೆಟ್ಟ,

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ನಿಮ್ಮ ಬದುಕಿನ ಚುಕ್ಕಾಣಿ ನಿಮ್ಮ ಕೈಯಲ್ಲೇ ಇರಲಿ


ಬಹಳ ಜನರು ನನ್ನ ಬಳಿ ಬಂದು ಅವರ ಭವಿಷ್ಯ ಹೇಳಬೇಕೆಂದು ಅಂಗಲಾಚುತ್ತಾರೆ. ಮಗಳ ಮದುವೆ ಯಾವಾಗ ಆಗುತ್ತದೆ? ಅವರ ವ್ಯಾಪಾರ ವಹಿವಾಟಿನ ಭವಿಷ್ಯ, ಹೀಗೇ. ಇವರಿಗೆಲ್ಲ ಅರ್ಥವಾಗದ ವಿಷಯವೆಂದರೆ, ಒಬ್ಬ ಗುರುವಿಗೂ ಮತ್ತು ಜ್ಯೋತಿಷಿಗೂ ಇರುವ ವ್ಯತ್ಯಾಸ.

ಬಹಳ ಮುಖ್ಯವಾದ ವ್ಯತ್ಯಾಸವೆಂದರೆ, ಒಬ್ಬ ಗುರು, ನೀವು 'ವಿಧಿ' ಎನ್ನುವುದು ನೂರಕ್ಕೆ ನೂರು ನಿಮ್ಮದೇ ಸೃಷ್ಟಿ ಎಂದು ನಿಮಗೆ ಮನವರಿಕೆ ಮಾಡಿಕೊಡುತ್ತಾರೆ. ನಿಮ್ಮ ಗುರಿಯನ್ನು ನೀವು ಅರಿವಿಲ್ಲದೇ ರೂಪಿಸಿಕೊಂಡಿದ್ದೀರಿ. ನೀವು ಅರಿವಿಲ್ಲದೇ ಬದುಕುತ್ತಿದ್ದರೆ 'ವಿಧಿ', 'ಹಣೇಬರಹ' ಮುಂತಾದ ಪದಗಳ ಮೊರೆ ಹೋಗುತ್ತೀರಿ. ನೀವು ಸಂಪೂರ್ಣವಾಗಿ ಅರಿವಿನಿಂದ ಇದ್ದಾಗ, ನಿಮ್ಮ ಗುರಿಯು ಪ್ರಜ್ಞಾಪೂರ್ವಕವಾದ ಸೃಷ್ಟಿಯಾಗುತ್ತದೆ.

ಹಾಗಾದರೆ ಜ್ಯೋತಿಷ್ಯ ಎಂದರೇನು? ಇಲ್ಲಿಯವರೆಗೂ ಅದ್ಭುತವಾಗಿ ಭವಿಷ್ಯವನ್ನು, ಬಹಳಷ್ಟು ಖಚಿತವಾಗಿ ಹೇಳಿರುವುದು ಹೇಗೆ? ಶತಮಾನಗಳಿಂದ ರೂಢಿಯಲ್ಲಿರುವ ಈ ಭವಿಷ್ಯವಾಣಿಗಳಲ್ಲಿ ಖಂಡಿತ ಸ್ವಲ್ಪವಾದರೂ ನಿಜಾಂಶ ಇರಬೇಕಲ್ಲವೇ?

ಜ್ಯೋತಿಷ್ಯ ಎಂದರೆ, ಒಬ್ಬ ವ್ಯಕ್ತಿಯ ಬದುಕಿನ ಸಾಧ್ಯತೆಗಳ ಸೂಚನೆ ಎಂದು ಹೇಳಬಹುದು. ಈಗ ನಾನು ನಿಮ್ಮನ್ನು ನೋಡಿದರೆ, ನಿಮ್ಮ ಕರ್ಮದ ಜಾಡನ್ನು ನೋಡಿ ಸಹಜವಾಗಿಯೇ ನಾನು 'ನಿಮ್ಮ ಸಹಜ ಪ್ರವೃತ್ತಿಗಳ ಆಧಾರದ ಮೇಲೆ ನಿಮ್ಮ ಜೀವನ ಹೀಗೆ ಸಾಗುತ್ತದೆ' ಎಂದು ಹೇಳಬಹುದು. ಇದರಲ್ಲಿ ಅಂತಹ ಗಾಢವಾದ ಚಿಂತನೆಯೇನಿಲ್ಲ. ಜ್ಯೋತಿಷ್ಯವೆಂದರೆ, ನಿಮ್ಮ ಪ್ರವೃತ್ತಿಗಳು ಮತ್ತು ಅನುವಂಶೀಯ ಲಕ್ಷಣಗಳ ಆಧಾರದ ಮೇಲೆ ಚಿತ್ರಿಸುವ ನಿಮ್ಮ ಬದುಕಿನ ನಕ್ಷೆ ಎಂದೂ ಹೇಳಬಹುದು.

ನೀವು ವಿಮಾನವನ್ನು ಹಾರಿಸಬೇಕೆಂದರೆ – ಹವಾಮಾನವನ್ನು ಪರಿಶೀಲಿಸುತ್ತೀರಿ, ಗಾಳಿಯ ದಿಕ್ಕು, ಮಳೆ –ಮೋಡಗಳ ಸೂಚನೆ ಮತ್ತು ಕಡಿಮೆ ಒತ್ತಡದ ಪ್ರದೇಶಗಳು, ಇವುಗಳನ್ನೆಲ್ಲಾ ಗಮನಿಸುತ್ತೀರಿ. ಸಾಂಪ್ರದಾಯಿಕವಾಗಿ, ಜನ ಜ್ಯೋತಿಷ್ಯವನ್ನು ಇದೇ ಕಾರಣಕ್ಕಾಗಿ ಅವಲಂಬಿಸಿದ್ದರು. ಅಂದರೆ ತಮ್ಮ ಜೀವನದ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಂತಿಮ ಗುರಿ ತಮ್ಮ ಹಣೆಬರಹವನ್ನು ತಾವೇ ಬರೆದುಕೊಳ್ಳುವುದೇ ಆಗಿತ್ತು.



"ಜ್ಯೋತಿಷ್ಯ ಎಂದರೆ, ಒಬ್ಬ ವ್ಯಕ್ತಿಯ ಬದುಕಿನ ಸಾಧ್ಯತೆಗಳ ಸೂಚನೆ ಎಂದು ಹೇಳಬಹುದು. ಈಗ ನಾನು ನಿಮ್ಮನ್ನು ನೋಡಿದರೆ, ನಿಮ್ಮ ಕರ್ಮದ ಜಾಡನ್ನು ನೋಡಿ ಸಹಜವಾಗಿಯೇ ನಾನು 'ನಿಮ್ಮ ಸಹಜ ಪ್ರವೃತ್ತಿಗಳ ಆಧಾರದ ಮೇಲೆ ನಿಮ್ಮ ಜೀವನ ಹೀಗೆ ಸಾಗುತ್ತದೆ' ಎಂದು ಹೇಳಬಹುದು. ಇದರಲ್ಲಿ ಅಂತಹ ಗಾಢವಾದ ಚಿಂತನೆಯೇನಿಲ್ಲ. ಜ್ಯೋತಿಷ್ಯ ವೆಂದರೆ, ನಿಮ್ಮ ಪ್ರವೃತ್ತಿಗಳು ಮತ್ತು ಅನುವಂಶೀಯ ಲಕ್ಷಣಗಳ ಆಧಾರದ ಮೇಲೆ ಚಿತ್ರಿಸುವ ನಿಮ್ಮ ಬದುಕಿನ ನಕ್ಷೆ ಎಂದೂ ಹೇಳಬಹುದು.

ಸಾವಿರಾರು ವರ್ಷಗಳ ಹಿಂದೆ ನೀವೇನಾದರೂ ನಾವಿಕನಾಗಿದ್ದರೆ, ಗಾಳಿ ಪೂರ್ವಕ್ಕೆ ಬೀಸಿದರೆ, ನೀವೂ ಪೂರ್ವ ದಿಕ್ಕಿಗೇ ಚಲಿಸುತ್ತಿದ್ದಿರಿ. ಆದರೆ, ಈಗ ಹಾಗಲ್ಲ, ಗಾಳಿ ಯಾವ ದಿಕ್ಕಿಗೆ ಹೇಗೆ ಬೇಕಾದರೂ ಬೀಸಲಿ, ನಾವು ಮಾತ್ರ ನಮಗೆ ಎಲ್ಲಿ ಹೋಗಬೇಕೋ ಅತ್ತಲೇ ಸಾಗುತ್ತೇವೆ ಮತ್ತು ನಮ್ಮ ಗುರಿಯನ್ನು ತಲುಪುತ್ತೇವೆ. ಹಾಗೆಯೇ ಜೀವನ ಪ್ರಕ್ರಿಯಲ್ಲೂ ಸಹ ನೀವು ಸ್ವಯಂ ಚಾಲನೆಗೆ ತಯಾರಿದ್ದರೆ, ನೀವು ಅಧ್ಯಾತ್ಮ ಪಥದಲ್ಲಿದ್ದೀರಿ ಎನ್ನುತ್ತೇವೆ. ಅದೇ ನೀವು ನಿಮ್ಮ ಅಭ್ಯಾಸಗಳು, ಪ್ರವೃತ್ತಿಗಳು ನಿಮ್ಮ ಒತ್ತಡಗಳ ಹಿಡಿತದಲ್ಲಿದ್ದೀರೆಂದರೆ, ಖಂಡಿತ ನಿಮ್ಮ ಭಯಾನಕ ಜಾತಕದ ಸುಳಿಯಲ್ಲಿದ್ದೀರೆಂದು ಅರ್ಥ.

ಸಾಂಪ್ರದಾಯಿಕವಾಗಿ ಪರಿವಾರಗಳು ಜಾತಕಗಳನ್ನು ನೋಡುತ್ತಿದ್ದುದು ಏಕೆಂದರೆ, ಪ್ರವೃತ್ತಿಗಳು, ಕರ್ಮ ಪ್ರಭಾವ ಮತ್ತು ಜೀವನ ನಡೆಯುವ ಸಾಧ್ಯತೆಗಳು– ಇವುಗಳನ್ನೆಲ್ಲಾ ತುಲನೆ ಮಾಡಲು. ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಇವುಗಳನ್ನೆಲ್ಲಾ ಮೀರಿ ನಿಲ್ಲಲು ಹಲವಾರು ಅಧ್ಯಾತ್ಮ ಪ್ರಕ್ರಿಯೆಗಳನ್ನು ಅಭ್ಯಾಸ ಮಾಡಲು ಸೂಚಿಸಲಾಗುತ್ತಿತ್ತು. ಆದರೆ ಈಗ ನಾವು ಇವುಗಳನ್ನೆಲ್ಲಾ ಬಿಟ್ಟು ಕೇವಲ ಜಾತಕದ ಭಯಾನಕ ಸುಳಿಯಲ್ಲಿ ಸಿಕ್ಕಿಕೊಂಡಿದ್ದೀವಿ.

ಆಧ್ಯಾತ್ಮಿಕ ಅಭ್ಯಾಸಗಳೆಂದರೆ, ಮೂಲತಃ ನಮ್ಮ ವಿಧಿಯನ್ನು ನಾವೇ ಹಿಡಿತದಲ್ಲಿಡುವುದು. ಇಲ್ಲಿ ಮಾರ್ಕಂಡೇಯನ ಕಥೆಯು ಒಳ್ಳೆಯ ಉದಾಹರಣೆಯಾಗುತ್ತದೆ. ಅವನ ಎಳೆಯ ವಯಸ್ಸಿನ ಸಾವು ವಿಧಿತವಾಗಿದ್ದರೂ, ಆ ಧೈರ್ಯಶಾಲಿ ಬಾಲಕ ತನ್ನ ಸಾವನ್ನೇ ಗೆದ್ದು ಬಂದನು. ಆಧ್ಯಾತ್ಮಿಕತೆ ಎಂದರೆ ಇದೆ. ಅಂದರೆ ಸಾವು–ಬದುಕಿನ ಪ್ರಕ್ರಿಯೆಗಳನ್ನು ನಿಮ್ಮ ಹತೋಟಿಗೆ ತೆಗೆದುಕೊಳ್ಳುತ್ತೀರಿ ಎಂದರ್ಥ. ನೀವು ನಿಮಗೇ ಘೋಷಿಸಿಕೊಳ್ಳಬಹುದು, 'ನನ್ನ ತಾತ–ಮುತ್ತಾತಂದಿರು ಯಾರಾದರೂ ಪರವಾಗಿಲ್ಲ, ನನ್ನ ಕರ್ಮ, ನನ್ನ ಭೂತಕಾಲ ಏನೇ ಇದ್ದರೂ ಪರವಾಗಿಲ್ಲ, ಮುಕ್ತಿಯೇ ನನ್ನ ಅಂತಿಮ ಗುರಿ. ನಾನು ನನ್ನ ಆ ದಾರಿಯನ್ನು ನಿರ್ಣಯಿಸಿ ಕೊಂಡಿದ್ದೇನೆ' ಎಂದು.

ನಿಮ್ಮ ಜಾತಕ ಫಲವು ನಿಮ್ಮನ್ನು ಸಾಧ್ಯವಿರುವ ಎಲ್ಲಾ ಅಡೆತಡೆಗಳಿಂದ ದೂರ ನಡೆಸುವ ಒಂದು ಪ್ರಯತ್ನವೇ. ಅದೇ ನಿಮ್ಮ ಬದುಕಿನ ಬರಹ ಎಂದು ಕುರುಡಾಗಿ ನಂಬಬೇಕೆಂದೇನಿಲ್ಲ. ನಿಜ ಹೇಳಬೇಕೆಂದರೆ, ಜ್ಯೋತಿಷ್ಯ ಶಾಸ್ತ್ರಜ್ಞರು, ಅಧ್ಯಾತ್ಮ ಪಥದಲ್ಲಿರುವವರಿಗೆ ಯಾವುದೇ ಭವಿಷ್ಯವನ್ನು ಹೇಳುವುದಿಲ್ಲ. ಏಕೆಂದರೆ ಅವರ ವಿಧಿ ಅವರೇ ರೂಪಿಸಿಕೊಂಡು ಬಿಟ್ಟಿರುತ್ತಾರೆ. ಇದನ್ನು ಎಲ್ಲಾ ಅನ್ವೇಷಕರು ಜ್ಞಾಪಕ ಇರಿಸಿಕೊಳ್ಳಬೇಕು. ನೀವು ಆ ಮಾರ್ಗದಲ್ಲಿದ್ದಾಗ, ಪ್ರಪಂಚಕ್ಕೆ ಸರಳವಾಗಿ, ಆದರೆ ನಿಖರವಾಗಿ, 'ನಾನು ಗಾಳಿ ಬೀಸಿದ ದಿಕ್ಕಿನಲ್ಲಿ ಸಾಗುವವನಲ್ಲ, ನಾನೀಗ ನನ್ನ ಬದುಕಿನ ಚುಕ್ಕಾಣಿಯನ್ನು ನನ್ನ ಕೈಗೆತ್ತಿಕೊಂಡಿದ್ದೇನೆ' ಎಂದು ಘೋಷಿಸಬೇಕಾಗುತ್ತದೆ.

ಬೋಧಗಯಾ ಆಡಳಿತ ಬೌದ್ಧರಿಗೆ ನೀಡಲು ಆಗ್ರಹಿಸುವ ದೆಹಲಿ ಚಲೋದಲ್ಲಿ ಮೈಸೂರಿನ ಹಲವರು ಭಾಗಿ



ನವದೆಹಲಿಯಲ್ಲಿ ನಡೆಯುತ್ತಿರುವ ದೆಹಲಿ ಚಲೋ ಹೋರಾಟದಲ್ಲಿ ಮೈಸೂರಿನ ಮುಖಂಡರಾದ ಎನ್.ಭಾಸ್ಕರ್, ದ್ಯಾವಪ್ಪ ನಾಯಕ ಮತ್ತಿತರರು ಭಾಗವಹಿಸಿದ್ದರು.

ಮೈಸೂರು, ಫೆ.12– ಬೌದ್ಧರ ಪವಿತ್ರ ಸ್ಥಳ ಬಿಹಾರದ ಬೋಧಗಯಾ ಮಹಾಬೋಧಿ ಆಡಳಿತವನ್ನು ಬೌದ್ಧರಿಗೆ ನೀಡಬೇಕೆಂದು ಆಗ್ರಹಿಸಿ ಆರಂಭಿಸಲಾಗಿರುವ ಐತಿಹಾಸಿಕ ದೆಹಲಿ ಚಲೋ ಹೋರಾಟದಲ್ಲಿ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಭಾಗವಹಿಸಿ, ಬೆಂಬಲ ಸೂಚಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಭಾಸ್ಕರ್, ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಬೌದ್ಧ ಬಿಕ್ಕುಗಳು ಈ ಐತಿಹಾಸಿಕ ಹೋರಾಟದಲ್ಲಿ ಪಾಲ್ಗೊಂಡು 1949ರ ಬಿಟಿ ಕಾಯ್ದೆಯನ್ನು ರದ್ದು ಮಾಡಿ, ಬೋಧಗಯಾ ಕ್ಷೇತ್ರವನ್ನು ಮರಳಿ ಬೌದ್ಧರಿಗೆ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಸಾವಿರಾರು ಜನ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಮತ್ತು ಬಿಹಾರ ರಾಜ್ಯ ಸರ್ಕಾರ ಸಮನ್ವಯದೊಂದಿಗೆ ಈ ಸಮಸ್ಯೆಯನ್ನು ಬಗೆಹರಿಸಬೇಕು. ದೇಶದ ಬಹುಸಂಖ್ಯಾತ ಜನರ ಪವಿತ್ರ ಸ್ಥಳವಾದ ಬೋಧಗಯಾವನ್ನು ಬಿಕ್ಕುಗಳ ಸುಪರ್ದಿಗೆ ನೀಡಬೇಕು. ಈ ಸಂಬಂಧ ಕರ್ನಾಟಕದಿಂದ ಭಾಗವಹಿಸಿರುವ ಬೌದ್ಧ ಅನುಯಾಯಿಗಳು ಚಾಮರಾಜನಗರದ ನಳಂದ ವಿಶ್ವವಿದ್ಯಾನಿಲಯದ ಕಾರ್ಯದರ್ಶಿ ಬೌದ್ಧ ಬಿಕ್ಕು ಬಂತೇ ಬೋಧಿದತ್ತ ಹಾಗೂ ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರೊಂದಿಗೆ ಚರ್ಚಿಸಿದ್ದಾಗಿ ಹೇಳಿದ್ದಾರೆ.

ಎನ್.ಭಾಸ್ಕರ್ ಅವರೊಂದಿಗೆ ರಾಜ್ಯ ಅಹಿಂದ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ, ತುಂಬಲ ರಾಮಣ್ಣ, ನಾಯಕ ಸಮುದಾಯದ ಮುಖಂಡ ಶಿವನಾಯಕ, ದಲಿತ ವೇದಿಕೆಯ ರಾಜ್ಯಾಧ್ಯಕ್ಷ ನಾಡನಹಳ್ಳಿ ರೇವಣ್ಣ, ನಾಗನಹಳ್ಳಿ ಗ್ರಾಪಂ ಸದಸ್ಯರಾದ ಶಂಕರ್, ಚಾಮರಾಜನಗರ ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಮುಂತಾದವರು ಹೋರಾಟದಲ್ಲಿ ಭಾಗವಹಿಸಿದ್ದರು.

ಮನವಿ ಸಲ್ಲಿಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026–27ನೇ ಸಾಲಿನ ಆಯವ್ಯಯ ಹಿನ್ನೆಲೆಯಲ್ಲಿ ಹಿಂದುಳಿದ ಜಾತಿ, ವರ್ಗ ಮತ್ತು ಸಮುದಾಯಗಳ ಬೇಡಿಕೆಗಳನ್ನು ಆಲಿಸಲು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ನಡೆಸಿದರು. ಈ ವೇಳೆ ಸವಿತಾ ಸಮಾಜದ ರಾಜ್ಯ ಉಪಾಧ್ಯಕ್ಷ ಮಾವಳ್ಳಿ ಕೃಷ್ಣ, ಮೈಸೂರು ಜಿಲ್ಲಾ ಅಧ್ಯಕ್ಷ ಎನ್.ಆರ್.ನಾಗೇಶ್, ಸವಿತಾ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಬೈಲಪ್ಪ ನಾರಾಯಣಸ್ವಾಮಿ, ಮುಖಂಡರಾದ ಶ್ರೀಮತಿ ನಾಗವೇಣಿ. ಜೆ.ಆರ್.ಕೌಶಿಕ್, ಜೆ.ಆರ್.ಅಭಿಷೇಕ್ ವಿವಿಧ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು.


ನಿರ್ದೇಶಕರ ಆಯ್ಕೆ



ಮೈಸೂರು: ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪಂಗಡದ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಸ್ಪರ್ಧಿಸಿದ್ದ ಈಶ್ವರ.ಡಿ 5 ವರ್ಷ ಅವಧಿಗೆ ಅವಿರೋಧವಾಗಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹುಣಸೆ, ಹಲಸು, ನೇರಳೆಗೆ ಪ್ರತ್ಯೇಕ ರಾಷ್ಟ್ರೀಯ ಮಂಡಳಿ ರಚಿಸಿ

ಮಾಜಿ ಪ್ರಧಾನಿ ದೇವೇಗೌಡರಿಂದ ಕೇಂದ್ರ ಹಣಕಾಸು, ಕೃಷಿ ಸಚಿವರಿಗೆ ಮನವಿ





ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿಯಾಗಿ ತೋಟಗಾರಿಕಾ ಬೆಳೆಗಳ ಉತ್ತೇಜನ ಸಂಬಂಧ ಚರ್ಚೆ ನಡೆಸಿದರು.

ನವದೆಹಲಿ, ಫೆ.12– ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಯಥೇಚ್ಛವಾಗಿರುವ ಹಲಸು, ಹುಣಸೆ ಮತ್ತು ನೇರಳೆಗೆ ಉತ್ತೇಜನ ನೀಡಲು ಪ್ರತ್ಯೇಕ ರಾಷ್ಟ್ರೀಯ ಮಂಡಳಿ ರಚಿಸಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಮಾಡಿದ್ದಾರೆ.

ನವದೆಹಲಿಯ ತಮ್ಮ ನಿವಾಸಕ್ಕೆ ಗುರುವಾರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಆಗಮಿಸಿದ್ದ ವೇಳೆ ಮನವಿ ಪತ್ರ ಸಲ್ಲಿಸಿ, ಪ್ರತ್ಯೇಕ ಮಂಡಳಿ ರಚನೆ ಹಾಗೂ ಕರ್ನಾಟಕದ ತೆಂಗು ವಲಯಕ್ಕೆ ಹೆಚ್ಚುವರಿ ಬಜೆಟ್ ಅನುದಾನ ಒದಗಿಸುವ ಅಗತ್ಯವನ್ನು ಒತ್ತಿ ಹೇಳಿದರು. ನಂತರ ಸಂಸತ್ ಭವನದಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೂ ಭೇಟಿಯಾಗಿ ಪ್ರತ್ಯೇಕ ಮಂಡಳಿ ರಚನೆಯ ಅಗತ್ಯತೆ ಬಗ್ಗೆ ವಿವರಿಸಿದರು.

ಔಷಧಿಯ ಗುಣಗಳುಳ್ಳ ಹುಣಸೆ, ಹಲಸು ಮತ್ತು ನೇರಳೆ ಭಾರತದಲ್ಲಿ ಶತಮಾನಗಳಿಂದ ಬೆಳೆಯುವ ಪೌಷ್ಟಿಕಾಂಶಯುಕ್ತ ಹಣ್ಣಿನ ಬೆಳೆಗಳಾಗಿವೆ. ಇವು ಆರೋಗ್ಯಕ್ಕೆ ಉಪಯುಕ್ತವಾಗಿದ್ದು, ಅವು ನೈಸರ್ಗಿಕವಾಗಿ ದೀರ್ಘಕಾಲ ಫಲವನ್ನು ನೀಡುತ್ತವೆ. ಈ ಬೆಳೆಗೆ ಕಡಿಮೆ ಮಳೆ ಹಾಗೂ ವೆಚ್ಚ ಸಾಕಾಗುತ್ತದೆ. ಅದರಲ್ಲೂ ಹುಣಸೆ ಹಣ್ಣನ್ನು ದೇಶಾದ್ಯಂತ ಬೆಳೆಯಲಾಗುತ್ತಿದೆ. ಆದರೆ ಹಲಸು ಮತ್ತು ನೇರಳೆಯನ್ನು ಹೆಚ್ಚಾಗಿ ಭಾರತದ ದಕ್ಷಿಣ, ಮಧ್ಯ, ಪೂರ್ವ ರಾಜ್ಯಗಳಲ್ಲಿ ಕಾಣಬಹುದಾಗಿದೆ. ಭಾರತವು ಹುಣಸೆ ಹಣ್ಣು, ಹಲಸು ಮತ್ತು ನೇರಳೆಯ ಅತಿದೊಡ್ಡ ಉತ್ಪಾದಕ ದೇಶವಾಗಿರುವುದರಿಂದ ಪ್ರತ್ಯೇಕ ಮಂಡಳಿ ರಚನೆ ಮಾಡಬೇಕು. ಆಗ ಈ ಬೆಳೆಗಳಿಗೆ ದೊಡ್ಡ ಪ್ರಮಾಣದ ಉತ್ತೇಜನ ದೊರಕುತ್ತದೆ ಎಂದು ಮನದಟ್ಟು ಮಾಡಿದರು.

ಈ ಹಣ್ಣುಗಳು ಮತ್ತು ಅವುಗಳ ಉಪ ಉತ್ಪನ್ನಗಳು ದೇಶೀಯ ಮತ್ತು ವಿದೇಶಿ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೇಡಿಕೆ ಹೊಂದಿವೆ. ಇವುಗಳಲ್ಲಿ ಔಷಧಿಯ ಗುಣಗಳು ಇರುವುದರಿಂದ ವಿವಿಧ ದೇಶಗಳಿಂದ ಭಾರೀ ಬೇಡಿಕೆ ಇದೆ. ಅಲ್ಲದೆ ಇವು ಹೆಚ್ಚಿನ ಆದಾಯ ಗಳಿಸುವ ಬೆಳೆಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ ಉದ್ಯೋಗಾವಕಾಶವನ್ನು ಸೃಷ್ಟಿಸುವುದರ ಜೊತೆಗೆ ರಾಷ್ಟ್ರೀಯ ಆರ್ಥಿಕತೆಗೆ ಹೆಚ್ಚಿನ ಕೊಡುಗೆ ನೀಡುತ್ತವೆ ಎಂದು ಮನದಟ್ಟು ಮಾಡಿಕೊಟ್ಟರು.

3 ಸಾವಿರ ಕೋಟಿ ಮೀಸಲಿಡಿ: ಆರಂಭದಲ್ಲಿ ಎರಡ್ಮೂರು ರಾಜ್ಯಗಳಲ್ಲಿ ಪ್ರಾಯೋಗಿಕ ಯೋಜನೆ ಮಾದರಿಯಲ್ಲಿ ಅನುಷ್ಠಾನಕ್ಕೆ ತಂದು, ಎರಡನೇ ಹಂತದಲ್ಲಿ ದೇಶಾದ್ಯಂತ ವಿಸ್ತರಿಸಬಹುದು. ರೈತರಿಗೆ ಹೆಚ್ಚು ಲಾಭ, ಆರ್ಥಿಕ ಶಕ್ತಿ ತಂದುಕೊಡಲಿರುವ ಈ ಮೂರು ಹಣ್ಣುಗಳ ಬೆಳೆಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಹುಣಸೆ ಹಣ್ಣು, ಹಲಸು ಮತ್ತು ನೇರಳೆ ಮಂಡಳಿಯನ್ನು ರಚಿಸಬೇಕಾಗಿದೆ. ಪರಿಣಾಮಕಾರಿ ಅನುಷ್ಠಾನದ ದೃಷ್ಟಿಯಿಂದ ಮೂರು ವರ್ಷಗಳ ಅವಧಿಗೆ ವಾರ್ಷಿಕ 3000 ಕೋಟಿ ರೂ. ಬಜೆಟ್ ಮೀಸಲಿಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ತೆಂಗು ಬೆಳೆ ಉತ್ತೇಜನಕ್ಕೆ ಹೆಚ್ಚಿನ ಅನುದಾನಕ್ಕೆ ಮನವಿ

ನವದೆಹಲಿ: ಕರ್ನಾಟಕದ ತೆಂಗು ಬೆಳೆಗಾರರಿಗೆ ಬಜೆಟ್ ಹಂಚಿಕೆಯನ್ನು ಹೆಚ್ಚಿಸುವ ಅವಶ್ಯಕತೆಯಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಬಳಿ ಆಗ್ರಹಿಸಿದರು.

ದೇಶೀಯ ಮತ್ತು ರಫ್ತು ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಹಾಗೂ ಅದರ ಉಪ ಉತ್ಪನ್ನಗಳಿಗೆ ಭಾರೀ ಬೇಡಿಕೆ ಇದೆ. ಈ ಬೆಳೆಯಿರುವ ಪ್ರದೇಶದಲ್ಲಿ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. 2008–09ರಲ್ಲಿ ರೂ.179.81 ಕೋಟಿಗಳಿದ್ದ ರಫ್ತು ವಹಿವಾಟು 2024–25ರಲ್ಲಿ 4349.01 ಕೋಟಿಗೆ ಏರಿಕೆಯಾಗಿದೆ. ಕರ್ನಾಟಕದಲ್ಲೂ ಉತ್ತಮ ಬೆಳವಣಿಗೆ ಕಾಣಬಹುದಾಗಿದೆ. ಆದ್ದರಿಂದ 2030ರ ವೇಳೆಗೆ ತೆಂಗಿನಕಾಯಿ ಕ್ಷೇತ್ರದಲ್ಲಿ ಗಣನೀಯ ಬೆಳವಣಿಗೆ ಸಾಧಿಸುವ ನಿಟ್ಟಿನಲ್ಲಿ ಬಜೆಟ್ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಬೇಕು. ತೆಂಗು ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೆ 150 ಕೋಟಿ ರೂ. ಮೀಸಲಿಡಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ತೆಂಗು ಬೆಳೆಯುವ ಪ್ರದೇಶಗಳಲ್ಲಿ 2014–15ರಲ್ಲಿ ಸ್ಥಾಪನೆಯಾದ 4 ತೆಂಗು ಉತ್ಪಾದಕ ಕಂಪನಿಗಳು 2016ರಿಂದ ಕಾರ್ಯಾರಂಭಿಸಿವೆ. ತೆಂಗಿನ ಬೆಳೆಗಾರರಿಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಸೌಲಭ್ಯಗಳನ್ನು ವಿತರಿಸುವಲ್ಲಿ ಸಾರ್ವಜನಿಕ ಸ್ವಾಮ್ಯದ ಕಂಪನಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಆದರೆ ರಾಜ್ಯ ಸರ್ಕಾರ ಅಥವಾ ತೆಂಗು ಅಭಿವೃದ್ಧಿ ಮಂಡಳಿಯಿಂದ ಹಣಕಾಸಿನ ನೆರವು ಲಭ್ಯವಾಗುತ್ತಿಲ್ಲ. ಹಲವು ಕಂಪನಿಗಳು ಹಣಕಾಸಿನ ಬೆಂಬಲದ ಕೊರತೆಯಿಂದಾಗಿ ಮುಚ್ಚಲ್ಪಟ್ಟಿವೆ. ತಾಂತ್ರಿಕ ಮಾಹಿತಿ ಪ್ರಸಾರ, ಬೆಳೆಗಾರರಿಗೆ ನಿರಂತರ ನೆರವು ಮತ್ತು ಕೊನೆಯ ಹಂತದ ಒಳಹರಿವಿನ ವಿತರಣೆ ಖಚಿತಪಡಿಸಿಕೊಳ್ಳಲು ಈ ಕಂಪನಿಗಳನ್ನು ಉಳಿಸಿಕೊಳ್ಳುವುದು ಮತ್ತು ಬಲಪಡಿಸುವುದು ಅತ್ಯಗತ್ಯವಾಗಿದೆ ಎಂದು ದೇವೇಗೌಡರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 13 ಫೆಬ್ರವರಿ 2026

ಚಾಮುಂಡಿಬೆಟ್ಟದ ತಪ್ಪಲಿನ 47 ಎಕರೆ ವಿಶೇಷ ಕೃಷಿ ವಲಯದ ಭೂಮಿ ವಸತಿ ಉದ್ದೇಶಕ್ಕೆ ಪರಿವರ್ತನೆ

500 ಕೋಟಿ ಮೌಲ್ಯದ ಈ ಭೂಮಿ ಪರಿವರ್ತನೆ ಕಾನೂನುಬಾಹಿರ



●ಅಭಿವೃದ್ಧಿ ರಹಿತ, ವಿಶೇಷ ವ್ಯವಸಾಯ ವಲಯವೆಂದು ಉಲ್ಲೇಖ ●2031ರ ಸಿಡಿಪಿಯಲ್ಲಿ ಸ್ಪಷ್ಟ ಮಾಹಿತಿ ಇದ್ದರೂ! ಕಾನೂನು ನಿಯಮ ಗಾಳಿಗೆ ತೂರಿ ಎಂಡಿಎ ಸಮ್ಮತಿ ●ಭೂ ಮಾಫಿಯಾ ಒತ್ತಡಕ್ಕೆ ಮಣಿದರಾ ಡಿಸಿ, ಎಂಡಿಎ ಆಯುಕ್ತರು!

ಮೈಸೂರು, ಫೆ.12(ಬಿಎಲ್‌ಯು)– ಚಾಮುಂಡಿಬೆಟ್ಟ ಸರಹದ್ದಿನಿಂದ 100 ಮೀಟರ್ ವ್ಯಾಪ್ತಿ ಅಭಿವೃದ್ಧಿ ರಹಿತ ಹಾಗೂ ವಿಶೇಷ ವ್ಯವಸಾಯ ವಲಯ ಎಂದು ಸರ್ಕಾರ ಅಧಿಕೃತ ಘೋಷಣೆ ಮಾಡಿದ್ದರೂ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಕಾನೂನು ಬಾಹಿರ ವಾಗಿ 500 ಕೋಟಿ ಮೌಲ್ಯದ 47 ಎಕರೆ ಭೂಮಿಯನ್ನು ವಸತಿ ವಲಯಕ್ಕೆ ಭೂ ಪರಿವರ್ತನೆ ಮಾಡಿದೆ ಎಂದು ಕೃಷ್ಣರಾಜ ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಕೆ.ಸಿ.ಬಡಾವಣೆಯ ವಿವಾದಿತ ಒತ್ತುವರಿ ಕೆರೆ ಬಳಿ ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಪ್ರಸ್ತಾಪಿತ ಭೂ ಪರಿ ವರ್ತನೆಯು ಕಾನೂನಿಗೆ ವಿರುದ್ಧ ವಾಗಿದ್ದು, ಚಾಮುಂಡಿಬೆಟ್ಟದ ತಪ್ಪಲಿನ ಹಸಿರನ್ನು ಕೊನೆಗಾಣಿಸಲಿದೆ ಎಂದು ಆಪಾದಿಸಿದರು.

2018 ರಲ್ಲಿ ರಾಜ್ಯ ಸರ್ಕಾರದಿಂದ ಅನುಮೋದಿಸಿದ ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ) 2031ರ ಪ್ರಕಾರ ಚಾಮುಂಡಿಬೆಟ್ಟದ ನೂರು ಮೀಟರ್ ಸುತ್ತ ಪರಿಸರಕ್ಕೆ ಹಾನಿಯಾಗುವ ಯಾವುದೇ ಅಭಿವೃದ್ಧಿ ಮಾಡಬಾರದು ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದರು.

ಈ ಹಿನ್ನೆಲೆಯಲ್ಲಿ ಇದು ಅಭಿವೃದ್ಧಿ ರಹಿತ ವಲಯ ಹಾಗೂ ವಿಶೇಷ ವ್ಯವ ಸಾಯ ವಲಯವೆಂದು ದಾಖಲಿಸ ಲಾಗಿದೆ. ಆದರೆ ಕಾನೂನಿನ ಈ ಎಲ್ಲಾ ನಿಯಮ ಗಳನ್ನು ಗಾಳಿಗೆ ತೂರಿ ಭೂ ಪರಿವರ್ತನೆ ಮಾಡಲಾಗಿದೆ ಎಂದು ಶ್ರೀವತ್ಸ ದೂರಿದರು.

ಶಾಸಕನಾಗಿ ಮುಡಾ ಸದಸ್ಯತ್ವ ಹೊಂದಿದ್ದ ನಾನು ನವೆಂಬರ್ 7, 2024 ರಂದು ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದೆ. ಆ ವೇಳೆ ವಿವಿಧ ಸರ್ವೆ ನಂಬರ್‌ಗಳ ಸುಮಾರು 50 ಎಕರೆ ಭೂಮಿಯನ್ನು ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಪರಿವರ್ತನೆ ಮಾಡಿ ಕೊಡಲು ರೀಬಿ, ಪೀಟರ್, ರಾಣಿ ಪೀಟರ್ ಹಾಗೂ ಇತರು ಕೋರಿದ್ದರು. ಆದರೆ ಇದು ಅಭಿವೃದ್ಧಿ ರಹಿತ ಹಾಗೂ ವಿಶೇಷ ವ್ಯವಸಾಯ ವಲಯವಾದ ಹಿನ್ನೆಲೆಯಲ್ಲಿ ಭೂ ಪರಿ ವರ್ತನೆ ನಿರಾಕರಿಸಿ ಸ್ಥಳ ಪರಿಶೀಲನೆಗೆ ಒಪ್ಪಿಸಲಾಗಿತ್ತು ಎಂದು ಹೇಳಿದರು.

ಆದರೆ, ಮುಡಾವು ಎಂಡಿಎ ಆಗಿ ಪರಿವರ್ತನೆಗೊಂಡ ನಂತರ ಆಗಸ್ಟ್ 8, 2025 ರಂದು ನಡೆದ ಸಭೆಯಲ್ಲಿ 50 ಎಕರೆ ಭೂಮಿಯನ್ನು ವಿಶೇಷ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗೆ ಅನುಮತಿ ನೀಡಿ ಸರ್ಕಾರಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ ಎಂದರು.

ಹಾಲಿ ಜಿಲ್ಲಾಧಿಕಾರಿಗಳೂ ಆದ ಎಂಡಿಎ ಅಧ್ಯಕ್ಷ ಲಕ್ಷ್ಮಿಕಾಂತರೆಡ್ಡಿ ಅವರ ಅಧ್ಯಕ್ಷತೆಯ ಸಭೆಯಲ್ಲಿ ಈ ತೀರ್ಮಾನವಾಗಿದೆ. ಮೈಸೂರು ಲಾಯೋ ಅಂಡ್ ಇನ್ಫ್ರಾ ಪಾಲುದಾರರಾದ ಜಿ.ಎಂ.ಮಧು ಅವರು ಎಂಡಿಎ ಆಯುಕ್ತ ರಕ್ಷಿತ್ ಅವರ ಮೇಲೆ ಒತ್ತಡ ತಂದು ಇದನ್ನು ನಿರ್ಣಯಿಸಿದ್ದಾರೆ ಎಂದು ಆರೋಪಿಸಿದರು.

ಕಾನೂನು ಬಾಹಿರವಾಗಿ ಭೂ ಪರಿ ವರ್ತನೆ ಮಾಡಬಾರದು, ಪ್ರಭಾವಿಗಳ ಒತ್ತಡಕ್ಕೆ ಮಣಿಯಬಾರದು ಎಂದು ಎಂಡಿಎ ಆಯುಕ್ತ ರಕ್ಷಿತ್ ಅವರಿಗೆ ಸಲಹೆ ನೀಡಿದ್ದೆ. ಇದಕ್ಕೆ ಅವರು ಕೂಡ ಸಮ್ಮತಿಸಿದ್ದರು. ಆದರೆ ರಕ್ಷಿತ್ ಅವರು ಕೊನೆಗೂ ಭೂ ಮಾಫಿಯಾದ ಒತ್ತಡಕ್ಕೆ ಮಣಿದು ಭೂ ಪರಿವರ್ತನೆ ಮಾಡಿದ್ದಾರೆ. ಮೇಲ್ನೋಟಕ್ಕೆ ನೋಡಿದಾಗ ಈ ಹಗರಣದಲ್ಲಿ ರಕ್ಷಿತ್ ಪಾತ್ರ ಪ್ರಮುಖವಾಗಿ ರುವಂತೆ ಕಂಡು ಬಂದಿದೆ ಎಂದು ದೂರಿದರು.

ಕಾನೂನು ಬಾಹಿರವಾಗಿ ಭೂ ಪರಿವರ್ತನೆ ಮಾಡಿರುವ ಆದೇಶವನ್ನು ಎಂಡಿಎ ರದ್ದು ಮಾಡಬೇಕು. ಸರ್ಕಾರ ಕೂಡ ಭೂ ಮಾಫಿಯಾಗೆ ಮಣಿಯದೆ ಭೂ ಪರಿ ವರ್ತನೆಗೆ ಅನುಮತಿ ನೀಡಬಾರದು. ಈ ಮೂಲಕ ಮೈಸೂರಿಗೆ ಕಳಸಪ್ರಾಯ ವಾಗಿರುವ ಹಾಗೂ ಧಾರ್ಮಿಕ ಹಿನ್ನೆಲೆಯ ಚಾಮುಂಡಿಬೆಟ್ಟವನ್ನು ರಕ್ಷಿಸಬೇಕು ಎಂದು ಶ್ರೀವತ್ಸ ಆಗ್ರಹಿಸಿದರು.

ಕೋಟ್ಯಾಂತರ ಮೌಲ್ಯದ ಸೈಟ್ ಬಡವರಿಗೆ ನೀಡುತ್ತಾರಂತೆ....



ಶ್ರೀವತ್ಸ

ಭೂ ಮಾಲೀಕರು, ಭೂ ಪರಿವರ್ತನೆಗೆ ನೀಡಿರುವ ಕಾರಣ ನಿಜವಾಗಿಯೂ ಹಾಸ್ಯಾಸ್ಪದ ಸಂಗತಿ! ಬಡವರ ಅನುಕೂಲಕ್ಕಾಗಿ ಭೂ ಪರಿವರ್ತನೆಗೆ ಕೋರಿದ್ದಾರಂತೆ. ಭೂ ಮಾಲೀಕರು ನೀಡಿರುವ ಈ ಕಾರಣ ಒಪ್ಪಿ ಎಂಡಿಎ ಸಭೆ ಅನುಮತಿ ಮುದ್ರೆ ಒತ್ತಿದೆ ಎಂದು ಶಾಸಕ ಶ್ರೀವತ್ಸ ಹೇಳಿದರು. ಬಡವರಿಗಾಗಿ ಭೂ ಪರಿವರ್ತನೆ ಮಾಡಿಸಿಕೊಂಡಿರುವ ಇವರು ಬಡಾವಣೆ ನಿರ್ಮಾಣವಾದ ಮೇಲೆ ಬಡವರಿಗೆ ನಿಜವಾಗಿಯೂ ಕೈಗೆಟಕುವ ದರದಲ್ಲಿ ನಿವೇಶನ ಕೊಡುತ್ತಾರೆಯೇ, ಇವರು ಇಷ್ಟೊಂದು ಉದಾರ ಮನೋಭಾವವುಳ್ಳವರೇ ಎಂದು ಪ್ರಶ್ನಿಸಿದರು. ಕೆ.ಸಿ.ಲೇಔಟ್‌ನಲ್ಲಿ ಒಂದೊಂದು ನಿವೇಶನ ಕೋಟಿ ರೂಪಾಯಿ ಮೀರುತ್ತದೆ. ಹೀಗಿರುವಾಗ ಕೋಟ್ಯಾಂತರ ರೂಪಾಯಿ ಮೌಲ್ಯದ ನಿವೇಶನವನ್ನು ಇವರು ಬಡವರಿಗೆ ನೀಡುವರೇ ಎಂದು ಶ್ರೀವತ್ಸ ಅಚ್ಚರಿಯಿಂದಲೇ ಕೇಳಿದರು.

ಮುಡಾ ಎಂಡಿಎ ಆಗಿ ಮಾತ್ರ ಬದಲಾಗಿಲ್ಲ; ಅದರ ಭ್ರಷ್ಟಾಚಾರವೂ ವರ್ಗಾವಣೆಯಾಗಿದೆಯೆ!?

ಭ್ರಷ್ಟಾಚಾರ ಮುಕ್ತಗೊಳಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ವಾಗಿ ಸರ್ಕಾರ ಪರಿವರ್ತನೆ ಮಾಡಿರಬಹುದು. ಆದರೆ, ಭ್ರಷ್ಟಾಚಾರ ಮುಕ್ತ ಮಾಡಲು ಸಾಧ್ಯವಾಗಲೇ ಇಲ್ಲ. ಮುಡಾ, ಎಂಡಿಎ ಆಗಿ ಬದಲಾಗುವುದರ ಜೊತೆಯಲ್ಲಿ ಅದರ ಭ್ರಷ್ಟಾಚಾರವೂ ವರ್ಗಾವಣೆಯಾಗಿರಬಹುದೇ ಎಂಬ ಅನುಮಾನವನ್ನು ಮೇಲಿನ ಕಾರಣಗಳನ್ನು ಆಧರಿಸಿ ಶಾಸಕ ಶ್ರೀವತ್ಸ ವ್ಯಕ್ತಪಡಿಸಿದ್ದಾರೆ. ಮುಡಾದ ಸಾವಿರಾರು ಕೋಟಿ ರೂಪಾಯಿಗಳ ಬ್ರಹ್ಮಾಂಡ ಭ್ರಷ್ಟಾಚಾರ ಇಡೀ ರಾಜ್ಯ ಮಾತ್ರವಲ್ಲದೆ ದೇಶದಲ್ಲೆ ಸದ್ದು ಮಾಡಿತ್ತು. ಈ ಹಿನ್ನೆಲೆಯಲ್ಲಿ ಹಲವು ಸುಧಾರಣೆ ತರುವ ನಿಟ್ಟಿನಲ್ಲಿ ಮುಡಾದಲ್ಲಿ ಶಾಸಕರ ಸದಸ್ಯತ್ವವನ್ನು ರಾಜ್ಯ ಸರ್ಕಾರ ರದ್ದುಗೊಳಿಸಿತು. ಮುಡಾಗಿಂತಲೂ ಎಂಡಿಎ ಅವಧಿಯಲ್ಲೇ ಕಾನೂನು ಬಾಹಿರ ಕೃತ್ಯ ನಡೆಯುತ್ತಿರುವ ಅನುಮಾನವನ್ನು ಶಾಸಕರು ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಮುಡಾ ಇದ್ದಾಗ ನಡೆದ ಭ್ರಷ್ಟಾಚಾರಗಳಿಗೆ ಶಾಸಕರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತಿತ್ತು. ಆದರೆ ಈಗ ಶಾಸಕರಿಲ್ಲ, ಹಾಗಾದರೆ ಈಗ ನಡೆಯುತ್ತಿರುವ ಅವ್ಯವಹಾರಕ್ಕೆ ಯಾರು ಹೊಣೆ?

ಹಸಿರು ಮುಕ್ತವಾಗಿ, ಕಾಂಕ್ರಿಟ್ ಕಾಡಾಗುತ್ತದೆ

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಿರ್ಣಯವನ್ನು ಅಂಗೀಕರಿಸಿ ರಾಜ್ಯ ಸರ್ಕಾರ ಕೂಡ ಭೂ ಪರಿವರ್ತನೆಗೆ ಅವಕಾಶ ನೀಡಿದರೆ ಚಾಮುಂಡಿಬೆಟ್ಟದ ತಪ್ಪಲಿನ ಹಸಿರು ವನ ಕಾಂಕ್ರಿಟ್ ಕಾಡಾಗುವುದರಲ್ಲಿ ಅನುಮಾನವಿಲ್ಲ. ಚಾಮುಂಡಿಬೆಟ್ಟದ ತಪ್ಪಲಿನ ಸಾವಿರಾರು ಎಕರೆ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿದೆ. ಈಗ 50 ಎಕರೆಯ ಭೂ ಪರಿವರ್ತನೆ ಮುಂದೊಂದು ದಿನ ಸಾವಿರಾರು ಎಕರೆಯನ್ನು ಮೀರುತ್ತದೆ. ಆ ವೇಳೆ ಬೆಟ್ಟದ ತಪ್ಪಲು ಹಸಿರು ಮುಕ್ತವಾಗಿ ಅಪಾರ್ಟ್‌ಮೆಂಟ್ ಸೇರಿ ಇತರೆ ಕಟ್ಟಡ ಗಳಿಂದ ಆವೃತ್ತವಾಗುತ್ತದೆ. ಇದರಿಂದ ಸಹಜವಾಗಿಯೇ ಹಸಿರು ಮಾಯವಾಗಲಿದೆ. ಇದಕ್ಕೆ ಸರ್ಕಾರ ಅವಕಾಶ ನೀಡಬಾರದು ಎಂಬುದು ಪರಿಸರವಾದಿಗಳ ಆಗ್ರಹ.

ಇಂದಿನಿಂದ ಮೈಸೂರು, ಕೊಡಗಿನಲ್ಲಿ ಮಾಜಿ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಪ್ರವಾಸ



ಮೈಸೂರು,ಫೆ.12(ಪಿಎಂ)– ಮಾಜಿ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅವರು ತಮ್ಮ ಪತ್ನಿಯ ವರೊಂದಿಗೆ ಮೈಸೂರು, ಕೊಡಗು ಹಾಗೂ ಬೆಂಗಳೂರಿನಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಫೆ.13ರಂದು ಸಂಜೆ 5.25ಕ್ಕೆ ಚೆನ್ನೈ ವಿಮಾನ ನಿಲ್ದಾಣದಿಂದ ವಿಮಾನದಲ್ಲಿ ಹೊರಡುವ ಅವರು, ಸಂಜೆ 6.45ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ನಂತರ ರಾತ್ರಿ 7ಕ್ಕೆ ಮೈಸೂರಿನ ನಜರ್‌ಬಾದಿನ ಸರ್ಕಾರಿ ಅತಿಥಿಗೃಹಕ್ಕೆ ಆಗಮಿಸಿ, ವಾಸ್ತವ್ಯ ಹೂಡಲಿದ್ದಾರೆ. ಫೆ.14ರಂದು ಬೆಳಗ್ಗೆ 9.50ಕ್ಕೆ ಮೈಸೂರಿನ ಸರ್ಕಾರಿ ಅತಿಥಿಗೃಹದಿಂದ ನಿರ್ಗಮಿಸಿ, ಮೈಸೂರು ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ಹೊರಟು, ಬೆಳಗ್ಗೆ 11 ಗಂಟೆಗೆ ಮಡಿಕೇರಿಯ ಟಿಂಬರ್ ಟೇಲ್ಸ್ ಹೆಲಿಪ್ಯಾಡ್ ತಲುಪಲಿದ್ದಾರೆ.

ಬಳಿಕ ರಸ್ತೆ ಮಾರ್ಗವಾಗಿ ಮಡಿಕೇರಿಗೆ ಆಗಮಿಸಿ ಗ್ರೀನ್ ಪಾರ್ಕ್‌ನಲ್ಲಿ ಕೂರ್ಗ್ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಗ್ರೀನ್ ಪಾರ್ಕ್‌ನಲ್ಲಿ ವಾಸ್ತವ್ಯ ಹೂಡುವ ಅವರು, ಫೆ.15ರಂದು ಬೆಳಗ್ಗೆ 9.30ಕ್ಕೆ ಬೆಳಗ್ಗೆ ಗ್ರೀನ್ ಪಾರ್ಕ್‌ನಲ್ಲಿ ಆಯೋಜಿಸಿರುವ ಅಟ್ಲೂರಿ ಪೂರ್ಣಚಂದ್ರರಾವ್ ಅವರ 90ನೇ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಫೆ.18ರಂದು ಮೈಸೂರು ಮೂಲಕ ರೈಲಿನಲ್ಲಿ ಬೆಂಗಳೂರು ತಲುಪಲಿದ್ದಾರೆ. ಫೆ.19ರಿಂದ 21ರವರೆಗೆ ಬೆಂಗಳೂರಿನ ರಾಜಭವನದಲ್ಲಿ ವಾಸ್ತವ್ಯ ಹೂಡಲಿದ್ದು, ಫೆ.21ರ ಬೆಳಗ್ಗೆ ಬೆಂಗಳೂರಿಂದ ನಿರ್ಗಮಿಸಲಿದ್ದಾರೆ.

ಅಭಿನಂದನೆ




ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 12ನೇ ವರ್ಷದ ಕುಂಭಾಭಿಷೇಕ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಹಾಲಿ ಶಾಸಕ ಕೆ.ಹರೀಶ್‌ಗೌಡರು ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ದೇವಸ್ಥಾನ ಸಮಿತಿ ಅಧ್ಯಕ್ಷ ಬಸವರಾಜಣ್ಣ, ಖಜಾಂಚಿ ಮೊಗಣ್ಣ, ಪದಾಧಿಕಾರಿಗಳಾದ ಮೊಗಣ್ಣ, ಶಿವಣ್ಣ, ರಾಜ್‌ಕುಮಾರ್, ಎಂ.ರವಿಗೌಡ, ಎಂ.ಸತೀಶ, ಟಿ.ರವಿಗೌಡ, ಟಿ.ರಾಘವೇಂದ್ರ, ಬಿ.ಕುಮಾರ್ ಇತರರು ಅಭಿನಂದಿಸಿದರು.

ಅರ್ಕಧಾಮದಲ್ಲಿ ಶ್ರೀ ಅರ್ಕ ಮಹಾಗಣಪತಿಯ ವಾರ್ಷಿಕೋತ್ಸವ

ಮೈಸೂರು, ಫೆ 12– ಮೈಸೂರಿನ ಬೋಗಾದಿ–ಗದ್ದಿಗೆ ಮುಖ್ಯರಸ್ತೆಯಲ್ಲಿರುವ ಅರ್ಕಧಾಮದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಅರ್ಕ ಮಹಾಗಣಪತಿಯ ದೇವಸ್ಥಾನದ ದ್ವಿತೀಯ ವಾರ್ಷಿಕೋತ್ಸವವು ಫೆಬ್ರವರಿ 13ರ ಸಂಜೆ 5.30ಕ್ಕೆ ಹಾಗೂ ಫೆಬ್ರವರಿ 14ರ ಬೆಳಗ್ಗೆ 7ಗಂಟೆಯಿಂದ ನಡೆಯಲಿದೆ. ಫೆ.13ರ ಸಂಜೆ ಪ್ರಧಾನ ಅರ್ಕ ಮಹಾಗಣಪತಿಗೆ ಶಾಸ್ತ್ರೋಕ್ತವಾದ ಪೂಜೆಯೊಂದಿಗೆ ಆರಂಭವಾಗಿ ಮಹಾ ನೀರಾಜನಂ ಸಮರ್ಪಣೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಫೆ.14ರ ಬೆಳಗ್ಗೆ 7 ಗಂಟೆಯಿಂದ ಪ್ರಾರಂಭಗೊಳ್ಳುವ ಗಣಪತಿ ಪೂಜೆ, ಪುಣ್ಯಾರ್ಚನೆ, ಗೋಪೂಜೆ, ಅಭಿಷೇಕ, ಗಣಪತಿ ಹೋಮ, ಮಹಾಪೂರ್ಣಾಹುತಿಯೊಂದಿಗೆ ಪೂಜಾ ಕೈಂಕರ್ಯಗಳು ಸಮಾಪ್ತಿಗೊಳ್ಳಲಿದ್ದು, ನಂತರ ಸಭಾ ಕಾರ್ಯಕ್ರಮ ಆರಂಭವಾಗಲಿದೆ. ಈ ಕಾರ್ಯಕ್ರಮದಲ್ಲಿ ಶ್ರೀ ನೀಲಕಂಠ ಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ, ಮಹಾಂತ ಸ್ವಾಮಿ ಮಠದ ಶ್ರೀ ಬಸವಲಿಂಗ ಸ್ವಾಮೀಜಿ, ಶ್ರೀ ಬಸವೇಶ್ವರ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಬರಡನಪುರ ಮಠದ ಶ್ರೀ ಪರಶಿವ ಮೂರ್ತಿ ಸ್ವಾಮೀಜಿ, ಸಂಗಮ ಮಠದ ಶ್ರೀ ಮಹೇಶ್ವರ ಸ್ವಾಮೀಜಿ ಹಾಗೂ ಶೆಟ್ಟನಾಯಕನ ಹಳ್ಳಿ ಮಠದ ಶ್ರೀ ಬಸವಣ್ಣ ಸ್ವಾಮೀಜಿ ಮುಂತಾದವರು ಭಾಗವಹಿಸಲಿದ್ದು, ದಿವ್ಯ ಸಾನ್ನಿಧ್ಯವನ್ನು ಅರ್ಕಧಾಮದ ಸಂಸ್ಥಾಪಕರಾದ ಯೋಗಿ ಶ್ರೀ ಶ್ರೀನಿವಾಸ ಅರ್ಕರವರು ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪ್ರವೀಣ್ ಕುಮಾರ್ (9606954535, 9606954534) ಅವರನ್ನು ಸಂಪರ್ಕಿಸಬಹುದಾಗಿದೆ.

ಬವೇರಿಯಾ ಪ್ರವಾಸದಲ್ಲಿ ಸಂಸದ ಯದುವೀರ್ ಒಡೆಯರ್...



ಮೈಸೂರು ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಫೆ.11ರಿಂದ 15ರವರೆಗೆ ಬವೇರಿಯಾದ ಮ್ಯೂನಿಚ್‌ನಲ್ಲಿ ಉನ್ನತ ಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಭಾರತ, ಬವೇರಿಯಾ ಮತ್ತು ಯುರೋಪಿಯನ್ ಒಕ್ಕೂಟದ ನಡುವಿನ ಕಾರ್ಯತಂತ್ರದ ಸಂವಾದ ಹಾಗೂ ಸಹಕಾರ ಕಾರ್ಯಕ್ರಮಗಳಲ್ಲಿ ಸಕ್ರಿಯಾರಾಗಿರದ್ದಾರೆ. ಅವರೊಂದಿಗೆ ಜರ್ಮನಿ ರಾಜಕೀಯ ನಾಯಕ ಮಾರ್ಕಸ್ ಫೆರ್ಬರ್ ಚಿತ್ರದಲ್ಲಿದ್ದಾರೆ.

ದೂರದರ್ಶನದ ಖ್ಯಾತ 'ನ್ಯೂಸ್ ಆಂಕರ್' ಸರಳ ಮಹೇಶ್ವರಿ ನಿಧನ!



ನವದೆಹಲಿ, ಫೆ.12– ದೂರದರ್ಶನದ ಖ್ಯಾತ ನ್ಯೂಸ್ ರೀಡರ್ ಸರಳ ಮಹೇಶ್ವರಿ ನಿಧನರಾಗಿದ್ದಾರೆ. ಅವರಿಗೆ 71 ವರ್ಷ ವಯಸ್ಸಾಗಿತ್ತು. 1980ರ ಕಾಲಘಟ್ಟದ ಜನರು ಇಂದಿಗೂ ಸರಳ ಮಹೇಶ್ವರಿ ಅವರನ್ನು ಮರೆತಿಲ್ಲ. ತಮ್ಮ ಸರಳ ವ್ಯಕ್ತಿತ್ವ ಮತ್ತು ಸ್ಪಷ್ಟ ವಾರ್ತಾ ವಾಚನದಿಂದ ಗುರುತಿಸಿಕೊಂಡಿದ್ದ ಅವರು, ಅಂದಿನ ಕಾಲದಲ್ಲಿ ಅನೇಕರಿಗೆ ಸ್ಫೂರ್ತಿಯಾಗಿದ್ದರು. ದೂರದರ್ಶನ ಕುಟುಂಬದ ಪರವಾಗಿ ಸರಳ ಮಹೇಶ್ವರಿ ನಿಧನಕ್ಕೆ ನಮ್ಮ ಹೃದಯ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತೇವೆ. ತಮ್ಮ ಸೌಮ್ಯವಾದ ಧ್ವನಿ, ನಿಖರವಾದ ಉಚ್ಚಾರಣೆಯಿಂದ ಭಾರತೀಯ ಸುದ್ದಿ ಪ್ರಪಂಚದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದಾರೆ ಎಂದು ಟ್ವೀಟ್‌ನಲ್ಲಿ ಸ್ಮರಿಸಲಾಗಿದೆ.

ಅರಣ್ಯ ಹಕ್ಕು ಕಾಯ್ದೆ ನಿಯಮದಂತೆ ಆದಿವಾಸಿಗಳಿಗೆ ಹಕ್ಕು ಪತ್ರ ಸೇರಿದಂತೆ ಸೌಲಭ್ಯಗಳನ್ನು ಕಲ್ಪಿಸಿಕೊಡಿ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಅರಣ್ಯ ಹಕ್ಕು ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿ, ಸಿಬ್ಬಂದಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಡಿಸಿಎಫ್ ಕೆ.ಪರಮೇಶ್ ಉದ್ಘಾಟಿಸಿದರು.

ಮೈಸೂರು, ಫೆ.12(ಎಂಟಿವೈ)– ಅರಣ್ಯ ದಂಚಿನಲ್ಲಿರುವ ಆದಿವಾಸಿಗಳಿಗೆ ಮೂಲ ಭೂತ ಸೌಲಭ್ಯ ಕಲ್ಪಿಸಲು ಅರಣ್ಯ ಹಕ್ಕು ಕಾಯ್ದೆ ನಿಯಮದಂತೆ ಹಕ್ಕುಪತ್ರ ಸೇರಿದಂತೆ ವಿವಿಧ ಸೌಲಭ್ಯ ಕಲ್ಪಿಸಿಕೊಡಲು ಎಲ್ಲಾ ಇಲಾಖೆಗಳು ಜಂಟಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಡಿಸಿಎಫ್ ಕೆ.ಪರಮೇಶ್ ತಿಳಿಸಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಅರಣ್ಯ ಹಕ್ಕು ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿ, ಸಿಬ್ಬಂದಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅರಣ್ಯ ಹಕ್ಕು ಕಾಯ್ದೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಂಬಂಧಿಸಿದ ವಿವಿಧ ಇಲಾಖೆಗಳು ಜಂಟಿಯಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಕ್ಕೆ ಕಲ್ಪಿಸಬೇಕಾದ ಸೌಲಭ್ಯಗಳನ್ನು ನಿಯಮಾನುಸಾರ ಒದಗಿಸುವಲ್ಲಿ ವಿವಿಧ ಇಲಾಖೆಗಳ ಸಹಕಾರ ಅಗತ್ಯ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳಿಗೆ ಕಾಯ್ದೆ ನಿಯಮ ಕುರಿತು ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಸರಗೂರು ತಾಲೂಕು ತಹಸೀಲ್ದಾರ್ ಮೋಹನ್‌ಕುಮಾರಿ ಮಾತನಾಡಿ, ಸರಗೂರು ಹಾಗೂ ಹೆಚ್.ಡಿ.ಕೋಟೆ ತಾಲೂಕುಗಳಲ್ಲಿ ಹೆಚ್ಚು ಅರಣ್ಯ ವಾಸಿಗಳು ವಾಸವಿದ್ದು, ಹುಲಿ ದಾಳಿಗೆ ಆಗಾಗ್ಗೆ ಒಳಗಾಗುತ್ತಿದ್ದಾರೆ. ಆ ಜನರಿಗೆ ರಕ್ಷಣೆ ನೀಡಲು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಅರಣ್ಯ ಹಕ್ಕು ಕಾಯ್ದೆ ನಿಯಮವನ್ನು ಗ್ರಾಮಮಟ್ಟದಿಂದ ಅನುಷ್ಠಾನಗೊಳಿಸಬೇಕು ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯ ಅಧಿಕಾರಿ ಎಂ.ಕೆ.ಮಲ್ಲೇಶ್ ಮಾತನಾಡಿ, ಮೈಸೂರು ಜಿಲ್ಲೆಯ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ಅರಣ್ಯ ಹಕ್ಕು ಕ್ಲೇಮುಗಳು ಬಾಕಿ ಇದ್ದು, ಸದರಿ ಕ್ಲೇಮುಗಳನ್ನು ಇತ್ಯರ್ಥಪಡಿಸಲು ಯಾವ ದಾಖಲೆಗಳು ಅಗತ್ಯ ಇವೆ ಪಿಡಿಓ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸಮನ್ವಯತೆ ಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಹೆಚ್.ಎಸ್. ಗಿರಿಜಾಂಬ ಮಾತನಾಡಿ, ಪಿಡಿಓಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಇಂತಹ ತರಬೇತಿಗಳ ಅವಶ್ಯಕತೆ ಇದ್ದು, ಇದರಿಂದ ಬುಡಕಟ್ಟು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದರು.

ಸಮಾರಂಭದಲ್ಲಿ ಹುಣಸೂರು ತಹಸೀಲ್ದಾರ್ ಮಂಜುನಾಥ್, ಮಳವಳ್ಳಿ ತಹಸೀಲ್ದಾರ್ ಲೋಕೇಶ್, ಪಾಂಡವಪುರ ತಹಸೀಲ್ದಾರ್ ಪ್ರಕಾಶ್, ಭೂದಾಖಲೆಗಳ ಜಂಟಿ ನಿರ್ದೇಶಕರಾದ ವಿರೂಪಾಕ್ಷ, ರಮ್ಯ, ಇಓ ಪ್ರೇಮ್‌ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ವೈ ಗಿರಿರಾವ್, ಪ್ರಿಯಾಂಕ್, ಕೃಷ್ಣಮೂರ್ತಿ, ದಿನೇಶ್, ತಾಲೂಕು ಕಲ್ಯಾಣಾಧಿಕಾರಿಗಳು ಉಪಸ್ಥಿತರಿದ್ದರು.

ನಮೀಬಿಯಾ ವಿರುದ್ಧ ಭಾರತಕ್ಕೆ ಭರ್ಜರಿ ಜಯ

● ಹಾರ್ದಿಕ್ ಪಾಂಡ್ಯ ಆಲ್‌ರೌಂಡರ್ ಪ್ರದರ್ಶನ ● ಇಶಾನ್ ಕಿಶನ್ ವೇಗದ ಅರ್ಧಶತಕ



ಹಾರ್ದಿಕ್ ಪಾಂಡ್ಯ ಶಿವಂ ದುಬೆ ರನ್‌ಗಾಗಿ ಓಡುತ್ತಿರುವುದು

ಡೆಲ್ಲಿ, ಫೆ.12(ವಿವಿಹೆಚ್)– ಹಾರ್ದಿಕ್ ಪಾಂಡ್ಯ ಅವರ ಆಲ್‌ರೌಂಡರ್ ಆಟದ ಬಲದಿಂದ ಅತಿಥೇಯ ಭಾರತ ತಂಡ ನಮೀಬಿಯಾ ವಿರುದ್ಧ 93 ರನ್ ಜಯ ಸಾಧಿಸಿ, ಗ್ರೂಪ್ 'ಎ' ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಐಸಿಸಿ ಟಿ20 ವಿಶ್ವಕಪ್ 2026ರ ಗ್ರೂಪ್ ಹಂತದ 18ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತ ತಂಡ ಇಶಾನ್ ಕಿಶನ್ ಹಾಗೂ ಹಾರ್ದಿಕ್ ಪಾಂಡ್ಯರ ಅರ್ಧ ಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 209 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ನಮೀಬಿಯಾ 18.2 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 116 ರನ್ ಗಳಿಸಿ, ಸೋಲೊಪ್ಪಿಕೊಂಡಿತು.

ಭಾರತದ ಪರ ಆರಂಭಿಕರಾಗಿ ಸಂಜು ಸ್ಯಾಮ್ಸನ್ ಹಾಗೂ ಇಶಾನ್ ಕಿಶನ್ ಕಣಕ್ಕಿಳಿದರು. ವೇಗವಾಗಿ ಇನ್ನಿಂಗ್ಸ್ ಕಟ್ಟಲು ಆರಂಭಿಸಿದ ಸಂಜು ಸ್ಯಾಮ್ಸನ್ 8 ಎಸೆತಗಳಲ್ಲಿ 1 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 22 ರನ್ ಬಾರಿಸಿ ಎರಡನೇ ಓವರ್‌ನಲ್ಲೇ ಪೆವಿಲಿಯನ್ ಸೇರಿಕೊಂಡರೆ, ಇಶಾನ್ ಕಿಶನ್ 24 ಎಸೆತಗಳಲ್ಲಿ 6 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 61 ರನ್ ಬಾರಿಸಿ ನಿರ್ಗಮಿಸಿದರು.

ಬಳಿಕ ಕ್ರೀಸ್‌ಗೆ ಬಂದ ತಿಲಕ್ ವರ್ಮಾ 25, ನಾಯಕ ಸೂರ್ಯಕುಮಾರ್ ಯಾದವ್ 12, ಹಾರ್ದಿಕ್ ಪಾಂಡ್ಯ 28 ಎಸೆತಗಳಲ್ಲಿ 4 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 52 ರನ್ ಬಾರಿಸಿದರು. ಇನ್ನುಳಿದಂತೆ ಶಿವಮ್ ದುಬೆ 22 ರನ್‌ಗೆ ವಿಕೆಟ್ ಒಪ್ಪಿಸಿದರೆ, ರಿಂಕು ಸಿಂಗ್ ಕೇವಲ 1 ರನ್, ಅಕ್ಷರ್ ಪಟೇಲ್ ಡಕ್‌ಔಟ್, ಅರ್ಷದೀಪ್ ಸಿಂಗ್ 2 ರನ್ ಹಾಗೂ ವರುಣ್ ಚಕ್ರವರ್ತಿ ಯಾವುದೇ ರನ್ ಕಲೆಹಾಕದೆ ಅಜೇಯರಾಗಿ ಉಳಿದರು.

ನಮೀಬಿಯಾ ಪರ ನಾಯಕ ಗೆರ್ಹಾರ್ಡ್ ಎರಾಸ್ಮಸ್ ಪ್ರಮುಖ ನಾಲ್ಕು ವಿಕೆಟ್ ಪಡೆದು ಮಿಂಚಿದರು. ಬೆನ್ ಶಿಕಾಂಗೋ, ಜೆಜೆ ಸ್ಮಿಟ್ ಹಾಗೂ ಬೆರ್ನಾರ್ಡ್ ಸ್ಕಾಲ್ಟ್ಜ್ ತಲಾ ಒಂದೊಂದು ವಿಕೆಟ್ ಪಡೆದರು.

ಭಾರತ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ನಮೀಬಿಯಾಗೆ ಉತ್ತಮ ಆರಂಭ ದೊರೆಯಿತು. ಲೌರೆನ್ ಸ್ಟೀನ್‌ಕ್ಯಾಂಪ್ 29, ಜಾನ್ ಫ್ರೈಲಿಂಕ್ 22 ರನ್ ಗಳಿಸಿ ನಿರ್ಗಮಿಸಿದರು. ಜಾನ್ ನಿಕೋಲ್ ಲಾಫ್ಟಿ–ಈಟನ್ 13, ಹಾಗೂ ನಾಯಕ ಎರಾಸ್ಮಸ್ 18 ರನ್ ಗಳಿಸಿ ಔಟಾದರು.

ಬಳಿಕ ಮಧ್ಯಮ ಕ್ರಮಾಂಕದ ದಿಢೀರ್ ಕುಸಿತ ತಂಡಕ್ಕೆ ಹಿನ್ನಡೆ ಉಂಟು ಮಾಡಿತು. ಜೆಜೆ ಸ್ಮಿಟ್ ಡಕ್‌ಔಟ್, ಮಲಾನ್ ಕ್ರೂಗರ್ 5, ರುಬೆಲ್ ಟ್ರಂಪೆಲ್‌ಮನ್ 6, ಬರ್ನಾರ್ಡ್ ಸ್ಕಾಲ್ಟ್ಜ್ 4, ಬೆನ್ ಶಿಕೊಂಗೊ ಗೋಲ್ಡ್ ಡಕ್ ಆಗುವ ಮೂಲಕ ಒಂದಂಕಿ ಮೊತ್ತಕ್ಕೆ ಸುಸ್ತಾದರು. ಜೇನ್ ಗ್ರೀನ್ 11 ರನ್ ಗಳಿಸಿದರೆ, ಮ್ಯಾಕ್ಸ್ ಖಾತೆ ತೆರೆಯಲಿಲ್ಲ.

ಟೀಂ ಇಂಡಿಯಾ ಪರ ವರುಣ್ ಚಕ್ರವರ್ತಿ 3 ವಿಕೆಟ್, ಹಾರ್ದಿಕ್ ಪಾಂಡ್ಯ ಹಾಗೂ ಅಕ್ಷರ್ ಪಟೇಲ್ ತಲಾ 2 ವಿಕೆಟ್, ಬುಮ್ರಾ, ಶಿವಂ ದುಬೆ ಹಾಗೂ ಅರ್ಶ್‌ದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು.

ಬ್ಯಾಟಿಂಗ್‌ನಲ್ಲಿ ಅರ್ಧಶತಕ, ಬೌಲಿಂಗ್‌ನಲ್ಲಿ ಪ್ರಮುಖ 2 ವಿಕೆಟ್ ಪಡೆದ ಹಾರ್ದಿಕ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಓಮನ್ ವಿರುದ್ಧ ಶ್ರೀಲಂಕಾಕ್ಕೆ 105 ರನ್‌ಗಳ ಜಯ




ಪಲ್ಲೆಕೆಲೆ, ಫೆ.12(ವಿವಿಹೆಚ್)– ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ವಿಭಾಗಗಳಲ್ಲಿಯೂ ಅದ್ಭುತ ಪ್ರದರ್ಶನ ತೋರಿದ ಅತಿಥೇಯ ಶ್ರೀಲಂಕಾ ತಂಡ ಓಮನ್ ವಿರುದ್ಧ 105ರನ್‌ಗಳ ಭಾರೀ ಅಂತರದ ಗೆಲುವು ದಾಖಲಿಸಿದೆ.

ಇಲ್ಲಿನ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ 2026ರ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 225 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಆರಂಭಿಕ ಆಟಗಾರರು ಬೇಗನೆ ಔಟಾದರು, ಕುಸಲ್ ಮೆಂಡಿಸ್ (61 ರನ್), ಪವನ್ ರತ್ನಾಯಕೆ (60 ರನ್) ಮತ್ತು ದಸುನ್ ಶನಕ (50 ರನ್) ಅವರ ಸ್ಫೋಟಕ ಅರ್ಧಶತಕಗಳು ತಂಡದ ಬೃಹತ್ ಮೊತ್ತಕ್ಕೆ ಕಾರಣವಾದವು. ವಿಶೇಷವಾಗಿ ಶನಕ ಕೇವಲ 20 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಅಬ್ಬರಿಸಿದರು.

ಓಮನ್ ಪರ ಜಿತೆನ್ ರಾಮನಂದಿ 2 ವಿಕೆಟ್, ಮೆಹಮೂದ್ ಹಾಗೂ ಜೈ ಓಡೆದ್ರಾ ತಲಾ ಒಂದೊಂದು ವಿಕೆಟ್ ಪಡೆದರು.

226 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಓಮನ್ ತಂಡಕ್ಕೆ ಶ್ರೀಲಂಕಾ ಬೌಲರ್‌ಗಳು ಆರಂಭದಲ್ಲೇ ಆಘಾತ ನೀಡಿದರು. ಮಹೀಶ್ ತೀಕ್ಷಣ ಮತ್ತು ದುಶ್ಮಂತ ಚಮೀರ ತಲಾ ಎರಡು ವಿಕೆಟ್ ಪಡೆಯುವ ಮೂಲಕ ಓಮನ್ ರನ್ ಗತಿಗೆ ಬ್ರೇಕ್ ಹಾಕಿದರು. ಓಮನ್ ಪರ ಮೊಹಮ್ಮದ್ ನದೀಮ್ ಏಕಾಂಗಿ ಹೋರಾಟ ನಡೆಸಿ ಅಜೇಯ 53 ರನ್ ಗಳಿಸಿದರೂ, ಅದು ತಂಡದ ಸೋಲನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಓಮನ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 120 ರನ್ ಗಳಿಸಲಷ್ಟೇ ಶಕ್ತವಾಯಿತು. ಲಂಕಾ ಪರ ಚಾಮಿರಾ, ತೀಕ್ಷಣ ತಲಾ 2 ವಿಕೆಟ್, ವೆಲ್ಲಲಗೆ, ಹೇಮಂತಾ ಹಾಗೂ ಕಮಿಂದು ಮೆಂಡೀಸ್ ತಲಾ ಒಂದೊಂದು ವಿಕೆಟ್ ಪಡೆದರು.

ನೇಪಾಳ ಮಣಿಸಿದ ಇಟಲಿ




ಮುಂಬೈ, ಫೆ.12(ವಿವಿಹೆಚ್)– ಮೋಸ್ಕಾ ಬ್ರದರ್ಸ್ ಅವರ ಶತಕದ ಜೊತೆಯಾಟದ ಬಲದಿಂದ ನೇಪಾಳ ತಂಡವನ್ನು 10 ವಿಕೆಟ್‌ಗಳಿಂದ ಮಣಿಸಿದ ಇಟಲಿ, ಆಡಿದ ಮೊದಲ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೇ ಗೆಲುವಿನ ರುಚಿ ಸವಿದಿದೆ.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 17ನೇ ಪಂದ್ಯದಲ್ಲಿ ಟಾಸ್ ಸೋತ ನೇಪಾಳ ತಂಡ 19.3 ಓವರ್‌ಗಳಲ್ಲಿ 123 ರನ್‌ಗೆ ಆಲೌಟ್ ಆಯಿತು. ಈ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಿದ ಇಟಲಿ ಮೋಸ್ಕ ಸಹೋದರರ ಅಬ್ಬರದ ನೆರವಿನಿಂದ 12.4 ಓವರ್‌ಗಳಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೇ 124 ರನ್ ಕಲೆಹಾಕಿ ಚೊಚ್ಚಲ ಗೆಲುವು ದಾಖಲಿಸಿತು.

124ರನ್ ಬೆನ್ನತ್ತಲು ಇಟಲಿ ಪರ ಆರಂಭಿಕರಾಗಿ ಕಣಕ್ಕಿಳಿದ ಸಹೋದರರಾದ ಜಸ್ಟಿನ್ ಮೋಸ್ಕಾ ಹಾಗೂ ಆಂಥೋನಿ ಮೋಸ್ಕಾ ವಿಕೆಟ್ ಒಪ್ಪಿಸದೇ ತಂಡವನ್ನು ಬೇಗನೆ ಗೆಲುವಿನ ದಡ ಸೇರಿಸಿದರು. ಜಸ್ಟಿನ್ ಮೋಸ್ಕಾ 44 ಎಸೆತಗಳಲ್ಲಿ 5 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಅಜೇಯ 60 ರನ್ ಬಾರಿಸಿದರೆ, ಅಂಥೋನಿ ಮೋಸ್ಕಾ 32 ಎಸೆತಗಳಲ್ಲಿ 3 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ ಅಜೇಯ 62 ರನ್ ಬಾರಿಸಿದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ಪರ ನಾಯಕ ರೋಹಿತ್ ಪೌಡೆಲ್ 23, ಆರಿಫ್ ಶೇಖ್ 27, ಆಶಿಫ್ ಶೇಖ್ 20, ದೀಪೇಂದ್ರ ಸಿಂಗ್ 17, ಕೆ.ಸಿ.ಕರಣ್ ಅಜೇಯ 18 ರನ್ ಗಳಿಸಿದರು. ಉಳಿದ ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ಸುಸ್ತಾಗಿ ತಂಡ 120 ರನ್ ಗಳಿಸಲು ಪರದಾಡುವಂತಾಯಿತು.

ಇಟಲಿ ಪರ ಕ್ರಿಶನ್ ಕಲುಗಮಗೆ 3 ವಿಕೆಟ್, ಬೆನ್ ಮನೆಟಿ 2 ವಿಕೆಟ್, ಅಲಿಹಸನ್, ಜೆಜೆ ಸ್ಮಟ್ಸ್ ಹಾಗೂ ಜಸ್ಪ್ರೀತ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ಕ್ರಿಶನ್ ಕಲುಗಮಗೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಅಧಿಕಾರಿಗಳ ತಂಡ ಪರಿಶೀಲನೆ ನಡೆಸುತ್ತಿರುವುದು.

ಕಾವೇರಿ ನದಿ ಬಫರ್ ವಲಯ ಒತ್ತುವರಿ ಪ್ರಕರಣ

ಅನಧಿಕೃತ 2 ಹೋಂಸ್ಟೇಗಳ ಲೈಸನ್ಸ್ ರದ್ದು

ಮಂಡ್ಯ, ಫೆ.12– ಶ್ರೀರಂಗಪಟ್ಟಣ ತಾಲೂಕಿನ ಬಂಗಾರದೊಡ್ಡಿ ನಾಲೆ ಬಳಿ ಕಾವೇರಿ ನದಿ ಪಾತ್ರದ ಬಫರ್ ವಲಯವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ನಡೆಸುತ್ತಿದ್ದ 2 ಹೋಂಸ್ಟೇಗಳ ಲೈಸೆನ್ಸ್ ರದ್ದುಗೊಳಿಸಿ, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಡಾ.ಕುಮಾರ ಆದೇಶಿಸಿದ್ದಾರೆ.

ಕಾವೇರಿ ನದಿಯ ಬಫರ್ ವಲಯವನ್ನು ಅತಿಕ್ರಮಿಸಿಕೊಂಡು ಹೋಂಸ್ಟೇ ನಿರ್ಮಿಸಿರುವುದರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಒತ್ತುವರಿ ತೆರವಿಗೆ ಕ್ರಮ ವಹಿಸುವಂತೆ ಸೂಚಿಸಿದ್ದರು. ಅದರಂತೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹಾಗೂ ಶ್ರೀರಂಗಪಟ್ಟಣ ತಹಸೀಲ್ದಾರ್‌ರಿಂದ ವರದಿ ಪಡೆದುಕೊಂಡಿದ್ದ ಜಿಲ್ಲಾಧಿಕಾರಿ ಡಾ.ಕುಮಾರ ಅವರು, ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯ ಸರ್ವೇ ನಂ. 174/9ರಲ್ಲಿರುವ ಆತ್ಮವೇದ ಹಾಗೂ ಸರ್ವೇ ನಂ.174/5 ರಲ್ಲಿರುವ ಪ್ರಜ್ಞಾ ಹೆಸರಿನ ಹೋಂಸ್ಟೇಗಳಿಗೆ ನೀಡಲಾಗಿದ್ದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ್ದಾರೆ.

ನದಿ ತೀರ ಒತ್ತುವರಿ ಮಾಡಿಕೊಂಡು ಕಟ್ಟಡಗಳನ್ನು ಕಟ್ಟಿದ್ದರೆ ಮಾಲೀಕರಿಗೆ ನೋಟಿಸ್ ಕಳುಹಿಸಿ ಯಾವುದೇ ಮುಲಾಜಿಲ್ಲದೆ ತೆರವುಗೊಳಿಸುವಂತೆ ಜಿಲ್ಲಾಧಿಕಾರಿ, ತಹಸೀಲ್ದಾರ್ ಹಾಗೂ ಕಾವೇರಿ ನೀರಾವರಿ ನಿಗಮದ ಸಹಾಯಕ ಇಂಜಿನಿಯರ್‌ಗೆ ಹೈಕೋರ್ಟ್ ಕೂಡ ಸೂಚನೆ ನೀಡಿತ್ತು.

ಸಮರ್ಪಕ ದಾಖಲೆ ಒದಗಿಸಲು ವಿಫಲ: ಕಾವೇರಿ ನದಿ ಪಾತ್ರದಲ್ಲಿ ಭೂಮಿಯನ್ನು ಒತ್ತುವರಿ ಮಾಡಿ, ದಂಡೆಯಲ್ಲಿ ಮಣ್ಣು ತುಂಬಿ ಎತ್ತರ ಮಾಡಿ, ಕಾಮಗಾರಿ ಕೈಗೊಂಡಿದ್ದರಿಂದ ನದಿಯ ಸ್ವಾಭಾವಿಕ ಹರಿಯುವಿಕೆಗೆ ಅಡಚಣೆ ಉಂಟಾಗಿದೆ ಎಂಬ ಆರೋಪದ ಮೇರೆಗೆ ಸಂಬಂಧಪಟ್ಟ ಹೋಂಸ್ಟೇ ಮಾಲೀಕರಿಗೆ 3 ಬಾರಿ ನೋಟಿಸ್ ನೀಡಿ, ಉತ್ತರಿಸಲು ಕಾಲಾವಕಾಶ ನೀಡಲಾಗಿತ್ತು. ಅಲ್ಲದೇ ಜಿಲ್ಲಾಧಿಕಾರಿ ಹಂತದಲ್ಲಿ ವಿಚಾರಣೆ ನಡೆಸಲು 2 ಬಾರಿ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ ಹೋಂ ಸ್ಟೇ ಮಾಲೀಕರು ನೋಟಿಸ್‌ನಲ್ಲಿ ಕೇಳಲಾದ ಅಂಶಗಳಿಗೆ ಸಂಪೂರ್ಣ ಮತ್ತು ಸಮ್ಮತ ಸಮಜಾಯಿಷಿ ಹಾಗೂ ಪೂರಕ ದಾಖಲೆಗಳನ್ನು ಒದಗಿಸಲು ವಿಫಲರಾಗಿದ್ದರಿಂದ ಲೈಸೆನ್ಸ್ ರದ್ದುಪಡಿಸಿ, ಬೀಗ ಜಡಿಯಲಾಗಿದೆ.

> ಕಾವೇರಿ ನದಿ ಪಾತ್ರದ ಬಫರ್ ವಲಯವನ್ನು ಅತಿಕ್ರಮಿಸಿಕೊಂಡು ಹೋಂಸ್ಟೇ ನಿರ್ಮಿಸಿದ್ದ ಮಾಲೀಕರು ನಿಯಾಮವಳಿಗಳನ್ನು ಪಾಲಿಸದ ಹಿನ್ನೆಲೆಯಲ್ಲಿ ಹಾಗೂ ಹೈಕೋರ್ಟ್ ಆದೇಶದ ಮೇರೆಗೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ನೋಟಿಸ್‌ಗೆ ಸಮರ್ಪಕ ಉತ್ತರ ಬಾರದ ಹಿನ್ನೆಲೆಯಲ್ಲಿ ಎರಡು ಹೋಂಸ್ಟೇ ಲೈಸೆನ್ಸ್‌ಗಳನ್ನು ರದ್ದುಪಡಿಸಿ ಆದೇಶಿಸಲಾಗಿದೆ.
> –ಡಾ.ಕುಮಾರ, ಜಿಲ್ಲಾಧಿಕಾರಿ.

ಜಿಲ್ಲಾಧಿಕಾರಿ ಡಾ.ಕುಮಾರ ಆದೇಶ



ಹೋಂಸ್ಟೇ ಬಂದ್ ಮಾಡಿರುವುದು.

ಹೋಂಸ್ಟೇಗಳಿರುವ ಜಾಗ ರಂಗನತಿಟ್ಟು ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಮಾಲೀಕರು ತಿಳಿಸಿದ್ದರು. ಆದರೆ ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪರಿಶೀಲನೆ ನಡೆಸಿ, ಹೋಂಸ್ಟೇಗಳು ರಂಗನತಿಟ್ಟು ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಗೆ ಒಳಪಟ್ಟಿರುವುದನ್ನು ದೃಢಪಡಿಸಿದ್ದರು. ಅಲ್ಲದೇ ಶ್ರೀರಂಗಪಟ್ಟಣ ಪುರಸಭೆ ಕೂಡ ಈ ಹೋಂಸ್ಟೇಗಳಿಗೆ ತಾನು ನೀಡಿದ್ದ ಲೈಸೆನ್ಸ್ ರದ್ದುಪಡಿಸಿತ್ತು. ಹಾಗಾಗಿ ಹೋಂಸ್ಟೇ ನಡೆಸಲು ನಿಯಮಾನುಸಾರ ಮಾಲೀಕರಿಗೆ ಅವಕಾಶವಿರಲಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

> ರಂಗನತಿಟ್ಟು ಪಕ್ಷಿಧಾಮ ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಗೆ ಒಳಪಡಲಿದ್ದು, ಇದರ ವ್ಯಾಪ್ತಿಯ ಎಲ್ಲಾ ನದಿ ಪಾತ್ರದ ಹೋಂಸ್ಟೇಗಳನ್ನು ತೆರವುಗೊಳಿಸಬೇಕು. 2017 ನ.9ರ ಕೇಂದ್ರ ಪರಿಸರ ಸಚಿವಾಲಯದ ಅಧಿಸೂಚನೆಯಂತೆ ರಂಗನತಿಟ್ಟು ಪಕ್ಷಿಧಾಮದ ಎಲ್ಲೆಯಿಂದ 1 ಕಿ.ಮೀಟರ್ ಸುತ್ತಳತೆ ವ್ಯಾಪ್ತಿಯಲ್ಲಿ ಯಾವುದೇ ವಾಣಿಜ್ಯ ಉದ್ದೇಶಿತ ಕಟ್ಟಡಗಳಿಗೆ ಅವಕಾಶ ಕಲ್ಪಿಸಬಾರದು. ಅಂತೆಯೆ, ಬಾಕಿ ಉಳಿದಿರುವ ಹೋಂಸ್ಟೇಗಳ ಪರವಾನಗಿ ರದ್ದುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.
> – ನ್ಯಾಯಮೂರ್ತಿ ಬಿ.ವೀರಪ್ಪ, ಉಪಲೋಕಾಯುಕ್ತರು.

ಲೆಸೆನ್ಸ್ ನಿಯಮಗಳ ಸ್ಪಷ್ಟ ಉಲ್ಲಂಘನೆ: ಹೋಂಸ್ಟೇ ನಡೆಸಲು ಅನುಮತಿ ಪಡೆದು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದು. ವೆಬ್‌ಸೈಟ್ ಹಾಗೂ ಆನ್‌ಲೈನ್ ಬುಕ್ಕಿಂಗ್ ಪೇಜ್ ಬೇರೆ ಬೇರೆ ಇರುವುದರ ಬಗ್ಗೆ ಮಾಲೀಕರು ಸ್ಪಷ್ಟೀಕರಣ ನೀಡದ್ದು ಅನುಮಾನಕ್ಕೆ ಎಡೆಮಾಡಿ ಕೊಟ್ಟಿತ್ತು. ಮಾಲೀಕರು ಕಡ್ಡಾಯವಾಗಿ ಹೋಂಸ್ಟೇ ಘಟಕದಲ್ಲಿ ವಾಸವಿರಬೇಕು. ಗರಿಷ್ಠ 5 ಕೊಠಡಿಗಳನ್ನು ಮಾತ್ರ ಹೊಂದಿರಬೇಕು. ಆದರೆ ಹೋಂ ಸ್ಟೇಗಳಲ್ಲಿ ಮಾಲೀಕರು ವಾಸವಿರಲಿಲ್ಲ ಹಾಗೂ ಐದಕ್ಕಿಂತ ಹೆಚ್ಚಿನ ಕೊಠಡಿಗಳನ್ನು ಹೊಂದಿದ್ದರೂ ಈ ಬಗ್ಗೆ ಮಾಲೀಕರು ಸ್ಪಷ್ಟೀಕರಣ ನೀಡದೆ ನಿರ್ಲಕ್ಷ್ಯ ವಹಿಸಿದ್ದರು.

ಹೋಂ ಸ್ಟೇ ಮಾಲೀಕರು ವಾಸವಿರುವ ಮನೆ ಕಟ್ಟಡದ ಪರವಾನಗಿ, ವಿದ್ಯುತ್ ಸಂಪರ್ಕ ಮಂಜೂರಾತಿ ಆದೇಶ ಹಾಗೂ ವಿದ್ಯುತ್ ಬಿಲ್‌ನ ಪ್ರತಿಗಳನ್ನು ಒದಗಿಸುವಂತೆ ಕೇಳಲಾಗಿತ್ತು. ಅದಕ್ಕೂ ಉತ್ತರವಿರಲಿಲ್ಲ. ಈ ಬಗ್ಗೆ ಸೆಸ್ಕ್ ಸಹಾಯ ಕಾರ್ಯಪಾಲಕ ಅಭಿಯಂತರರಿಂದ ಮಾಹಿತಿ ಪಡೆದಾಗ, ಹೋಂಸ್ಟೇ ಮಾಲೀಕರ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಮಂಜೂರಾತಿ ಇಲ್ಲದಿರುವುದು ಹಾಗೂ ವಾಣಿಜ್ಯ ಬಳಕೆಗೆ ವಿದ್ಯುತ್ ಸಂಪರ್ಕ ಪಡೆದಿರುವುದು ತಿಳಿದು ಬಂದಿತ್ತು ಇದರಿಂದ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದು ಖಾತ್ರಿಯಾಗಿತ್ತು. ಸರ್ಕಾರದ ನಿಯಮಗಳ ಪ್ರಕಾರ ಹೋಂಸ್ಟೇಯನ್ನು ವಾಣಿಜ್ಯ ಘಟಕವೆಂದು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಎರಡು ಹೋಂಸ್ಟೇಗಳ ಲೈಸೆನ್ಸ್ ರದ್ದುಗೊಳಿಸಲಾಗಿದ್ದು, ಇದು ಕಾವೇರಿ ನದಿ ಪಾತ್ರ ಒತ್ತುವರಿ ಮಾಡಿ ಕೊಂಡು ಅಕ್ರಮವಾಗಿ ರೆಸಾರ್ಟ್ ನಿರ್ಮಾಣ ಮಾಡಿರುವವರಿಗೆ ಎಚ್ಚರಿಕೆ ಗಂಟೆಯಾಗಲಿದೆ.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಮೇಶ್‌ಬಾಬು ಚಾಲನೆ ನೀಡಿದರು.

ಶ್ರೀರಂಗಪಟ್ಟಣ, ಫೆ.12– ಪಟ್ಟಣದ ವಿವಿಧೆಡೆ 2 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಮೇಶ್‌ಬಾಬು ಗುರುವಾರ ಚಾಲನೆ ನೀಡಿದರು.

ಶ್ರೀರಂಗಪಟ್ಟಣ ಪುರಸಭೆಯಿಂದ ಹೊಸದಾಗಿ 44 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿರುವ ಸಕ್ಕಿಂಗ್/ಜೆಟ್ಟಿಂಗ್ ಮಷೀನ್ ವಾಹನಕ್ಕೆ ಚಾಲನೆ ನೀಡಿದ ಶಾಸಕರು, ಭೋವಿ ಕಾಲೋನಿಯಲ್ಲಿ 20 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಚರಂಡಿ ಅಭಿವೃದ್ಧಿ ಹಾಗೂ ಹೈಮಾಸ್ಟ್ ದೀಪ ಅಳವಡಿಕೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಅಲ್ಲದೇ ಸಾರ್ವಜನಿಕರ ಅನುಕೂಲಕ್ಕಾಗಿ ಖಾಸಗಿ ಬಸ್ ನಿಲ್ದಾಣದ ಬಳಿ 94 ಲಕ್ಷ ರೂ. ವೆಚ್ಚದಲ್ಲಿ 30 ಅಂಗಡಿ ಮಳಿಗೆಗಳ ನಿರ್ಮಾಣಕ್ಕೂ ಭೂಮಿ ಪೂಜೆ ನೆರವೇರಿಸಿದರು. ಮತ್ತು ಪೋಸ್ಟ್ ಆಫೀಸ್ ಸರ್ಕಲ್ ಮತ್ತು ತಾಲೂಕು ಆಸ್ಪತ್ರೆ ಆವರಣದಲ್ಲಿ ನೂತನ ಮಿನಿ ಹೈಮಾಸ್ಟ್ ಬೀದಿ ದೀಪಗಳನ್ನು ಲೋಕಾರ್ಪಣೆಗೊಳಿಸಿದರು.

ಶಾಸಕ ರಮೇಶ್‌ಬಾಬು ಮಾತನಾಡಿ, ಶ್ರೀರಂಗಪಟ್ಟಣವನ್ನು ಒಂದು ಮಾದರಿ ಪುರಸಭೆಯನ್ನಾಗಿ ಮಾಡುವ ನಿಟ್ಟಿನಲ್ಲಿ ನಾವು ಶ್ರಮಿಸುತ್ತಿದ್ದೇವೆ. ಈಗಾಗಲೇ ಪಟ್ಟಣದಲ್ಲಿ 50 ಕೋಟಿ ವೆಚ್ಚದ ಯುಜಿಡಿ ಮತ್ತು ಕುಡಿಯುವ ನೀರಿನ ಯೋಜನೆಗಳು ಪ್ರಗತಿಯಲ್ಲಿವೆ. ಮುಂದಿನ 2–3 ದಿನಗಳಲ್ಲಿ 5 ರಿಂದ 6 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗಳು ಆರಂಭವಾಗಲಿವೆ ಎಂದರು.

ಶ್ರೀರಂಗನಾಥಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಪುರಾತತ್ವ ಇಲಾಖೆಯಿಂದ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, 8–10 ದಿನಗಳಲ್ಲಿ ಕೆಲಸ ಆರಂಭವಾಗಲಿದೆ. ಹಾಗೆಯೇ ನಿಮಿಷಾಂಬ ದೇವಸ್ಥಾನದ ಅಭಿವೃದ್ಧಿ ಹಾಗೂ ಹೊಸ ರಥ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಶ್ರೀರಂಗಪಟ್ಟಣವನ್ನು ಐತಿಹಾಸಿಕ ಮತ್ತು ಪ್ರವಾಸೋದ್ಯಮದ ಹಬ್ ಆಗಿ ರೂಪಿಸಲು ನಾವು ಬದ್ಧರಾಗಿದ್ದೇವೆ ಎಂದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ರಾಜಣ್ಣ, ಪುರಸಭೆ ಪ್ರಭಾರ ಅಧ್ಯಕ್ಷ ದಿನೇಶ್, ಸದಸ್ಯರಾದ ನಂದೀಶ್, ದಯಾನಂದ್, ಕೃಷ್ಣಪ್ಪ, ಮುಖಂಡರಾದ ಸೋಮಶೇಖರ್, ಲೋಕೇಶ್ ಸೇರಿದಂತೆ ಇತರರು ಹಾಜರಿದ್ದರು.

ಸಾರ್ವತ್ರಿಕ ಮುಷ್ಕರಕ್ಕೆ ಪ್ರಗತಿಪರ ಸಂಘಟನೆಗಳ ಸಾಥ್



ಜೆ.ಸಿ.ವೃತ್ತದಲ್ಲಿ ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರತಿಭಟಿಸಿದರು.

ಮಂಡ್ಯ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ 4 ಲೇಬರ್ ಕೋಡ್ ರದ್ದುಗೊಳಿಸಬೇಕು. ನರೇಗಾ ಯೋಜನೆ ಪುನರ್ ಸ್ಥಾಪಿಸಬೇಕು. ಭೂ ಸ್ವಾಧೀನ ಕಾಯ್ದೆ ಹಿಂಪಡೆಯಬೇಕು ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳು ಗುರುವಾರ ಅಖಿಲ ಭಾರತ ಮುಷ್ಕರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಹೆದ್ದಾರಿ ಬಂದ್ ಮಾಡಿ, ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ಜೆಸಿಟಿಯು, ಸಿಐಟಿಯು, ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ, ಅಂಗನವಾಡಿ ನೌಕರರ ಸಂಘ, ಬಿಸಿಯೂಟ ನೌಕರರ ಸಂಘ, ಬೀದಿ ಬದಿ ವ್ಯಾಪಾರಿಗಳ ಸಂಘ, ಬೀಡಿ ಕಾರ್ಮಿಕರ ಸಂಘ, ಪಂಚಾಯಿತಿ ನೌಕರರ ಸಂಘ, ಕಟ್ಟಡ ನೌಕರರ ಸಂಘ, ಔಷಧ ವ್ಯಾಪಾರ ಪ್ರತಿನಿಧಿಗಳ ಸಂಘ, ಬ್ಯಾಂಕ್ ನೌಕರರ ಸಂಘ, ವಿಮಾ ನೌಕರರ ಸಂಘ, ಬಿಎಸ್‌ಎನ್‌ಎಲ್ ನೌಕರರ ಸಂಘ, ದಲಿತ ಸಂಘರ್ಷ ಸಮಿತಿ, ಕರವೇ, ಕರುನಾಡ ಸೇನೆ, ಗ್ರಾಮೀಣ ಉದ್ಯೋಗ ಖಾತ್ರಿ ನೌಕರರು, ಕನ್ನಡ ಸೇನೆ ಸಂಘಟನೆ ಮುಖಂಡರು ಸಾರ್ವತ್ರಿಕ ಮುಷ್ಕರಕ್ಕೆ ಸಾಥ್ ನೀಡಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಜಮಾಯಿಸಿದ ಮುಖಂಡರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಪ್ರತಿಪರರು ಪೇಟೆಬೀದಿ, ಆರ್.ಪಿ.ರಸ್ತೆ, ವಿವಿ ರಸ್ತೆ, ಬನ್ನೂರು ರಸ್ತೆ, ಮಹಾವೀರ ವೃತ್ತದ ಹೆದ್ದಾರಿ ತಲುಪಿದರು. ಅಲ್ಲಿಂದ ಜೆ.ಸಿ.ವೃತ್ತದವರೆಗೆ ಮೆರವಣಿಗೆ ನಡೆಸಿ ಕೆಲಕಾಲ ರಸ್ತೆ ತಡೆ ನಡೆಸಿ, ಮಾನವ ಸರಪಳಿ ನಿರ್ಮಿಸಿ ಸಂಚಾರಕ್ಕೆ ಅಡ್ಡಿಪಡಿಸಿದರು.

ರಾಜ್ಯದ ಆಶಾ ಕಾರ್ಯಕರ್ತೆಯರಿಗೆ 2025ರ ಜನವರಿಯಲ್ಲಿ ರಾಜ್ಯ ಸರ್ಕಾರ ಘೋಷಿಸಿರುವ 10 ಸಾವಿರ ಮಾಸಿಕ ಗ್ಯಾರಂಟಿಯನ್ನು ಕೂಡಲೇ ಜಾರಿ ಮಾಡಬೇಕು. ಮಾರ್ಚ್‌ನಲ್ಲಿ ರಾಜ್ಯ ಬಜೆಟ್ ಮಂಡನೆಯಾಗಲಿದ್ದು, ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ಗೌರವ ಧನ ಹೆಚ್ಚಳ ಮಾಡಬೇಕೆಂದು ಒತ್ತಾಯಿಸಿದರು.

ವಿಮಾ ತಿದ್ದುಪಡಿ ಕಾಯ್ದೆ, ಶಾಂತಿ ಕಾಯ್ದೆ ರದ್ದುಗೊಳಿಸಬೇಕು. ಕರ್ನಾಟಕ ಸರ್ಕಾರ ಕಾರ್ಮಿಕ ಸಂಹಿತೆಗಳಿಗೆ ಈಗ ತಂದಿರುವ ಗೆಜೆಟ್ ನೋಟಿಫಿಕೇಷನ್ ಅನ್ನು ವಾಪಸ್ ಪಡೆಯಬೇಕು. ಒಕ್ಕೂಟ ಸರ್ಕಾರ ತಂದಿರುವ ಜನವಿರೋಧಿ ಮಸೂದೆಗಳನ್ನು ವಿರೋಧಿಸಬೇಕು.2025 ಆಗಸ್ಟ್ ತಿಂಗಳಲ್ಲಿ ಕನಿಷ್ಠ ವೇತನದ ಹೆಚ್ಚಳ ಕುರಿತು ಕನಿಷ್ಠ ವೇತನ ಸಲಹಾ ಮಂಡಳಿ ನೀಡಿರುವ ಶಿಫಾರಸ್ಸನ್ನು ಅಂತಿಮ ಅಧಿಸೂಚನೆಯಾಗಿ ಹೊರಡಿಸಬೇಕು ಎಂದು ಆಗ್ರಹಿಸಿದರು.

ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನೀಡದೆ ಕೃಷಿಯನ್ನು ಉತ್ತೇಜಿಸಿ ಬಲವಂತದ ಭೂ ಸ್ವಾಧೀನ ಕಾಯ್ದೆಗೆ ತಿದ್ದುಪಡಿ ತಂದು ರೈತರ ಜಮೀನನ್ನು ವಶಪಡಿಸಿಕೊಳ್ಳಲಾಗುತ್ತಿದೆ. ರಾಜ್ಯ ಸರ್ಕಾರ ಈ ಕೋಡ್‌ಗಳಿಗೆ ನಿಯಮಾವಳಿ ರಚಿಸಬಾರದೆಂದು ಒತ್ತಾಯಿಸಲಾಗಿತ್ತು. ಆದರೂ ಕಾರ್ಮಿಕ ಸಂಘಟನೆಗಳ ಬಳಿ ಕನಿಷ್ಠ ಚರ್ಚೆ ಮಾಡುವ ಸೌಜನ್ಯವನ್ನೂ ತೋರಿಸದೇ 4 ಕೋಡ್‌ಗಳಿಗೆ ಗೆಜೆಟ್ ನೋಟಿಫಿಕೇಷನ್ ತಂದು ಕಾರ್ಮಿಕರಿಗೆ ತೊಂದರೆ ಕೊಡಲಾಗಿದೆ. ನುಡಿದಂತೆ ನಡೆಯುತ್ತೇವೆ ಎನ್ನುವ ರಾಜ್ಯ ಸರ್ಕಾರವು ಜನ ವಿರೋಧಿ ಧೋರಣೆ ಮುಂದುವರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಂ.ಎಂ.ಶಿವಕುಮಾರ್, ಸಿ.ಕುಮಾರಿ, ಎಂ.ಪುಟ್ಟಮಾದು, ಮಂಜುನಾಥ್, ಜಯರಾಮು, ಎಂ.ವಿ.ಕೃಷ್ಣ, ಬಿ. ಹನುಮೇಶ್, ಸುಶೀಲಾ, ಶ್ರೀನಿವಾಸ್, ಲಿಂಗಪ್ಪಾಜಿ, ಅಣ್ಣಯ್ಯ, ಅಮಾಸಯ್ಯ, ಸುಶೀಲಾ, ಆಶಾ, ಸೇರಿದಂತೆ ನೂರಾರು ಮಂದಿ ಇದ್ದರು.

ಒಂದನೇ ಪುಟದಿಂದ

ಅಕ್ರಮ ಕಾಂಪೌಂಡ್ ತೆರವಿಗೆ 48 ಗಂಟೆ ಗಡುವು

ಅಂದು ಈ ಜಾಗದಲ್ಲಿ ಕೆರೆ ನೀರು ಪೂರ್ತಿ ತುಂಬಿತ್ತು ಆದರೆ ಇತ್ತೀಚಿಗೆ ಬಡಾ ವಣೆಗಳು ನಿರ್ಮಾಣವಾಗಿ ನೀರಿನ ಮೂಲ ಮುಚ್ಚಿರುವ ಕಾರಣ ಕೆರೆ ಬತ್ತಿ ಹೋಗಿದೆ. ಇಲ್ಲಿ ಕೆರೆ ಇದೆ ಎಂಬುದನ್ನು ಮರೆಮಾಚಿ, ಈ ಜಾಗವನ್ನು ಒತ್ತುವರಿ ಮಾಡಿಕೊಳ್ಳ ಲಾಗಿದೆ. ಜೊತೆಗೆ ಸುತ್ತ ಕಾಂಪೌಂಡ್ ಹಾಗೂ ಬೇಲಿ ಹಾಕಿ ಖಾಸಗಿ ಆಸ್ತಿ ಎಂದು ಫಲಕ ಅಳವಡಿಸಿದ್ದಾರೆ ಎಂದು ಶ್ರೀವತ್ಸ ಆರೋಪಿಸಿದರು.

ಭೂ ಮಾಫಿಯಾದೊಂದಿಗೆ ಸರ್ಕಾರ ಶಾಮೀಲು: ಸರ್ಕಾರದ ಅಧೀನಕ್ಕೊಳಪಟ್ಟ ಕೆರೆಯನ್ನು ರಕ್ಷಿಸುವಂತೆ ವಿಧಾನಸಭಾ ಅಧಿವೇಶನದಲ್ಲಿ ಧ್ವನಿ ಎತ್ತಿದರೂ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸ್ಪಷ್ಟ ಉತ್ತರ ನೀಡಲಿಲ್ಲ. ಜೊತೆಗೆ ಚರ್ಚೆ ಮಾಡಲು ಮುಂದಾಗಲಿಲ್ಲ. ಸರ್ಕಾರ ಭೂ ಮಾಫಿಯಾ ಜೊತೆ ಷಾಮೀಲಾಗಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು.

ಕೆರೆ ಜಾಗಕ್ಕೆ ತಂತಿ ಬೇಲಿ, ಕಾಂಪೌಂಡ್ ಹಾಕಿ ಒತ್ತುವರಿ ಮಾಡಿಕೊಂಡಿದ್ದು, ಮುಂದೊಂದು ದಿನ ರಾಜ ಕಾಲುವೆಯನ್ನು ಕೂಡ ಒತ್ತುವರಿ ಮಾಡಿಕೊಳ್ಳುತ್ತಾರೆ. ಆಗಲೂ ಸರ್ಕಾರದ ಅಧಿಕಾರಿಗಳು ಹೀಗೆಯೇ ಮೌನವಾಗಿರುತ್ತಾರೆಯೇ ಎಂದು ಪ್ರಶ್ನಿಸಿದರು.


ಕಳೆದ ಹತ್ತು ವರ್ಷದ ಹಿಂದೆ ಹೀಗೆ ಕೆರೆ ಜಾಗವನ್ನು ಒತ್ತುವರಿ ಮಾಡಲಾಗಿತ್ತು. ಆ ವೇಳೆ ಅಂದಿನ ಜಿಲ್ಲಾಧಿಕಾರಿಗಳು ಅದನ್ನು ತೆರವುಗೊಳಿಸಿದ್ದರು. ಹಾಲಿ ಜಿಲ್ಲಾಧಿಕಾರಿಗಳೂ ಆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಲಕ್ಷ್ಮೀಕಾಂತರೆಡ್ಡಿ ಕೂಡ ಅದೇ ರೀತಿಯ ಕ್ರಮ ಕೈಗೊಂಡು, ಸರ್ಕಾರಿ ಆಸ್ತಿ ಉಳಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕೃತ ನಕ್ಷೆಯಲ್ಲಿ ಇದನ್ನು ಕೆರೆ ಎಂದು ಉಲ್ಲೇಖಿಸಲಾಗಿದೆ. ಒಂದು ಕಡೆ 23 ಗುಂಟೆ ಎಂತಲೂ, ಮತ್ತೊಂದು ಕಡೆ 3.17 ಎಕರೆ ಎಂತಲೂ ಫಲಕಗಳಲ್ಲಿ ನಮೂದಿಸಲಾಗಿದೆ. ಎರಡು ದಾಖಲಾತಿಗಳು ಸರ್ಕಾರಿ ಆಸ್ತಿ ಎಂದು ಘೋಷಿಸಿದ್ದು, ಅತಿಕ್ರಮಣ ಮಾಡದಂತೆ ಎಚ್ಚರಿಸಲಾಗಿದೆ. ಇಷ್ಟಾದರೂ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ಶ್ರೀವತ್ಸ ದೂರಿದರು. ಇನ್ನು 48 ಗಂಟೆಯಲ್ಲಿ ಕೆರೆ ಜಾಗ ತೆರವು ಮಾಡದಿದ್ದರೆ ಕಾಂಪೌಂಡ್ ಕೆಡವಿ ನಾವೇ ತೆರವುಗೊಳಿಸುತ್ತೇವೆ. ನಮ್ಮ ವಿರುದ್ಧ ಯಾವುದೇ ರೀತಿಯ ಪೊಲೀಸ್ ಪ್ರಕರಣ ದಾಖಲಿಸಿದರೂ ನಾವು ಹೆದರುವುದಿಲ್ಲ ಎಂದು ಎಚ್ಚರಿಸಿದರು.

ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ನಗರ ವಕ್ತಾರ ಎಂ.ಎ.ಮೋಹನ್, ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜ್ ಅರಸ್, ನಿವೃತ್ತ ಮುಡಾ ಅಧಿಕಾರಿ ನಟರಾಜ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇವರು ಯಾರಿಗೆ ಹೆದರುತ್ತಿದ್ದಾರೆ... ಎಂಡಿಎ ಪ್ಲಾನ್‌ನಲ್ಲಿ ಸ್ಪಷ್ಟವಾಗಿ ಕೆರೆ ಗುರುತಿಸಲಾಗಿದೆ!

ಎಂಡಿಎ ಆಯುಕ್ತರೇಕೆ ಸುಮ್ಮನಿದ್ದಾರೆ...? ಡಿಸಿ ಏಕೆ ಕ್ರಮ ಕೈಗೊಳ್ಳುತ್ತಿಲ್ಲ!?





ಮುಡಾ ನಕ್ಷೆಯಲ್ಲಿ ಕೆರೆ ಎಂದು ಉಲ್ಲೇಖಿಸಿರುವುದು (ಎಡಚಿತ್ರ), ಕೆರೆ ಜಾಗ ಅತಿಕ್ರಮಿಸಿಕೊಂಡು ತಂತಿ ಬೇಲಿ ನಿರ್ಮಿಸಿರುವುದನ್ನು (ಬಲಚಿತ್ರ) ಕಾಣಬಹುದು.

ಕೋಟ್ಯಾಂತರ ಮೌಲ್ಯದ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಈ ಪ್ರಕರಣದಲ್ಲಿ ಕಾಣದ ಪ್ರಭಾವಿ ಕೈಗಳು ಯಾವುವು ಎಂಬ ಸಹಜ ಪ್ರಶ್ನೆ ಎದುರಾಗಿದೆ. ಹಾಗಾದರೆ ಇದರ ಹಿಂದಿರುವ ಪ್ರಭಾವಿಗಳು ಯಾರು? ಇದು ಕೆರೆ ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ದಾಖಲಾತಿ ಮತ್ತು ನಕ್ಷೆಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದ್ದರೂ, ಎಂಡಿಎ ಅಧಿಕಾರಿ ವರ್ಗವಾದರೂ ಒತ್ತುವರಿ ಮಾಡಿಕೊಳ್ಳಲು ಅದ್ಹೇಗೆ ಅವಕಾಶ ಮಾಡಿಕೊಟ್ಟಿದೆ. ಭೂ ಮಾಫಿಯಾ ವಿರುದ್ಧ ಇನ್ನೂ ಏಕೆ ಕ್ರಮ ಕೈಗೊಂಡಿಲ್ಲ ಎಂಬ ಅತ್ಯಂತ ಅಚ್ಚರಿ ಪ್ರಶ್ನೆ ಎದುರಾಗಿದೆ ಎಂದು ಶ್ರೀವತ್ಸ ತಿಳಿಸಿದರು. ಸರ್ಕಾರಿ ಆಸ್ತಿಯನ್ನು ಉಳಿಸಬೇಕಾದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಹಾಗೂ ಎಂಡಿಎ ಆಯುಕ್ತ ರಕ್ಷಿತ್ ಅವರು ಯಾಕೆ ಮೌನವಾಗಿದ್ದಾರೆ? ಕೆರೆ ಒತ್ತುವರಿಯನ್ನು ಇನ್ನೂ ಏಕೆ ತೆರವುಗೊಳಿಸಿಲ್ಲ ಎಂಬುದು ನಿಗೂಢವಾಗಿದೆ ಎಂದು ಅಚ್ಚರಿಯಿಂದಲೇ ಪ್ರಶ್ನಿಸಿದ್ದಾರೆ.

ಕೆರೆಯ ಭಾಗಕ್ಕೆ ಲೋಡ್‌ಗಟ್ಟಲೆ ಮಣ್ಣು ತುಂಬಿ, ಸಮತಟ್ಟು ಮಾಡಲು ಅವಕಾಶ ನೀಡಿದವರು ಯಾರು? ಇದರ ಬಗ್ಗೆ ಎಂಡಿಎ, ಕಂದಾಯ ಇಲಾಖೆ ಅಧಿಕಾರಿಗಳಿಗೆ ಅರಿವಿರಲಿಲ್ಲವೇ? ಇತ್ತೀಚೆಗೆ ಭೂಮಿ ಖರೀದಿಸಿದವರು ಪಕ್ಕದಲ್ಲಿ ಸರ್ಕಾರಿ ಭೂಮಿ ಇದ್ದರೆ ರಾಜಾರೋಷವಾಗಿ ಅದನ್ನೂ ಅತಿಕ್ರಮಿಸುವ ಕೆಲಸ ಮಾಡುತ್ತಾರೆ. ಇಲ್ಲಿ ಆಗಿರುವುದೂ ಅದೇ ಕೆಲಸ ಎಂದು ದೂರಲಾಗುತ್ತಿದೆ.

ಇಂದು–ನಿನ್ನೆಯದಲ್ಲ

ನಾಗರಾಜಪ್ಪನವರು ಮನಿಯಮ್ಮ ಕೋಂ ನಾರಾಯಣಪ್ಪ ಎಂಬುವವರಿಗೆ ಒಟ್ಟು 33.28 ಎಕರೆ ಜಮೀನನ್ನು ಕ್ರಯ ಮಾಡಿದ್ದು, ಆ ವೇಳೆಯೇ 3.17 ಗುಂಟೆ ಜಮೀನು ಕರಲೆ ಕಟ್ಟೆ ಎಂದು ಕ್ರಯವಾಗಿರುತ್ತದೆ. ಆದರೆ ರಾಯ್ ಪೀಟರ್, ಮನು ಹಾಗೂ ಮತ್ತಿತರರು ಅತಿಕ್ರಮ ಪ್ರವೇಶ ಮಾಡಿ, ಕಾಂಪೌಂಡ್ ನಿರ್ಮಿಸಿದ್ದು, ಅದನ್ನು ತೆರವುಗೊಳಿಸಿ ನ್ಯಾಯ ಕೊಡಿಸಿ ಕೊಡಬೇಕು ಎಂದು ಕುರುಬಾರಹಳ್ಳಿ ಪ್ರಕಾಶ್ ಸಲ್ಲಿಸಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಭೂ ಮಾಫಿಯಾ ಶಕ್ತಿಶಾಲಿಯೇ...

ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾದರೆ ಇದರ ಹಿಂದಿರುವವರು ಯಾರು, ಅವರ ಪ್ರಭಾವ ಎಷ್ಟರ ಮಟ್ಟಿಗಿದೆ ಎಂಬ ಬಗ್ಗೆ ತನಿಖೆ ನಡೆಸಿ, ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು. ಈ ವಿಚಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಶ್ಯಾಡೋ ಸಿಎಂ ಯತೀಂದ್ರ ಅವರ ಗಮನಕ್ಕೆ ಬಂದಿಲ್ಲವೇ? ಇಲ್ಲ ಈ ವಿಚಾರ ತಿಳಿದರೂ ಮೌನವಾಗಿದ್ದಾರೆಯೇ ಎಂದು ಪ್ರಶ್ನಿಸಿದರು. ಪ್ರಭಾವವಿಲ್ಲದ ಸಣ್ಣ–ಪುಟ್ಟ ಜನರು ಹೀಗೆ ಕೆರೆ ಜಾಗವನ್ನು ಅತಿಕ್ರಮಿಸಲು ಸಾಧ್ಯವಿಲ್ಲ. ಅತೀ ಪ್ರಭಾವಿ ವ್ಯಕ್ತಿಗಳೇ ಇದರ ಮಾಸ್ಟರ್ ಮೌಂಡ್ ಆಗಿದ್ದಾರೆ. ಇದರಿಂದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಜಾಣ ಮೌನಕ್ಕೆ ಶರಣಾಗಿದ್ದಾರೆ ಎಂದು ಶ್ರೀವತ್ಸ ಆರೋಪಿಸಿದರು.

ಫಲ ನೀಡುತ್ತೆ...

ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದ ಸಾವಿರ ದಿನಗಳ ಪ್ರಯಾಣದ ಬಗ್ಗೆ ಪ್ರತಿಕ್ರಿಯಿಸಿ, ನಮ್ಮ ಸರ್ಕಾರದ ಸಾವಿರ ದಿನಗಳ ಸಾಧನೆ ಬಗ್ಗೆ ನಮಗೆ ಸಂತೋಷವಿದೆ. ಈ ಅಭೂತಪೂರ್ವ ಕ್ಷಣವನ್ನು ನಾವು ಸಂಭ್ರಮಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಭೂಮಿ ಗ್ಯಾರಂಟಿಯನ್ನು ರಾಜ್ಯದ ಜನರಿಗೆ ನೀಡುತ್ತಿದ್ದೇವೆ. ಭೂಮಿಯ ಹಕ್ಕು ಪತ್ರ ಇಲ್ಲದ ಲಕ್ಷಾಂತರ ಜನರಿಗೆ ನಾವು ಹಕ್ಕುಪತ್ರ, ಪಟ್ಟಾ ದಾಖಲೆ ನೀಡುತ್ತಿದ್ದೇವೆ. ಜತೆಗೆ ಜನರಿಗೆ ಪಕ್ಕಾ ಖಾತೆ ಹಂಚಿಕೆ ಮಾಡುತ್ತಿದ್ದೇವೆ. ಪಂಚ ಗ್ಯಾರಂಟಿಗಳ ಹೊರತಾಗಿ ಇದು ನಮ್ಮ ಸರ್ಕಾರದ ಮತ್ತೊಂದು ಮಹತ್ವಾ ಕಾಂಕ್ಷಿ ಯೋಜನೆಯಾಗಿದೆ. ಮುಂದಿನ ಒಂದು ಸಾವಿರ ದಿನಗಳೂ ಬಹಳ ಪ್ರಕಾಶಮಾನವಾಗಿ, ಬಲಿಷ್ಠವಾಗಿರಲಿದೆ ಎಂದು ತಿಳಿಸಿದರು.

ನಮ್ಮ ನಡುವೆ ಚರ್ಚೆಯಾಗಿದೆ: ಸಿಎಂ ಹಾಗೂ ಡಿಸಿಎಂ ನಡುವಣ ಸಂಘರ್ಷ ದಿಂದ ಜನರು ನರಳುವಂತಾಗಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ಸಂಘರ್ಷವಿರುವುದು ಬಿಜೆಪಿಯಲ್ಲೇ ಹೊರತು, ನಮ್ಮ ನಡುವೆಯಲ್ಲ. ನಾನು ಹಾಗೂ ಸಿಎಂ ಇಬ್ಬರೂ ಪಕ್ಷದ ತೀರ್ಮಾನದಂತೆ ನಡೆಯುತ್ತೇವೆ ಎಂದು ಹೇಳಿದ್ದೇವೆ. ಎಲ್ಲಾ ಚರ್ಚೆಗಳು ನಮ್ಮ ನಡುವೆ ಆಗಿದೆ. ಪಕ್ಷ ತೀರ್ಮಾನ ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ಮನವೊಲಿಸುವಲ್ಲಿ ಯಶಸ್ವಿ

ಸರ್ಕಾರ ಮತ್ತು ಪಕ್ಷದ ಹಿತದೃಷ್ಟಿಯಿಂದ ಅವರುಗಳ ಮನವೊಲಿಕೆಗೆ ಇಷ್ಟು ದಿನ ಯತ್ನಿಸಿದ್ದು, ಈ ಪರಿಸ್ಥಿತಿ ಹೆಚ್ಚು ಸಮಯ ಮುಂದುವರಿಯದಂತೆ ತಡೆಯಲು ಸಾಧ್ಯವಿಲ್ಲ ಎಂದಿದ್ದಾರೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ನಿಷ್ಠರಿಗೆ ಬೆಲೆ ಸಿಗುತ್ತಿಲ್ಲ ಎಂಬ ಭಾವನೆ ಅವರಲ್ಲಿ ಮೂಡಿದೆ. ನೀವುಗಳು ತಕ್ಷಣವೇ ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ಇದಕ್ಕೂ ಮೊದಲು ಬುಧವಾರ ರಾತ್ರಿ ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡದೆ ನಡೆಸುತ್ತಿರುವ ತಂತ್ರಗಾರಿಕೆ ಬಗ್ಗೆ ವಿವರಿಸಿದ್ದಾರೆ. ರಾಹುಲ್ ಮತ್ತು ಸೋನಿಯಾ ಗಾಂಧಿ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಪಕ್ಷದ ನಾಯಕಿ ಹಾಗೂ ಅಲ್ಲಿದ್ದ ಇತರ ನಾಯಕರೊಂದಿಗೆ ಏನು ಚರ್ಚಿಸಿದೆ ಎಂಬುದನ್ನು ಹಾದಿಬೀದಿಯಲ್ಲಿ ಹೇಳಲು ಆಗುವುದಿಲ್ಲ ಎಂದರು. ಏನು ಮಾತನಾಡಬೇಕೋ, ಅದನ್ನು ಮಾತನಾಡಿದ್ದೇನೆ ದೆಹಲಿಗೆ ಬಂದಿದ್ದೇ ರಾಜಕೀಯ ಮಾಡಲು, ಎಲ್ಲಾ ವಿಚಾರ ಮಾತನಾಡದೆ, ಇಲ್ಲಿಂದ ಹೋಗುತ್ತೇನೆಯೇ. ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದು ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸಲು ಇಚ್ಚಿಸಲಿಲ್ಲ.

ಅಧಿಕಾರ ಹಂಚಿಕೆ ಜಟಾಪಟಿ ನಡುವೆ ಮಾ.6ರಿಂದ ಬಜೆಟ್ ಅಧಿವೇಶನ

● ಮಾ.6ರಂದು ಸಿಎಂ ಸಿದ್ದರಾಮಯ್ಯ ಬಜೆಟ್ ಮಂಡನೆ ● ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ● ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ

ಬೆಂಗಳೂರು: ಅಧಿಕಾರ ಹಂಚಿಕೆ ಚರ್ಚೆ ನಡುವೆಯೇ ಬಜೆಟ್ ಅಧಿವೇಶನಕ್ಕೆ ದಿನಾಂಕ ನಿಗದಿಯಾಗಿದೆ.



ಹೆಚ್.ಕೆ.ಪಾಟೀಲ್

ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಾರ್ಚ್ 6ರಿಂದ 27ರವರೆಗೆ ಬಜೆಟ್ ಅಧಿವೇಶನ ನಡೆಸಲು ನಿರ್ಧರಿಸಿದ್ದು, ಮೊದಲ ದಿನವೇ ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸಲಿದ್ದಾರೆ ಎಂದು ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಕುಣಿಗಲ್ ಸ್ಟಡ್ ಫಾರಂನ್ನ ಬೆಂಗಳೂರು ಟರ್ಫ್ ಕ್ಲಬ್‌ಗೆ ಗುತ್ತಿಗೆ ನೀಡುವುದು. 110 ಎಕರೆ ಜಾಗವನ್ನು 29 ವರ್ಷಕ್ಕೆ ಗುತ್ತಿಗೆ ನೀಡುವುದು. ಎರಡು ವರ್ಷದೊಳಗೆ ಬೆಂಗಳೂರು ಟರ್ಫ್ ಕ್ಲಬ್ ಬೆಂಗಳೂರಿನಿಂದ ಇಲ್ಲಿಗೆ ಸ್ಥಳಾಂತರಿಸಿ, ಇಲ್ಲಿನ ಟರ್ಫ್ ಕ್ಲಬ್ ಅನ್ನ ಸರ್ಕಾರ ಲಂಗ್ ಸ್ಪೇಸ್ ಆಗಿ ಉಳಿಸಿಕೊಳ್ಳಲು ತೀರ್ಮಾನಿಸಿದೆ ಎಂದರು.

ಶಾಲಾ ಮಕ್ಕಳಿಗೆ ಶೂ–ಸಾಕ್ಸ್: ಒಂದರಿಂದ ಹತ್ತನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸುಮಾರು 104 ಕೋಟಿ ವೆಚ್ಚದಲ್ಲಿ ಶೂ–ಸಾಕ್ಸ್ ವಿತರಣೆ, ಶಕ್ತಿ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಣೆ, ನಾಲ್ಕು ಸಾರಿಗೆ ನಿಗಮಗಳಿಂದಲೇ ಮಹಿಳೆಯರ ಉಚಿತ ಪ್ರಯಾಣಕ್ಕೆ ನೀಡುವ ಮೂಲಕ ಆಧಾರ್ ಕಾರ್ಡ್ ತೆಗೆದುಕೊಂಡು ಹೋಗುವುದನ್ನು ತಪ್ಪಿಸಲಾಗುತ್ತಿದೆ ಎಂದು ಹೇಳಿದರು.

ಖಾಸಗಿ ಆಸ್ಪತ್ರೆಯಲ್ಲಿ ಉಚಿತ ಸೇವೆ: ಬೆಂಗಳೂರಿನ 4 ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಬಡವರಿಗೆ ಉಚಿತ ಚಿಕಿತ್ಸೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಇನ್ನು ಮುಂದೆ ಈ ಖಾಸಗಿ ಆಸ್ಪತ್ರೆಗೆ ತೆರಳುವ ಮುನ್ನ ಸರ್ಕಾರಿ ಆಸ್ಪತ್ರೆಯಿಂದ ರೆಫರಲ್ ಲೆಟರ್ ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ಸರ್ಕಾರಿ ನೌಕರರು ಆರೋಗ್ಯ ಕಾರ್ಡ್ ಮತ್ತು ಬಡವರು ಬಿಪಿಎಲ್ ಕಾರ್ಡ್‌ನೊಂದಿಗೆ ತೆರಳಿ ಉಚಿತ ಚಿಕಿತ್ಸೆ ಪಡೆಯಬಹುದು. ಸೇಂಟ್ ಜಾನ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಎಂ.ಎಸ್.ರಾಮಯ್ಯ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಕಿಮ್ಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಅಂಬೇಡ್ಕರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಈ ಸೌಲಭ್ಯ ಸಿಗಲಿದೆ.

ಸರ್ಕಾರವು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಬಡವರಿಗೆ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆ ಸೌಲಭ್ಯ ನೀಡುತ್ತಿದೆ. ಸರ್ಕಾರಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆಯಡಿ ಚಿಕಿತ್ಸಾ ಸೌಲಭ್ಯವಿದೆ. ಈ ಎರಡೂ ಯೋಜನೆಯಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿಲ್ಲ ಎಂದಾಗ ಶಿಫಾರಸು ಪತ್ರ ಪಡೆದು(ರೆಫರಲ್ ಲೆಟರ್) ಖಾಸಗಿ ಆಸ್ಪತ್ರೆಗೆ ತೆರಳಬಹುದು. ಆಗ ಚಿಕಿತ್ಸೆ ವೆಚ್ಚವನ್ನು ಆಯುಷ್ಮಾನ್ ಯೋಜನೆಯಡಿ ಸರ್ಕಾರವೇ ಬರಿಸುತ್ತದೆ. ಸದ್ಯ ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಿದ್ದು, ಜಯದೇವ ಹಾಗೂ ಕಿದ್ವಾಯಿಯಂತಹ ಸರ್ಕಾರಿ ಆಸ್ಪತ್ರೆಗಳ ಮೇಲೆ ಒತ್ತಡ ಹೆಚ್ಚಿದೆ. ಅಗತ್ಯ ಹಾಗೂ ವೇಗದ ಚಿಕಿತ್ಸಾ ಸೌಲಭ್ಯ ಕಲ್ಪಿಸಲು ಕೆಲ ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ತೆರಳಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲಾಗಿದೆ. ನೇರವಾಗಿ ಆಸ್ಪತ್ರೆಗೆ ತೆರಳುವವರು ಬಿಪಿಎಲ್ ಕಾರ್ಡ್ ಅಥವಾ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯ ಕಾರ್ಡ್ ಹೊಂದಿದ್ದರೆ ಸಾಕು ಅವರಿಗೆ ಉಚಿತವಾಗಿ ಚಿಕಿತ್ಸೆ ಸಿಗಲಿದೆ.

ಅರಮನೆ ಮಂಡಳಿ ಡಿಡಿ ಸುಬ್ರಮಣ್ಯ ಅವಧಿ ಮುಂದುವರಿಕೆ

ಬೆಂಗಳೂರು: ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಮಣ್ಯ ಅವರನ್ನು ನಿವೃತ್ತಿ ಬಳಿಕವೂ ಅದೇ ಹುದ್ದೆಯಲ್ಲಿ ಗುತ್ತಿಗೆ ಆಧಾರದಲ್ಲಿ ಮುಂದುವರಿಸಲು ಸಚಿವ ಸಂಪುಟ ತೀರ್ಮಾನಿಸಿದೆ. ಮುಂದಿನ ಜೂನ್‌ಗೆ ನಿವೃತ್ತಿಯಾಗಲಿರುವ ಇವರ ಸೇವೆಯನ್ನು ಇನ್ನೂ ಎರಡು ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ಮುಂದುವರೆಸಲು ನಿರ್ಣಯಿಸಲಾಗಿದೆ.



ರೌಡಿಶೀಟರ್ ಬಿಕ್ಲು ಶಿವ ಹತ್ಯೆ ಪ್ರಕರಣ

ಶಾಸಕ ಭೈರತಿ ಬಸವರಾಜ್ ಪೊಲೀಸ್ ವಶಕ್ಕೆ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವ ಅಲಿಯಾಸ್ ವಿ.ಜಿ.ಶಿವಪ್ರಕಾಶ್ ಕೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನಿರೀಕ್ಷಣಾ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಶಾಸಕ ಭೈರತಿ ಬಸವರಾಜ್ ಅವರನ್ನು ದೇವನಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.




ಭೈರತಿ ಬಸವರಾಜ್ ಕೆಲ ದಿನಗಳ ಹಿಂದೆಯೇ ಮೊಬೈಲ್ ಸ್ವಿಚ್ ಆಫ್ ಮಾಡಿ ಪರಾರಿಯಾಗಿದ್ದಾರೆ ಎನ್ನಲಾಗಿತ್ತು. ಆದರೆ ಇಂದು ಸಂಜೆ ಅವರು ಅಹಮದಾಬಾದ್‌ನಿಂದ ಬೆಂಗಳೂರಿಗೆ ಆಗಮಿಸುತ್ತಿರುವ ಬಗ್ಗೆ ಮಾಹಿತಿ ತಿಳಿದ ಸಿಐಡಿಯ ವಿಶೇಷ ತಂಡ ವಿಮಾನ ನಿಲ್ದಾಣಕ್ಕೆ ದೌಡಾಯಿಸಿತು. ಅಹಮದಾಬಾದ್‌ನಿಂದ ಹೊರಟಿದ್ದ ಇಂಡಿಗೋ ವಿಮಾನ (6ಇ683) ಸಂಜೆ 7 ಗಂಟೆ ಸುಮಾರಿಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗುತ್ತಿದ್ದಂತೆ ಸ್ಥಳದಲ್ಲಿದ್ದ ಸಿಐಡಿ ಅಧಿಕಾರಿಗಳು, ಬೈರತಿ ಬಸವರಾಜ್ ಅವರನ್ನು ಟರ್ಮಿನಲ್ ಒಳಗಡೆಯೇ ಬಂಧಿಸಿ ವಶಕ್ಕೆ ಪಡೆದು, ನೇರವಾಗಿ ಸಿಐಡಿ ಕಚೇರಿಗೆ ಕರೆದುಕೊಂಡು ಹೋಗಿದ್ದಾರೆ. ವೈದ್ಯಕೀಯ ಪರೀಕ್ಷೆ ನಂತರ ಶುಕ್ರವಾರ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ. ಕಳೆದ ವರ್ಷ ಜುಲೈನಲ್ಲಿ ಭಾರತಿನಗರದಲ್ಲಿ ಬಿಕ್ಲು ಶಿವನನ್ನು ಶಸ್ತ್ರಸಜ್ಜಿತ ದಾಳಿಕೋರರು ಕೊಚ್ಚಿ ಕೊಲೆ ಮಾಡಿದ್ದರು. ಎಫ್‌ಐಆರ್ ನಲ್ಲಿ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರನ್ನು ಐದನೇ ಆರೋಪಿಯನ್ನಾಗಿ ಹೆಸರಿಸಲಾಗಿದ್ದು, ಗ್ಯಾಂಗ್‌ಸ್ಟರ್ ಜಗದೀಶ್ ಪದ್ಮನಾಭ ಅಲಿಯಾಸ್ ಜಗನನ್ನು ಪ್ರಮುಖ ಆರೋಪಿಯನ್ನಾಗಿ ಮಾಡಲಾಗಿದೆ.

ಕಳೆದ ಮಂಗಳವಾರ ನಿರೀಕ್ಷಣಾ ಜಾಮೀನು ಕೋರಿ ಭೈರತಿ ಬಸವರಾಜ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ಪೀಠ ವಜಾಗೊಳಿಸಿತ್ತು. ಬಳಿಕ ಭೈರತಿ ಬಸವರಾಜ್ ಅವರು ನಿರೀಕ್ಷಣಾ ಜಾಮೀನು ಕೋರಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ನಿಯಮಿತ ಜಾಮೀನಿಗಾಗಿ ಅರ್ಜಿ ಸಲ್ಲಿಸುವಂತೆ ಹೇಳಿ, ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. ಇದಾದ ಬಳಿಕ ಅವರನ್ನು ಬಂಧಿಸಲು ಸಿಐಡಿ ಹುಡುಕಾಟ ನಡೆಸುತ್ತಿತ್ತು.

ಸರಗೂರಿನ ಬಳಿ ವೃದ್ಧನ ಬಲಿ ಪಡೆದಿದ್ದ ದೃಷ್ಟಿಹೀನ ಒಂಟಿ ಸಲಗ ಸೆರೆ

●ಎರಡೂ ಕಣ್ಣಿಗಾದ ಗಾಯದಿಂದ ಪೊರೆ ಆವರಿಸಿ, ಶೇ.60ರಷ್ಟು ದೃಷ್ಟಿ ಕಳೆದುಕೊಂಡಿರುವ ಆನೆ ●ರಾಮಾಪುರ ಕ್ಯಾಂಪ್‌ನಲ್ಲಿನ ಕ್ರಾಲ್‌ನಲ್ಲಿಟ್ಟು ತರಬೇತಿ ನೀಡಲು ಕ್ರಮ



ಸರಗೂರಿನ ಮಠದಕಟ್ಟೆ ಗ್ರಾಮದ ಬಳಿ ಗುರುವಾರ ಬೆಳಗ್ಗೆ ಸೆರೆ ಹಿಡಿದ ಕಾಡಾನೆ.

ಸರಗೂರು, ಫೆ12(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಅಡ್ಡಾಡಿ ಓರ್ವ ವೃದ್ಧನನ್ನು ಬಲಿ ಪಡೆದಿದ್ದ ದೃಷ್ಟಿಹೀನ ಒಂಟಿ ಸಲಗವನ್ನು ಗುರುವಾರ ಸುರಕ್ಷಿತವಾಗಿ ಸೆರೆ ಹಿಡಿದು ರಾಮಾಪುರ ಕ್ಯಾಂಪ್‌ಗೆ ಕೊಂಡೊಯ್ಯಲಾಯಿತು.

ಕಳೆದ 15 ದಿನಗಳಿಂದ ಸರಗೂರು ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಓಡಾಡುತ್ತಿದ್ದ 30–35 ವರ್ಷದ ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಈ ಒಂಟಿ ಸಲಗ ಫೆ.5ರಂದು ಮುಂಜಾನೆ 5.30ರಲ್ಲಿ ಬಿ.ಮಟಕೆರೆಯ ಎಸ್ಟಿ ಕಾಲೋನಿ ಬಳಿ ರಸ್ತೆಬದಿ ಬಹಿರ್ದೆಸೆಗೆ ಹೋಗಿದ್ದ ಹಾಡಿ ನಿವಾಸಿ ಮಾದ(81) ಅವರ ಬಳಿಯಿದ್ದ ಟಾರ್ಚ್ ಲೈಟ್ ಬೆಳಕು ಕಂಡು ದಾಳಿ ಮಾಡಿ ಬಲಿ ಪಡೆದು ಅರಣ್ಯ ಪ್ರದೇಶ ಸೇರಿಕೊಂಡಿತ್ತು. ಆನೆಯ ಎರಡೂ ಕಣ್ಣುಗಳಲ್ಲೂ ಗಾಯದಿಂದ ನೀರು ಸೋರುತ್ತಿದ್ದ ಹಿನ್ನೆಲೆಯಲ್ಲಿ ಅದು ದೃಷ್ಟಿ ಕಳೆದುಕೊಂಡಿರುವ ಶಂಕೆ ವ್ಯಕ್ತವಾಗಿ, ಆನೆಗೆ ದಾರಿ ಕಾಣದಂತಾಗಿದೆ ಎಂದು ಅಂದಾಜಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಆ ಆನೆ ಸೆರೆ ಹಿಡಿಯಲು ಹಿರಿಯ ಅಧಿಕಾರಿಗಳು ಅನುಮತಿ ನೀಡಿದ್ದರು.

ಸಾಕಾನೆ ಬಳಕೆ: ಆನೆ ಸೆರೆ ಕಾರ್ಯಾಚರಣೆಗಾಗಿ ದುಬಾರೆ ಕ್ಯಾಂಪ್‌ನಿಂದ ಪ್ರಶಾಂತ, ಹರ್ಷ, ಧನಂಜಯ, ಸುಗ್ರೀವ, ಈಶ್ವರ, ಅಜೇಯ, ಅಯ್ಯಪ್ಪ, ದೊಡ್ಡ ಹರವೆ ಕ್ಯಾಂಪ್‌ನಿದ ಏಕಲವ್ಯ ಆನೆಗಳನ್ನು ಕರೆಸಲಾಗಿತ್ತು. ಕಳೆದ 2–3 ದಿನಗಳಿಂದ ಸರಗೂರು ಬಳಿ ಬಿಟ್ಟಿದ್ದ ಸಾಕಾನೆ ಪಡೆ ಇಂದು ಬೆಳಗ್ಗೆ ಫೀಲ್ಡ್‌ಗೆ ಇಳಿದು ಪುಂಡಾಟ ಮೆರೆಯುತ್ತಿದ್ದ ಆನೆಯನ್ನು ಸೆರೆ ಹಿಡಿಯಲು ಸಹಕಾರ ನೀಡಿದವು.

ರಾತ್ರಿ ಕಾಡಿನಿಂದ ಹೊರಗೆ ಬಂದಿತ್ತು: ಕಳೆದ 3–4 ದಿನಗಳಿಂದ ಕಾಡಿನಿಂದ ಬಂದು ಮೇವು ತಿಂದು ಕಾಡಿಗೆ ವಾಪಸ್ಸಾಗುತ್ತಿದ್ದ ಆನೆ, ಕಳೆದ ರಾತ್ರಿ ಮತ್ತೆ ಕಾಡಿನಿಂದ ಹೊರಗೆ ಬಂದಿತ್ತು. ಡ್ರೋನ್ ಕ್ಯಾಮರಾದಲ್ಲಿ ಆನೆ ಮೇಲೆ ನಿಗಾ ಇಡಲಾಗಿತ್ತು. ಗುರುವಾರ ಬೆಳಗ್ಗೆ ಮೊಳೆಯೂರು ವಲಯ ವ್ಯಾಪ್ತಿಯ ಮಟದಕಟ್ಟೆ, ತೆಲುಗಮಸಳ್ಳಿ ಬಳಿ ಆನೆ ಇರುವಿಕೆ ಖಚಿತಪಡಿಸಿಕೊಂಡು ಕಾರ್ಯಾಚರಣೆ ನಡೆಸಲಾಯಿತು. ಪಶುವೈದ್ಯ ಡಾ.ವಾಸಿಂ ಮಿರ್ಜಾ ಅವರು ಸುಗ್ರೀವ ಆನೆ ಮೇಲೆ ಹೋಗಿ ಕಾಡಾನೆಗೆ ಅರವಳಿಕೆ ಮದ್ದು ನೀಡಿದರು. ಮತ್ತೊಂದು ಆನೆ ಮೇಲಿದ್ದ ಶಾರ್ಪ್ ಶೂಟರ್, ಡಿಆರ್‌ಎಫ್‌ಓ ರಂಜನ್ ಆನೆ ತಪ್ಪಿಸಿಕೊಂಡರೆ ಅರವಳಿಕೆ ಮದ್ದು ನೀಡಲು ಸಜ್ಜಾಗಿದ್ದರು. ಆದರೆ, ಮೊದಲ ಅರವಳಿಕೆ ಮದ್ದು ನಿಖರವಾಗಿ ಬಿದ್ದ ಹಿನ್ನೆಲೆಯಲ್ಲಿ ಸ್ವಲ್ಪ ದೂರ ಓಡಿ, ನಿಧಾನವಾಗಿ ಮಂಪರಿಗೆ ಜಾರಿತು. ಕೂಡಲೇ ಸಾಕಾನೆಗಳ ನೆರವಿನಿಂದ ಕಾಡಾನೆಗೆ ಹಗ್ಗ ಕಟ್ಟಿ ಸೆರೆ ಹಿಡಿದು, ರಸ್ತೆ ಬದಿಗೆ ಎಳೆದು ತರಲಾಯಿತು. ನಂತರ ಕ್ರೇನ್ ಬಳಸಿ, ಆನೆಯನ್ನು ಲಾರಿಯೊಳಗೆ ಇಟ್ಟು ಬಂಡೀಪುರದ ರಾಮ್‌ಪುರ ಕ್ಯಾಂಪ್‌ಗೆ ಕೊಂಡೊಯ್ದು ಕ್ರಾಲ್‌ನಲ್ಲಿ ಇಡಲಾಯಿತು.

ಮೈ ತುಂಬ ಗಾಯ: ಸೆರೆ ಹಿಡಿದ ಆನೆಯ ಮೈ ಮೇಲೆ ಸಾಕಷ್ಟು ಗಾಯಗಳಾಗಿದ್ದು, ಕೀವು ಕಟ್ಟಿಕೊಂಡಿದೆ. ಅಲ್ಲದೆ, 3–4 ದಿನಗಳ ಹಿಂದಷ್ಟೇ ಕಾಡಾನೆಯೊಂದಿಗೆ ಕಾಳಗ ನಡೆಸಿ ಇನ್ನಷ್ಟು ಗಾಯ ಮಾಡಿಕೊಂಡಿದೆ. ಸೆರೆ ಹಿಡಿದ ನಂತರ ಮೈಮೇಲಿನ ಗಾಯಕ್ಕೆ ಚಿಕಿತ್ಸೆ ನೀಡಲಾಯಿತು.

ಕಣ್ಣಿಗೆ ಗಾಯ: ಆನೆಯ ಎರಡೂ ಕಣ್ಣುಗಳಿಗೂ ಪೊರೆ ಆವರಿಸಿದೆ. ಗಾಯದಂತೆ ಕಂಡು ಬರುತ್ತಿರುವ ಎರಡೂ ಕಣ್ಣುಗಳಿಂದ ನೀರು ಸೋರುತ್ತಿದ್ದು, ದೃಷ್ಟಿ ಶೇ.60ರಷ್ಟು ಕ್ಷೀಣಿಸಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಅಲ್ಲದೆ, ಜಮೀನಿಗೆ ಬರುವ ಆನೆಯನ್ನು ಓಡಿಸಲು ಗುಂಡು ಹಾರಿಸುವುದರಿಂದ ಅದರ ಚೆರ್ರಿ (ಚೂರು) ಕಣ್ಣಿಗೆ ಬಿದ್ದು ಗಾಯ ಗೊಂಡಿರಬಹುದು ಎಂಬ ಶಂಕೆಯೂ ವ್ಯಕ್ತವಾಗಿದೆ. ಗಾಯದ ಗುರುತು ಗಮನಿಸಿದರೆ 2 ವರ್ಷಗಳಿಂದಲೂ ಆನೆ ಕಣ್ಣಿನ ಸಮಸ್ಯೆ ಎದುರಿಸುತ್ತಿರಬಹುದು ಎಂದು ಅಂದಾಜಿಸಲಾಗಿದೆ.

ಸದ್ಯ ಕ್ರಾಲ್‌ನಲ್ಲಿರುವ ಆನೆಯನ್ನು ಪಳಗಿಸಿದ ನಂತರ, ಅದರ ಕಣ್ಣನ್ನು ಪರಿಶೀಲಿಸಿ ಅಗತ್ಯ ಚಿಕಿತ್ಸೆ ಮುಂದುವರೆಸಬೇಕಾಗುತ್ತದೆ. ಇದೀಗ ಮೈಮೇಲಿನ ಗಾಯವನ್ನು ಕ್ರಾಲ್‌ನಲ್ಲಿದ್ದಾಗಲೇ ಗುಣಪಡಿಸಬಹುದಾಗಿದೆ.

ಕಾರ್ಯಾಚರಣೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಿಎಫ್ ಎಸ್.ಪ್ರಭಾಕರನ್, ಹೆಡಿಯಾಲ ಎಸಿಎಫ್ ಡಿ.ಪರಮೇಶ್, ಮೊಳೆಯೂರು ಆರ್‌ಎಫ್‌ಓ ಕೆ.ಆರ್.ನಾರಾಯಣ್, ಬೇಗೂರು ಆರ್‌ಎಫ್‌ಓ ಅಮೃತೇಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಲೋಕಾಯುಕ್ತ ದಾಳಿ ; ಪಿಡಬ್ಲ್ಯೂಡಿ ಇಂಜಿನಿಯರ್ ಪುರುಷೋತ್ತಮರಿಗೆ ಸೇರಿದ ಮೈಸೂರು ಆಸ್ತಿ ಶೋಧ



ಪುರುಷೋತ್ತಮ

ಮೈಸೂರು,ಫೆ.12(ಪಿಎಂ)– ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದಡಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಪುರುಷೋತ್ತಮ ದಾಸ್ ಅವರಿಗೆ ಸೇರಿದ ಬೆಂಗಳೂರು ಮನೆ ಹಾಗೂ ಕಚೇರಿಯಲ್ಲಿ ಮಾತ್ರವಲ್ಲದೇ, ಅವರು ಹೊಂದಿರುವ ಆಸ್ತಿಗಳ ಸಂಬಂಧ ಮೈಸೂರಿನಲ್ಲೂ ಐದಾರು ಸ್ಥಳಗಳಲ್ಲಿ ಗುರುವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು.

ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪುರುಷೋತ್ತಮ ದಾಸ್ ಅವರಿಗೆ ಸೇರಿದ ಆಸ್ತಿಗಳ ಸಂಬಂಧ ಮೈಸೂರಿನ ಐದಾರು ಸ್ಥಳಗಳಲ್ಲೂ ದಾಳಿ ನಡೆಸಲಾಗಿದೆ. ಬೆಂಗಳೂರು ಲೋಕಾಯುಕ್ತ ಅಧಿಕಾರಿಗಳು, ಬೆಳಗ್ಗೆಯಿಂದ ಬೆಂಗಳೂರಿನ ಏಳು ಸ್ಥಳಗಳಲ್ಲಿ ದಾಳಿ ನಡೆಸಿದರು. ಆದಾಯ ಮೀರಿ ಅಕ್ರಮ ಆಸ್ತಿ ಗಳಿಕೆ ಆರೋಪದಡಿ ಅಧಿಕಾರಿಯು ಮೈಸೂರಿನಲ್ಲಿ ಹೊಂದಿರುವ ಆಸ್ತಿಗಳ ಜಾಲಾಡಿದರು.

ಪುರುಷೋತ್ತಮ ದಾಸ್ ಅವರಿಗೆ ಸೇರಿದ ಆಸ್ತಿ ಸಂಬಂಧ ಒಟ್ಟು 14 ಸ್ಥಳಗಳನ್ನು ಲೋಕಾಯುಕ್ತ ಅಧಿಕಾರಿಗಳು ಜಾಲಾಡಿದ್ದಾರೆ. ಇವರು ಹೊಂದಿರುವ ಸ್ಥಿರಾಸ್ತಿಗಳ ಅಂದಾಜು ಒಟ್ಟು ಮೌಲ್ಯ 11,52,31,255 ರೂ. ಇದರಲ್ಲಿ 52,32,255 ರೂ. ಮೌಲ್ಯದ ಒಂದು ನಿವೇಶನ, 3 ಕೋಟಿ ರೂ. ಮೌಲ್ಯದ 2 ಮನೆಗಳು, 8 ಕೋಟಿ ರೂ. ಮೌಲ್ಯದ ಎರಡು ಶಿಕ್ಷಣ ಸಂಸ್ಥೆಗಳು ಸೇರಿವೆ. ಅಲ್ಲದೆ, ಚರಾಸ್ತಿಗಳ ಒಟ್ಟು ಮೌಲ್ಯ 1,32,02,630 ರೂ. ಎಂದು ಲೋಕಾಯುಕ್ತ ಪೊಲೀಸರು ಅಂದಾಜಿಸಿದ್ದಾರೆ.

ದಾಳಿ ವೇಳೆ 44,23,000 ರೂ. ನಗದು ಪತ್ತೆಯಾಗಿದ್ದು, ಈ ಪೈಕಿ 25,00,000 ರೂ. ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, 60,79,630 ರೂ. ಮೌಲ್ಯದ ಆಭರಣ ಹಾಗೂ 27,00,000 ರೂ. ಸ್ಥಿರ ಠೇವಣಿ ಹೊಂದಿರುವುದು ಪತ್ತೆಯಾಗಿದೆ. ಈ ಸಂಬಂಧ ಒಟ್ಟು ಡಿಎ ಮೌಲ್ಯ 11,29,33,885 ರೂ. ಆಗಿದ್ದು, ಶೇಕಡವಾರು 376ರಷ್ಟು ಆಗಿದೆ ಎಂದು ಲೋಕಾಯುಕ್ತ ಪೊಲೀಸರು ಅಂದಾಜಿಸಿದ್ದಾರೆ. ಬೆಂಗಳೂರು ನಗರ–2ರ ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ನೇತೃತ್ವದಲ್ಲಿ ಈ ದಾಳಿ ನಡೆಸಲಾಗಿದೆ. ಇದಲ್ಲದೆ, ರಾಜ್ಯದ ವಿವಿಧೆಡೆ ಇನ್ನು ಮೂವರು ಭ್ರಷ್ಟ ಅಧಿಕಾರಿಗಳ ನಿವಾಸ, ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ ಎನ್ನಲಾಗಿದೆ.

ಬಿಜೆಪಿ ಮಂಡಲಗಳ ಸಂಘಟನಾತ್ಮಕ ಸಭೆ



ಬಿಜೆಪಿ ಕಚೇರಿಯಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗದ ಮಂಡಲಗಳ ಸಂಘಟನಾತ್ಮಕ ವಿಶೇಷ ಸಭೆ ನಡೆಸಲಾಯಿತು

ಮೈಸೂರು, ಫೆ12(ಎಂಕೆ)– ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗದ ವತಿಯಿಂದ ಮಂಡಲಗಳ ಸಂಘಟನಾತ್ಮಕ ವಿಶೇಷ ಸಭೆ ನಡೆಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂಗೌಡ ಮಾತನಾಡಿ, ಪಕ್ಷ ಸಂಘಟನೆಗೆ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಮಾಜಿ ಶಾಸಕ ಹರ್ಷವರ್ಧನ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಎನ್.ವಿ.ಫಣೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ, ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎನ್.ವಿ.ವಿನಯ್‌ಕುಮಾರ್, ಮುಖಂಡರಾದ ರಾಮಚಂದ್ರ, ಪರೀಕ್ಷಿತ್ ಅರಸ್, ಎಸ್.ಮಹದೇವಯ್ಯ, ಎಸ್.ಸಿ.ಅಶೋಕ್ ಪುಟ್ಟಬುದ್ದಿ ಮತ್ತಿತರರಿದ್ದರು.

ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ವಿಜೇತರು



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾ ಮಂದಿರ (ಜೈನ್ ಸೊಸೈಟಿ) ದಲ್ಲಿನ ವಿದ್ಯಾರ್ಥಿಗಳು ಅಂತರ ಶಾಲಾ ವಿಜ್ಞಾನ ಮಾದರಿ ಸ್ಪರ್ಧೆಯನ್ನು ಫಾರುಕ್ಯ ದಂತ ವೈದ್ಯ ಕಾಲೇಜ್ ವತಿಯಿಂದ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. 9ನೇ ತರಗತಿ ವಿದ್ಯಾರ್ಥಿಗಳಾದ ಇಯಾನ್, ವಿಜಯ್ ಪ್ರಥಮ ಸ್ಥಾನ, 8 ನೇ ತರಗತಿ ವಿದ್ಯಾರ್ಥಿಗಳಾದ ರಮೇಶ್, ಲಕ್ಷಯ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಜೊತೆಗೆ ವಿಹಾನ್, ವರುಣ್ (9ನೇ ತರಗತಿ), ಸುಮಿತ್ ಸೀರ್ವಿ, ದಕ್ಷ (7ನೇ ತರಗತಿ) ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಶಾಲಾ ಆಡಳಿತ ಮಂಡಳಿ, ಸಿಬ್ಬಂದಿವರ್ಗ ಮಕ್ಕಳನ್ನು ಅಭಿನಂದಿಸಿದ್ದಾರೆ.

ಶಿವರಾತ್ರಿ ಅಂಗವಾಗಿ ಜಾತ್ರಾ ಮಹೋತ್ಸವ



ಮೈಸೂರು, ಫೆ.12(ಎಂಕೆ)– ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಫೆ.15 ರಂದು ಮೈಸೂರಿನ ಬೋಗಾದಿಯಲ್ಲಿರುವ ಶ್ರೀ ನಾಗಲಿಂಗೇಶ್ವರ, ಶ್ರೀ ಭೋಗೇಶ್ವರ, ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನದ ವತಿಯಿಂದ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 5 ಗಂಟೆಯಿಂದಲೇ ಮಹಾಸಂಕಲ್ಪ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ಅರ್ಚನೆ, ಸಹಸ್ರನಾಮ, ಶಿವಪಂಚಾಕ್ಷರಿ ಹೋಮ, ತ್ರಿಶತಿಹೋಮ, ಮೃತ್ಯುಂಜಯ ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿವೆ.

ಬೆಳಗ್ಗೆ 6:30 ರಿಂದ 7:30ರವರೆಗೆ ಚಾಮುಂಡೇಶ್ವರಿ ಭಜನಾ ಮಂಡಳಿಯಿಂದ ಭಜನೆ, 7.30ರಿಂದ 9.30ರವರೆಗೆ ದೇವರ ನಾಮ, 9.30ರಿಂದ 10.30ರವರೆಗೆ ಭಕ್ತಿ ಗೀತೆ, 10.30 ರಿಂದ 11 ಗಂಟೆವರೆಗೆ ಭಜನೆ, 11ರಿಂದ 12.15ರವರಗೆ ಭರತನಾಟ್ಯ, 12.15 ರಿಂದ 1 ರವರೆಗೆ ಸುಗಮ ಸಂಗೀತ, 1ರಿಂದ 2 ರವರೆಗೆ ಭರತನಾಟ್ಯ ಹಾಗೂ 2 ರಿಂದ 3ಗಂಟೆವರೆಗೆ ಭಕ್ತಿ ಗೀತೆಗಳ ಕಾರ್ಯಕ್ರಮ ನಡೆಯಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರಿನಲ್ಲಿ ಸೈಕ್ಲಿಂಗ್ ವೆಲೋಡ್ರೋಮ್; ಸಿಎಂ ಜೊತೆ ಉಸ್ತುವಾರಿ ಸಚಿವರ ಚರ್ಚೆ



ಸಿಎಂ ಸಿದ್ದರಾಮಯ್ಯ ಜೊತೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚರ್ಚಿಸುತ್ತಿರುವುದು

ಮೈಸೂರು, ಫೆ.12– ಮೈಸೂರಿನಲ್ಲಿ ಸೈಕ್ಲಿಂಗ್ ವೆಲೋಡ್ರೋಮ್ ಮತ್ತು ಕ್ರೀಡಾ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನಿವೇಶನ ಹಸ್ತಾಂತರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚರ್ಚಿಸಿದರು.

ವೆಲೋಡ್ರೋಮ್ ನಿರ್ಮಾಣಕ್ಕೆ 10 ರಿಂದ 15 ಎಕರೆ ಭೂಮಿ ಬೇಕಾಗಲಿದ್ದು, ಈ ಸಂಬಂಧ ಬೆಂಗಳೂರಿನಲ್ಲಿಂದು ನಡೆದ ಸಭೆ ಕುರಿತು ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ತಮ್ಮ ಎಕ್ಸ್ ಖಾತೆಯಲ್ಲಿ ನಿವೇಶನಕ್ಕಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ನಗರದಲ್ಲಿ ವೆಲೋಡ್ರೋಮ್ ವೃತ್ತಿಪರ ಸೈಕ್ಲಿಂಗ್ ಅನ್ನು ಉತ್ತೇಜಿಸಲು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಲು ಈ ಯೋಜನೆ ರೂಪಿಸಲಾಗಿದೆ

ಮೈಸೂರಿನಲ್ಲಿ ಬಹು ನಿರೀಕ್ಷಿತ ವೆಲೋಡ್ರೋಮ್ ಯೋಜನೆಗೆ 2023–24ರ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದಂತೆ 10 ಕೋಟಿ ರೂ.ಗಳ ಬಜೆಟ್ ನಿಗದಿಪಡಿಸಲಾಗಿದೆ, ಆದರೆ ಇದು ಇನ್ನೂ ಆರಂಭವಾಗಿಲ್ಲ. ಇದರ ಬಗ್ಗೆ ಗುರುವಾರ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದ ತಂಡ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದು, ವೆಲೋಡ್ರೋಮ್ ಎಂಬುದು ಟ್ರ್ಯಾಕ್ ಸೈಕ್ಲಿಂಗ್‌ಗಾಗಿ ನಿವೇಶನ ನೀಡುವಂತೆ ಮನವಿ ಮಾಡಿದೆ.

ವೆಲೋಡ್ರೋಮ್ ಎಂಬುದು ಟ್ರ್ಯಾಕ್ ಸೈಕ್ಲಿಂಗ್‌ಗಾಗಿ ವಿನ್ಯಾಸಗೊಳಿಸಲಾದ ವಿಶೇಷ ಕ್ರೀಡಾಂಗಣವಾಗಿದ್ದು, ಮೈಸೂರಿನಲ್ಲಿ ವೆಲೋಡ್ರೋಮ್ ಸ್ಥಾಪನೆಯು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಗುರಿಯನ್ನು ಹೊಂದಿರುವ ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಸೈಕ್ಲಿಸ್ಟ್‌ಗಳ ಆಕಾಂಕ್ಷೆಗಳನ್ನು ಹೆಚ್ಚಿಸುತ್ತದೆ.

ಅಪಘಾತದಲ್ಲಿ ಮೃತಪಟ್ಟ ಯುವತಿ ಕುಟುಂಬಕ್ಕೆ 262 ಕೋಟಿ ಪರಿಹಾರ

ಸಿಯಾಟಲ್: ಮೂರು ವರ್ಷಗಳ ಹಿಂದೆ ಪೊಲೀಸ್ ಅಧಿಕಾರಿ ಚಾಲನೆ ಮಾಡುತ್ತಿದ್ದ ವಾಹನ ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟ 23 ವರ್ಷದ ಭಾರತ ಮೂಲದ ವಿದ್ಯಾರ್ಥಿನಿ ಕುಟುಂಬಕ್ಕೆ, ಅಲ್ಲಿನ ಸ್ಥಳೀಯ ಆಡಳಿತವು 29 ಮಿಲಿಯನ್ ಡಾಲರ್(262 ಕೋಟಿ) ಪರಿಹಾರ ಘೋಷಿಸಿದೆ. ಸಿಯಾಟಲ್ ನಾರ್ಥ್ ಈಸ್ಟರ್ನ್ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನ ಪದವಿ ವಿದ್ಯಾರ್ಥಿನಿ ಜಾಹ್ನವಿ ಕಂದುಲಾ ಅವರು 2023ರಲ್ಲಿ ರಸ್ತೆ ದಾಟುತ್ತಿದ್ದಾಗ ಪೊಲೀಸ್ ಅಧಿಕಾರಿ ಕೆವಿನ್ ಡೇವ್ ಚಾಲನೆ ಮಾಡುತ್ತಿದ್ದ ವಾಹನ ಡಿಕ್ಕಿ ಹೊಡೆದಿತ್ತು. ಪರಿಣಾಮ ವಿದ್ಯಾರ್ಥಿನಿ ಸಾವನ್ನಪ್ಪಿದ್ದರು.

ಮಾದಕವಸ್ತು ಸಂಬಂಧಿತ ದೂರವಾಣಿ ಕರೆಗೆ ಪ್ರತಿಕ್ರಿಯಿಸುತ್ತಿದ್ದಾಗ ಕೆವಿನ್ ಡೇವ್, 25 ಕಿ.ಮೀ ವೇಗದಲ್ಲಿ ಚಲಿಸಬೇಕಿದ್ದ ವಲಯದಲ್ಲಿ 74 ಕಿ.ಮೀ ವೇಗದಲ್ಲಿ ವಾಹನ ಚಾಲನೆ ಮಾಡಿದ್ದರಿಂದ ಈ ಅಪಘಾತ ಸಂಭವಿಸಿತ್ತು. ಜಾಹ್ನವಿ ಕಂದುಲಾ ಅವರ ಸಾವು ಹೃದಯವಿದ್ರಾವಕವಾಗಿತ್ತು. ಈ ಆರ್ಥಿಕ ಪರಿಹಾರವು ಕಂದುಲಾ ಕುಟುಂಬಕ್ಕೆ ಸ್ವಲ್ಪ ಮಟ್ಟಿಗೆ ಶಾಂತಿ ತರುತ್ತದೆ ಎಂದು ಆಶಿಸುತ್ತೇವೆ ಎಂದು ಸಿಯಾಟಲ್ ನಗರದ ಸ್ಥಳೀಯಾಡಳಿತ ತಿಳಿಸಿದೆ.

ನಮ್ಮನ್ನು ನಾವು ತಿದ್ದಿಕೊಳ್ಳಲು ರಂಗಭೂಮಿ ಸಹಾಯಕಾರಿ

ರಂಗಾಯಣ ನಿವೃತ್ತ ಉಪನಿರ್ದೇಶಕ ಮ.ಗು.ಸದಾನಂದಯ್ಯ ಅಭಿಮತ



ಸೋಬಾನೆ ಕಲಾವಿದರಾದ ಹೊರೆಯಾಲದ ಮಹಾದೇವಮ್ಮ ಮತ್ತು ರಾಮಸಮುದ್ರದ ಮಹಾದೇವಮ್ಮ ಮತ್ತು ತಂಡದವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.12(ವಿವಿಹೆಚ್)– ಮನುಷ್ಯನನ್ನು ಅಂತರಂಗಿಕವಾಗಿ ಬೆಳೆಸುವ ಚಟುವಟಿಕೆಯೇ ರಂಗಭೂಮಿ. ಅವು ನಮ್ಮನ್ನು ನಾವು ತಿದ್ದಿಕೊಳ್ಳುವ ಕ್ರಿಯೆಗೆ ಸಹಕಾರಿಯಾಗುತ್ತವೆ ಎಂದು ರಂಗಾಯಣದ ನಿವೃತ್ತ ಉಪ ನಿರ್ದೇಶಕ ಮ.ಗು.ಸದಾನಂದಯ್ಯ ಅಭಿಪ್ರಾಯಪಟ್ಟರು.

ನಗರದ ರಂಗಾಯಣದ ಆವರಣದ ಶ್ರೀರಂಗ ವೇದಿಕೆಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ಗುರುವಾರ ನಡೆದ ರಂಗ ಮತ್ತು ನೃತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಮೊಬೈಲ್ ಬಿಡಿ ಪುಸ್ತಕ ಹಿಡಿ. ಮೊಬೈಲ್ ಬಿಡಿ ಕಲೆ ಹಿಡಿ' ಎಂದು ಯುವ ಸಮೂಹಕ್ಕೆ ಕಿವಿಮಾತು ಹೇಳುವುದು ಪ್ರಸ್ತುತ ವಾಡಿಕೆಯಾಗಿದೆ. ಆದರೆ, ಮೊಬೈಲ್ ಅನ್ನು ಸಂಗಾತಿಯನ್ನಾಗಿ ಮಾಡಿಕೊಂಡಿದ್ದೇವೆ. ಈ ಯಾಂತ್ರಿಕತೆಯಿಂದ ಯಾವುದರಲ್ಲಿಯೂ ಜೀವಂತಿಕೆ ಮತ್ತು ವಿಕಸನವನ್ನು ಕಾಣದ ದುರಂತ ನಮ್ಮ ನಡುವೆ ಬಂದೊದಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ರಾಜಕೀಯ, ಧಾರ್ಮಿಕ, ಶೈಕ್ಷಣಿಕ ವಲಯ ವ್ಯಾಪಾರೀಕರಣದಿಂದ ಕಲುಷಿತಗೊಂಡಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿದ್ದೇವೆ. ರಾಜಕೀಯ ನಾಯಕರು ಮತ್ತು ಧಾರ್ಮಿಕ ಗುರುಗಳ ನಾಲಿಗೆಗಳು ಗಬ್ಬು ಎದ್ದಿವೆ. ಸಮಾಜವನ್ನು ಸುಸ್ಥಿತಿಗೆ ಕರೆದೊಯ್ಯಬಹುದಾದ ಪ್ರಯೋಗವನ್ನು ಅವರು ಮಾಡುತ್ತಿಲ್ಲ. ಇಂತಹ ಕಾಲಘಟ್ಟದಲ್ಲಿ ಸಂಗೀತ, ನೃತ್ಯ, ನಾಟಕ ಬದುಕಿಗೆ ಮೌಲ್ಯಗಳನ್ನು ಮತ್ತು ಮಾರ್ಗವನ್ನು ತೋರಿಸಲಿವೆ ಎಂದರು.

12ನೇ ಶತಮಾನದಲ್ಲಿ ನಡೆದ ಚಳವಳಿ ಬಹಿರಂಗ ಚಳುವಳಿಯಲ್ಲ, ಅಂತರಂಗದ ಚಳುವಳಿಯಾಗಿತ್ತು. ಹಾಗೆಯೇ ಕಲೆಗಳಲ್ಲಿ ತೊಡಗುವುದರಿಂದ ನಮ್ಮ ಅಂತಃರಂಗವನ್ನು ಬೆಳೆಸಲಿವೆ. ಕಾಣೆಯಾಗಿರುವ ಬಂಧುತ್ವವನ್ನು ಕಲೆಗಳು ಬೆಳೆಸಲಿವೆ ಎಂದು ಹೇಳಿದರು.

ಇಂತಹ ಸಂದರ್ಭದಲ್ಲಿ ದೇಸಿ ರಂಗ ಸಾಂಸ್ಕೃತಿಕ ಟ್ರಸ್ಟ್ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸಾಂಸ್ಕೃತಿಕ ಕಲೆಯನ್ನು ಯುವ ಪೀಳಿಗೆಗೆ ಬಿತ್ತುವ ಕೆಲಸವನ್ನು ಮಾಡುತ್ತಿದ್ದಾರೆ. ತರಬೇತಿ ಪಡೆದ ವಿದ್ಯಾರ್ಥಿಗಳು ಪ್ರದರ್ಶಕ ಕಲೆಗಳಲ್ಲಿ ತೊಡಗಿಕೊಳ್ಳಬೇಕು. ಆ ಮೂಲಕ ರಂಗಭೂಮಿ ಜೀವಂತಿಕೆ ಸಾಕ್ಷಿಯಾಗಬೇಕು ಎಂದರು.

ಇದೇ ವೇಳೆ ಸೋಬಾನೆ ಕಲಾವಿದರಾದ ಹೊರೆಯಾಲದ ಮಹಾದೇವಮ್ಮ ಮತ್ತು ರಾಮಸಮುದ್ರದ ಮಹಾದೇವಮ್ಮ ಮತ್ತು ತಂಡದವರನ್ನು ಸನ್ಮಾನಿಸಲಾಯಿತು. ಬಳಿಕ ಶಿಬಿರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಂಸಾಳೆ, ಡೊಳ್ಳು ಕುಣಿತವನ್ನು ಪ್ರದರ್ಶಿಸಿ, ಎಲ್ಲರ ಮೆಚ್ಚುಗೆ ಗಳಿಸಿದರು.

ಮಹಾರಾಜ ಕಾಲೇಜಿನ ಜನಪದ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ವಿಜಯಲಕ್ಷ್ಮಿ ಮನಾಪುರ, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಜನಮನ, ದಿನಮಣಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಂಎಲ್‌ಸಿ ಡಾ.ಯತೀಂದ್ರ ವಿರುದ್ಧ ನಿಂದನೆ ಆರೋಪ; ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಪೊಲೀಸ್ ಆಯುಕ್ತರಿಗೆ ದೂರು

ಕ್ರಮಕೈಗೊಳ್ಳದಿದ್ದರೆ ಸಂಬಂಧಿಸಿದವರ ಮನೆಗೆ ಮುತ್ತಿಗೆ ಎಚ್ಚರಿಕೆ



ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿ, ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ದೂರು ನೀಡಲಾಯಿತು. ಡಿಸಿಪಿ ಸುಂದರ್‌ರಾಜ್ ಉಪಸ್ಥಿತರಿದ್ದರು.

ಮೈಸೂರು, ಫೆ.12(ಎಂಕೆ)– ಬಿಜೆಪಿ ಕರ್ನಾಟಕ ಫೇಸ್ಬುಕ್ ಖಾತೆಯಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ವರ್ಗಾವಣೆ ದಂಧೆ ಹಾಗೂ ಕಮಿಷನ್ ವಸೂಲಿ ಇಲಾಖೆ ಸಚಿವ ಎಂದು ಪೋಸ್ಟ್ ಹಾಕುವುದಲ್ಲದೆ ಮಾಧ್ಯಮಗಳ ಮುಂದೆಯೂ ಹೇಳಿಕೆ ನೀಡಿ ನಿಂದಿಸುವ ಮೂಲಕ ಗಲಭೆ ಸೃಷ್ಟಿಸುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಲಾಯಿತು.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಗುರುವಾರ ಭೇಟಿ ನೀಡಿದ ಕಾಂಗ್ರೆಸ್ ಮುಖಂಡರು, ಆಕ್ಷೇಪಾರ್ಹ ಪದ ಬಳಕೆ ಹಾಗೂ ಪೋಸ್ಟ್ ಮಾಡುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಹಾಳು ಮಾಡುವುದಲ್ಲದೆ ಹಾಲಿ ವಿಧಾನ ಪರಿಷತ್ ಸದಸ್ಯರ ಘನತೆಗೆ ಧಕ್ಕೆ ತರುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ದೂರು ಸಲ್ಲಿಸಲಾಯಿತು.

ಈ ವೇಳೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮಾಜಿ ಸಂಸದ ಪ್ರತಾಪ್ ಸಿಂಹ ಮಾತ್ರವಲ್ಲದೆ ವಿಪಕ್ಷ ನಾಯಕ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ, ವಿ.ಸೋಮಣ್ಣ ಹಾಗೂ ಬಿ.ವೈ.ವಿಜಯೇಂದ್ರ ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದು, ಸುಳ್ಳು ಆರೋಪಗಳನ್ನು ಮಾಡುವ ಮೂಲಕ ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ತಾಳ್ಮೆ ಕಳೆದುಕೊಂಡು ನಿಯಮ ಉಲ್ಲಂಘಿಸುವುದಕ್ಕೂ ಮುನ್ನವೇ ಎಚ್ಚೆತ್ತು ಕಾನೂನು ರಿತ್ಯಾ ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ಹಾಗೆಯೇ ನನ್ನ ಕುಟುಂಬಸ್ಥರ ಬಗ್ಗೆಯೂ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಮಾಡಲಾಗಿತ್ತು. ಈ ಸಂಬಂಧ ನಗರ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರೂ ಯಾವುದೇ ತನಿಖೆ ನಡೆಸಿಲ್ಲ. ಸೈಬರ್ ಠಾಣೆ ಪೊಲೀಸರು ತಮ್ಮ ಕೆಲಸ ಮಾಡುತ್ತಿದ್ದಾರೆಯೇ ಎಂಬ ಅನುಮಾನ ಎದುರಾಗಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ದೂರು ಸಲ್ಲಿಸಿದರೂ ಕ್ರಮವಿಲ್ಲ: ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಕಾಂಗ್ರೆಸ್ ನಾಯಕರ ವಿರುದ್ಧ ಆಕ್ಷೇಪಾರ್ಹ ಪದಬಳಕೆ ಸಂಬಂಧ ಇದುವರೆಗೂ ಹಲವು ದೂರುಗಳನ್ನು ನೀಡಲಾಗಿದೆ. ಆದರೆ, ಯಾವುದಕ್ಕೂ ಪೊಲೀಸರಿಂದ ಪ್ರತಿಕ್ರಿಯೆ ಇಲ್ಲ. ಸೈಬರ್ ಠಾಣೆ ಪೊಲೀಸರು ಏನು ಮಾಡುತ್ತಿದ್ದಾರೆ ಎಂಬುದೇ ಗೊತ್ತಿಲ್ಲ. ನ್ಯಾಯ ದೊರಕಿಸಲು ಸಾಧ್ಯವಾಗದಿದ್ದರೆ ಹೇಳಿಕೆ ನೀಡುವವರೊಂದಿಗೆ ಬಹಿರಂಗ ಸಭೆ ನಡೆಸಲು ಅವಕಾಶ ಮಾಡಿಕೊಡಿ ಎಂದು ಹೇಳಿದರು.

ಮುತ್ತಿಗೆ ಹಾಕುತ್ತೇವೆ: ನಗರಾಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಆಕ್ಷೇಪಾರ್ಹ ಪೋಸ್ಟ್ ಮತ್ತು ಹೇಳಿಕೆ ನೀಡುವವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳದಿದ್ದರೆ, ಪೋಸ್ಟ್ ಹಾಕಿದವರ ಮನೆಗೆ ಮುತ್ತಿಗೆ ಹಾಕಲಾಗುವುದು. ಸಮಾಜದಲ್ಲಿ ಶಾಂತಿ ನೆಲೆಸಬೇಕಿದ್ದರೆ, ಕ್ರಮ ಜರುಗಿಸಿ ಎಂದು ತಾಕೀತು ಮಾಡಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಲ್ಲಾ ಕಾರ್ಯದರ್ಶಿ ಶಿವಪ್ರಸಾದ್, ಮಾಜಿ ಮುಡಾ ಸದಸ್ಯ ಎಂ.ಭಾಸ್ಕರ್‌ಗೌಡ, ಮಾಧ್ಯಮ ವಕ್ತಾರ ಮಹೇಶ್, ಜಿಲ್ಲಾ ಯೂತ್ ಕಾಂಗ್ರೆಸ್ ಅಧ್ಯಕ್ಷ ಚಂದನ್‌ಗೌಡ, ಹೇಮಂತ್‌ಕುಮಾರ್ ಮತ್ತಿತರರಿದ್ದರು.

ಹಿಂದಿನ ಸರ್ಕಾರಕ್ಕಿಂತ ಈಗಿನ ಸರ್ಕಾರದಲ್ಲಿ ಭ್ರಷ್ಟಾಚಾರ ಹೆಚ್ಚು

ನಮ್ಮ ವಿಚಾರ ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಗುತ್ತಿಗೆದಾರರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ: ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಆರೋಪ



ಮಡಿಕೇರಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಮಾತನಾಡಿದರು.

ಮಡಿಕೇರಿ, ಫೆ.12– ಈ ಹಿಂದಿನ ಸರ್ಕಾರದಲ್ಲಿದ್ದ ಭ್ರಷ್ಟಾಚಾರಕ್ಕಿಂತಲೂ ಇಂದಿನ ಸರ್ಕಾರದಲ್ಲಿ ಇದರ ಪ್ರಮಾಣ ಹೆಚ್ಚಾಗಿದ್ದು, ಮಧ್ಯವರ್ತಿಗಳ ಮೂಲಕ ಸರ್ಕಾರದ ಆಡಳಿತ ನಡೆಯುತ್ತಿರುವುದಾಗಿ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್.ಮಂಜುನಾಥ್ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಸುದರ್ಶನ ಅತಿಥಿ ಗೃಹದಲ್ಲಿ ಆಯೋಜಿತ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಗುತ್ತಿಗೆದಾರರ ಸಂಘದ ಹಿಂದಿನ ಅಧ್ಯಕ್ಷರಾಗಿ ಕೆಂಪಣ್ಣ ಅವರು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭ ವಿರೋಧ ಪಕ್ಷದಲ್ಲಿದ್ದ ಸಿದ್ದರಾಮಯ್ಯ ಅವರು, ನಮ್ಮ ವಿಚಾರವನ್ನು ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದರು. ಹೀಗಿದ್ದೂ ಇಂದು ಗುತ್ತಿಗೆದಾರರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ಷೇಪಿಸಿದರು.

ರಾಜ್ಯ ವ್ಯಾಪಿ ಗುತ್ತಿಗೆದಾರರ ಕೆಲಸಗಳಿಗೆ 37 ಸಾವಿರ ಕೋಟಿ ಹಣ ಇಂದಿಗೂ ಪಾವತಿಯಾಗಿಲ್ಲ. ಕಳೆದ ಎರಡೂವರೆ ವರ್ಷಗಳ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಿಂಚಿತ್ ಹಣ ಪಾವತಿಯಾಗದೆ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿರುವುದಾಗಿ ತಿಳಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘವು ಸರ್ಕಾರದ ಧೋರಣೆಗಳನ್ನು ಖಂಡಿಸಿ, ಬಾಕಿ ಮೊತ್ತವನ್ನು ತಕ್ಷಣ ಪಾವತಿಸುವಂತೆ ಆಗ್ರಹಿಸಿ ಮಾ.5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಾರ್ಯ ಸ್ಥಗಿತಗೊಳಿಸಿ ಬೃಹತ್ ಮುಷ್ಕರ ನಡೆಸಲಿದೆಯೆಂದು ಸ್ಪಷ್ಟಪಡಿಸಿದರು.


ಅಧಿಕಾರಿಗಳ ಸಭೆಗೆ ಆಗ್ರಹ: ರಾಜ್ಯ ವ್ಯಾಪಿ ಗುತ್ತಿಗೆದಾರರಿಗೆ ಕೊಡಬೇಕಾದ ಬಾಕಿ ಇರುವ ಹಣ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ರಾಜ್ಯ ಮುಖ್ಯ ಕಾರ್ಯದರ್ಶಿಗಳನ್ನು ಒಳಗೊಂಡಂತೆ, ವಿವಿಧ ಇಲಾಖೆಗಳ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳ ಅಧಿಕೃತ ಸಭೆ ಕರೆದು ಸಮಸ್ಯೆ ಬಗೆಹರಿಸಬೇಕೆಂದು ಆರ್.ಮಂಜುನಾಥ್ ಒತ್ತಾಯಿಸಿದರು.

ಏನೋ ವ್ಯವಸ್ಥೆ ಆಗುತ್ತದೆ: ರಾಜ್ಯ ವ್ಯಾಪಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆದಾರರು ತಮ್ಮ ಕೆಲಸ ಕಾರ್ಯಗಳಿಗೆ ಅಗತ್ಯವಾದ ಉಪಕರಣಗಳನ್ನು, ಇಂಜಿನಿಯರ್‌ಗಳನ್ನು ಹೊಂದಿದ್ದಾರೆ. ಹೀಗಿದ್ದೂ ಪ್ರಸ್ತುತ ಅಗತ್ಯ ಮೂಲ ಸೌಲಭ್ಯಗಳೇ ಇಲ್ಲದ ಲ್ಯಾಂಡ್ ಆರ್ಮಿ, ನಿರ್ಮಿತಿ ಕೇಂದ್ರಗಳ ಮೂಲಕ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ. ಇದಕ್ಕೆ ಕಾರಣ, ಈ ಸಂಸ್ಥೆಗಳಿಂದ ಕಾಮಗಾರಿಗಳನ್ನು ನಡೆಸಿದರೆ 'ಏನೋ ಒಂದು ವ್ಯವಸ್ಥೆ ಆಗುತ್ತದೆ' ಎನ್ನುವ ಉದ್ದೇಶವೆ ಕಾರಣ ಎಂದು ಮಾರ್ಮಿಕವಾಗಿ ಹೇಳಿದರು.

190 ಕೋಟಿ ಹಣ ಬಾಕಿ: ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಸರ್ಕಾರ 190 ಕೋಟಿ ಹಣವನ್ನು ಪಾವತಿಸದೆ ಬಾಕಿ ಉಳಿಸಿಕೊಂಡಿದೆ. ಇದರಲ್ಲಿ ಲೋಕೋಪಯೋಗಿ ಇಲಾಖೆಯದ್ದೆ 96 ಕೋಟಿಯಷ್ಟು ಇರುವುದಾಗಿ ತಿಳಿಸಿದರು. ಕೊಡಗಿನಲ್ಲಿ ಪ್ರಾಕೃತಿಕ ವಿಕೋಪ ಸಂಬಂಧಿಸಿದ 2018–19, 2019–20ನೇ ಅವಧಿಯಲ್ಲಿ ಇಲ್ಲಿನ ಗುತ್ತಿಗೆದಾರರು ಸಾಕಷ್ಟು ಸಂಕಷ್ಟಗಳ ನಡುವೆಯೂ ಹತ್ತು ಹಲವು ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ. ಇದರ ಬಾಪ್ತು 7 ಕೋಟಿ ಹಣ ಪಾವತಿಯಾಗಲು ಬಾಕಿ ಇದೆ. ಜಿಲ್ಲಾಧಿಕಾರಿಗಳ ನಿಧಿಯಿಂದ ಈ ಹಣದ ಬಿಡುಗಡೆಗೆ ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಆರ್.ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಎನ್.ಡಿ.ಕೃಷ್ಣ, ಉಪಾಧ್ಯಕ್ಷ ಎ.ಜಿ.ಸುರೇಶ್, ಸಂಘಟನಾ ಕಾರ್ಯದರ್ಶಿ ನಾಗರಾಜ್, ಕೊಡಗು ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕಿಮ್ಮುಡಿರ ರವಿ ಚಂಗಪ್ಪ, ಜಿಲ್ಲಾ ಕಾರ್ಯದರ್ಶಿ ಲಾರೆನ್ಸ್, ಗೌರವಾಧ್ಯಕ್ಷ ಸಣ್ಣೇಗೌಡ, ಉಪಾಧ್ಯಕ್ಷ ಎಂ.ಕೆ.ಚಂಗಪ್ಪ, ನಗರ ಉಪಾಧ್ಯಕ್ಷ ರಾಜೀವಲೋಚನ ಸಂಘಟನಾ ಕಾರ್ಯದರ್ಶಿ ಕೆ.ಬಾಬು, ಖಜಾಂಚಿ ರವೀಂದ್ರ ರೈ ಉಪಸ್ಥಿತರಿದ್ದರು.

ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಫೆ.15 ರಂದು ಮಹಾ ಶಿವರಾತ್ರಿ ವಿಶೇಷ ಪೂಜೆ



ಮಡಿಕೇರಿ, ಫೆ.12– ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಸಂಪ್ರದಾಯದಂತೆ ಪ್ರತೀ ವರ್ಷ ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಅದರಂತೆ ಈ ವರ್ಷವೂ ಫೆ.15ರಂದು ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮ ನಡೆಯಲಿದೆ.

ಮಹಾಶಿವರಾತ್ರಿ ಪ್ರಯುಕ್ತ ನಡೆಯುವ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ದೇವಾಲಯದ ಆಡಳಿತಾಧಿಕಾರಿ ಪರವಾಗಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಎನ್.ಜೆ. ಕೋರಿದ್ದಾರೆ.

ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಬೆಳಿಗ್ಗೆ 7 ಗಂಟೆಗೆ ತಆರುದ್ರಾಭಿಷೇಕ, ಬೆಳಗ್ಗೆ 9.30ಕ್ಕೆ ರುದ್ರಹೋಮ, ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ, ದೇವರ ಉತ್ಸವ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ. ಸಂಜೆ 5.30 ರಿಂದ ಭಜನೆ ಮತ್ತು ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಸಂಜೆ 6 ಗಂಟೆಗೆ ತ್ರಯಂಬಕ ಸೇವೆ, ಸಾಯಂಕಾಲ 6.30ಕ್ಕೆ ಲಕ್ಷದೀಪೋತ್ಸವ, ಏಕಾದಶ ರುದ್ರಾಭಿಷೇಕ. ಸಂಜೆ 7.30 ಗಂಟೆಗೆ ಮಹಾಮಂಗಳಾರತಿ, ದೇವರ ನೃತ್ಯ ಉತ್ಸವ, ಲಘು ಉಪಹಾರ. ರಾತ್ರಿ 10.30ಕ್ಕೆ ದೇವರ ತ್ರಿವೇಣಿ ಸಂಗಮ ಭೇಟಿ ಮತ್ತು ಬಾಣಬಿರುಸು ಕಾರ್ಯಕ್ರಮ. ರಾತ್ರಿ 11 ಗಂಟೆಗೆ ಯಕ್ಷ ಕಾವ್ಯ ತರಂಗಿಣಿ ಭಾಗವತ ದಿ॥ ಚಂದ್ರವ ಪೂಜಾರಿ ಪ್ರತಿಷ್ಠಾನ ದರ್ಜೆ ಬಂಟ್ವಾಳ ಇವರಿಂದ ಸ್ತ್ರೀ ಮಾಧುರಿ ಕಾವ್ಯ ಕನ್ನಿಕೆ ಬರಿದಾಗಿ ಕಿತ ಸಂಧ್ಯಾ ಪೂಜಾರಿ ದರ್ಜೆ ಇವರ ದಕ್ಷ ನಿರ್ದೇಶನದಲ್ಲಿ ಯಕ್ಷಗಾನ ಬಯಲಾಟ– ಪ್ರಸಂಗ "ಓಂ ನಮಃ ಶಿವಾಯ".

ಶ್ರೀ ತಲಕಾವೇರಿ ದೇವಾಲಯದಲ್ಲಿ ಬೆಳಗ್ಗೆ 9.30 ಗಂಟೆಗೆ ಏಕಾದಶ ರುದ್ರಾಭಿಷೇಕ. ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ನಡೆಯಲಿದೆ.

ಕಾರ್ಮಿಕ ವಿರೋಧಿ ನೀತಿ ಕೈಬಿಡುವಂತೆ ಒತ್ತಾಯಿಸಿ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ



ಕುಶಾಲನಗರ: ಕೇಂದ್ರ ಸರ್ಕಾರ ಜಾರಿ ಮಾಡಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಕಾರ್ಮಿಕ ವಿರೋಧಿ ಸ್ವರೂಪದ ನೀತಿ, ನಿಯಮಗಳಾಗಿದ್ದು,ಈ ಕೂಡಲೇ ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಎಐಟಿಯುಸಿ ಸಂಘಟನೆ ಮತ್ತು ಎಸ್‌ಎಲ್‌ಎನ್ ಕಾಫಿ ಕ್ಯೂರಿಂಗ್ ಎಂಪ್ಲಾಯಿಸ್ ಯೂನಿಯನ್ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಕೂಡ್ಲೂರು ಕೈಗಾರಿಕಾ ಬಡಾವಣೆಯಿಂದ ಕುಶಾಲನಗರ ತಹಸೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಮೆರವಣಿಗೆ ಸಂದರ್ಭ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಘೋಷಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ತಾಲೂಕು ತಹಸೀಲ್ದಾರ್ ಕಿರಣ್ ಜಿ.ಗೌರಯ್ಯ ಅವರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭ ಎಐಟಿಯುಸಿ ಮೈಸೂರು ಜಿಲ್ಲಾ ಕಾರ್ಯದರ್ಶಿ ಕೆ.ಜಿ.ಸೋಮರಾಜೇ ಅರಸ್, ಸಹ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಎಸ್‌ಎಲ್‌ಎನ್ ಕಾಫಿ ಕ್ಯೂರಿಂಗ್ ಎಂಪ್ಲಾಯಿಸ್ ಯೂನಿಯನ್ ಅಧ್ಯಕ್ಷ ಎಸ್.ಶಿವರಾಘವೇಂದ್ರ ಕಾರ್ಯದರ್ಶಿ ಲೋಕೇಶ್, ಸಹ ಕಾರ್ಯದರ್ಶಿ ಕೆ.ಯು.ನವೀನ್, ಖಜಾಂಚಿ ಪ್ರದೀಪ್ ಮುಖಂಡರಾದ ಡಿ.ಆರ್.ರವಿತೇಜ, ಎಸ್.ಆರ್. ಲೋಕೇಶ್, ಕುಮಾರ್ ಸೇರಿದಂತೆ ನೂರಾರು ಕಾರ್ಮಿಕರು ಪಾಲ್ಗೊಂಡಿದ್ದರು.

ಕಾರ್ಮಿಕ ಕೋಡ್‌ಗಳನ್ನು ವಿರೋಧಿಸಿ ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನೆ



ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಸಂಘಟನೆಗಳು ಪ್ರತಿಭಟನಾ ಮೆರವಣಿಗೆ ನಡೆಸಿದವು.

ಮಡಿಕೇರಿ, ಫೆ12– ದುಡಿಯುವ ವರ್ಗಕ್ಕೆ ಮಾರಕವಾಗಿರುವ ಕೇಂದ್ರ ಸರ್ಕಾರದ 4 ಕಾರ್ಮಿಕ ಕೋಡ್‌ಗಳನ್ನು ಹಿಂದಕ್ಕೆ ಪಡೆಯಬೇಕು. ಮಹಾತ್ಮಾ ಗಾಂಧಿ ನರೇಗಾ ಯೋಜನೆಯನ್ನು ಮತ್ತೆ ಆರಂಭಿಸಬೇಕೆಂದು ಆಗ್ರಹಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳಿಂದ ನಗರದಲ್ಲಿಂದು ಬೃಹತ್ ಪ್ರತಿಭಟನೆ ನಡೆಯಿತು.

ಜಂಟಿ ಕ್ರಿಯಾ ಸಮಿತಿಯ ಪ್ರಮುಖರ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿಯಿಂದ ವಿವಿಧ ಕಾರ್ಮಿಕ ಸಂಘಟನೆಗಳ ನೂರಾರು ಮಂದಿ ಘೋಷಣೆಗಳ ಸಹಿತ ನಗರದ ಮುಖ್ಯ ಬೀದಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಳಿಕ ಗಾಂಧಿ ಮೈದಾನದಲ್ಲಿ ಸಮಾವೇಶಗೊಂಡು ಕೇಂದ್ರದ ನೀತಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪಿ.ಆರ್.ಭರತ್ ಮಾತನಾಡಿ, ಹಲವು ದಶಕಗಳ ಹೋರಾಟಗಳಿಂದ ಕಾರ್ಮಿಕರಿಗೆ ನ್ಯಾಯ ಒದಗಿಸುವ 41 ಕಾನೂನುಗಳನ್ನು ದುಡಿಯುವ ವರ್ಗ ಪಡೆದುಕೊಂಡಿದೆ. ಇಂತಹ ಕಾನೂನುಗಳಲ್ಲಿ 21 ಕಾನೂನುಗಳನ್ನು ಇಂದಿನ ಕೇಂದ್ರ ಸರ್ಕಾರ 4 ಲೇಬರ್ ಕೋಡ್‌ಗಳನ್ನಾಗಿ ಬದಲಿಸುವ ಮೂಲಕ ಕಾರ್ಮಿಕ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಮೂಲಕ ಬಂಡವಾಳಶಾಹಿಗಳಿಗೆ ಅನುಕೂಲತೆಯನ್ನು ಕಲ್ಪಿಸಲು ಮುಂದಾಗಿದೆ ಇಂತಹ 4 ಕೋಡ್‌ಗಳನ್ನು ತಕ್ಷಣ ಕೇಂದ್ರ ಸರ್ಕಾರ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ತಂದಿರುವ ಕಾರ್ಮಿಕ ಕಾಯ್ದೆಗಳ 4 ಕೋಡ್‌ಗಳ ವಿರುದ್ಧ ಕಾರ್ಮಿಕ ಸಂಘಟನೆಗಳಿಂದ ದೇಶವ್ಯಾಪಿ ದೊಡ್ಡ ಮಟ್ಟದ ಹೋರಾಟಗಳು ನಡೆದಿವೆ. ಹೀಗಿದ್ದೂ ಕೇಂದ್ರ ಸರ್ವಾಧಿಕಾರಿ ಧೋರಣೆಯಿಂದ ಇವುಗಳನ್ನು ಜಾರಿ ಮಾಡಿದೆ. ಇದು ಕೇವಲ ಬಂಡವಾಳ ಶಾಹಿಗಳನ್ನು ಓಲೈಸುವ, ಅವರನ್ನು ಮತ್ತಷ್ಟು ಶ್ರೀಮಂತರನ್ನಾಗಿಸುವ ಪ್ರಯತ್ನ ಎಂದು ಆಕ್ರೋಷ ವ್ಯಕ್ತಪಡಿಸಿದರು. ಹೋರಾಟದ ಮೂಲಕ ವಿದ್ಯುಚ್ಛಕ್ತಿ ತಿದ್ದುಪಡಿ, ಬೀಜ ಮಸೂದೆ, ಭೂ ಸ್ವಾಧೀನ ಕಾಯ್ದೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸುತ್ತಿರುವುದಾಗಿ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಮುಖರು ಹಾಗೂ ರೈತ ಸಂಘದ ಮುಖಂಡರಾದ ನೆರವಂಡ ಉಮೇಶ್ ಮಾತನಾಡಿದರು.

ಪ್ರತಿಭಟನೆಯ ಬಳಿಕ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಮುಖಂಡರು ಮನವಿ ಸಲ್ಲಿಸಿದರು.

ಸಂತ ಅನ್ನಮ್ಮ ದೇವಸ್ಥಾನ, ಲೂರ್ದು ಮಾತೆಯ ಭವ್ಯ ವಾರ್ಷಿಕೋತ್ಸವ



ವಿರಾಜಪೇಟೆ, ಫೆ.12– ಪಟ್ಟಣದಲ್ಲಿರುವ ಸಂತ ಅನ್ನಮ್ಮ ದೇವಾಲಯ ಹಾಗೂ ಲೂರ್ದು ಮಾತೆಯ ವಾರ್ಷಿಕ ಮಹೋತ್ಸವವು ಶ್ರದ್ಧಾ ಭಕ್ತಿ ಹಾಗೂ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಸಂತ ಅನ್ನಮ್ಮ ದೇವಾಲಯದಲ್ಲಿ ಮೈಸೂರು ಧರ್ಮ ಕೇಂದ್ರದ ವಂದನೆಯ ಪೂಜ್ಯ ಗುರು ಫ್ರಾನ್ಸಿಸ್ ಸೆರಾವೋ ಅವರಿಂದ ಆಡಂಬರ ಗಾಯನ ಬಲಿಪೂಜೆ ಧಾರ್ಮಿಕ ಆಶೀರ್ವಚನ ಹಾಗೂ ಪರಮಪ್ರಸಾದ ವಿತರಣೆ ಬಳಿಕ ಸಂತ ಅನ್ನಮ್ಮ ಮತ್ತು ಲೂರ್ದು ಮಾತೆಯ ವಿದ್ಯುತ್ ದೀಪಾಲಂಕೃತ ಮಂಟಪವು ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಹೊರಟು ಚರ್ಚ್ ರಸ್ತೆಯಾಗಿ, ದಕ್ಕನಿ ಮೋಹಲ್ಲ, ತೆಲುಗರಬೀದಿ, ಜೈನರಬೀದಿ, ಗಡಿಯಾರ ಕಂಬದ ಬಳಿಯಿಂದ ಮುಖ್ಯ ರಸ್ತೆಯಾಗಿ, ಖಾಸಗಿ ಬಸ್ಸು ನಿಲ್ದಾಣ ಮಾರ್ಗವಾಗಿ, ಸುಣ್ಣಬೀದಿ, ಗೋಣಿಕೊಪ್ಪ ರಸ್ತೆ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಬಳಿಯಿಂದ, ಮುಖ್ಯರಸ್ತೆಗಾಗಿ ದೊಡ್ಡಟ್ಟಿಚೌಕಿ ಮಾರ್ಗವಾಗಿ ಸಂತ ಅನ್ನಮ್ಮ ದೇವಾಲಯದವರೆಗೆ ಕ್ರೈಸ್ತ ಭಾಂದವರು ನೂರಾರು ಸಂಖ್ಯೆಯಲ್ಲಿ ಮೆರವಣಿಗೆ ನಡೆಯಿತು.

ಈ ವೇಳೆ ಸಂತ ಅನ್ನಮ್ಮ ದೇವಾಲಯದ ಧರ್ಮಗುರುಗಳಾದ ಜೇಮ್ಸ್ ಡಮಿನಿಕ್, ಮದುಲೈ ಮುತ್ತು, ಐಸಕ್ ರತ್ನಕರ, ಅವಿನಾಶ್, ದಯಾನಂದ ಪ್ರಭು, ವಿಜೆಯಕುಮಾರ್ ಹಾಗೂ ಆರ್ಜಿ, ಪೊನ್ನಂಪೇಟೆ, ಅಮ್ಮತ್ತಿ, ಸೋಮವಾರಪೇಟೆ ಇತರೆಡೆಯಿಂದ ಧರ್ಮ ಕೇಂದ್ರದ ಗುರುಗಳು, ಸಲಹಾ ಸಮಿತಿ ಸದಸ್ಯರುಗಳಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ



ವಿದ್ಯುತ್ ಇಲಾಖೆಯ ನೌಕರರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ವಿದ್ಯುತ್ ಖಾಸಗೀಕರಣ ವಿರೋಧಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಆಶ್ರಯದಲ್ಲಿ ನೌಕರರು, ಅಧಿಕಾರಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.


ನಗರದ ಸೆಸ್ಕ್ ಕಚೇರಿಯ ಮುಂಭಾಗ ಜಮಾಯಿಸಿದ ಅಧಿಕಾರಿಗಳು ಹಾಗೂ ನೌಕರರು, ವಿದ್ಯುತ್ ಕಾಯ್ದೆಗೆ ತಿದ್ದುಪಡಿ ಬೇಡ, ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀಕರಣ ಬೇಡ, ಕಾರ್ಮಿಕರ ಒಗ್ಗಟ್ಟು ಚಿರಾಯುವಾಗಲಿ ಎಂಬ ಘೋಷಣೆಗಳನ್ನು ಕೂಗಿದರು.

ನೌಕರರ ಸಂಘದ ಉಪಾಧ್ಯಕ್ಷ ಎನ್.ಮಹೇಶ್ ಅವರು ಮಾತನಾಡಿ, ಕೇಂದ್ರ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವುದರ ವಿರುದ್ಧ ಆಲ್ ಇಂಡಿಯಾ ಇಂಜಿನಿಯರ್ ಒಕ್ಕೂಟ, ಸಂಘ, ಸಂಸ್ಥೆಗಳ ಒಂದು ದಿನದ ಮುಷ್ಕರ ಮಾಡಿರುವುದನ್ನು ಬೆಂಬಲಿಸಿ ನಾವು ಇಂದು ಪ್ರತಿಭಟನೆ ಮಾಡುತ್ತಿದ್ದೇವೆ. ವಿದ್ಯುತ್ ಸುಧಾರಣೆ ಕಾಯ್ದೆ 2026 ಗ್ರಾಹಕರಿಗೆ, ನೌಕರರ ವರ್ಗದವರಿಗೆ ಮಾರಕವಾಗಲಿದ್ದು, ಇದು ಕಾರ್ಮಿಕ ವಿರೋಧಿ ನೀತಿಯಾಗಿದೆ. ರೈತರು, ಜನಸಾಮಾನ್ಯರಿಗೆ ಹೊರೆಯಾಗಲಿದೆ. ಕೃಷಿ ಉದ್ದೇಶಕ್ಕೆ ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್‌ಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಬಡವರಿಗೆ ನೀಡುತ್ತಿರುವ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಉಚಿತ ವಿದ್ಯುತ್‌ಗೆ ಕಡಿವಾಣ ಬೀಳುವ ಸಾಧ್ಯತೆ' ಎಂದು ಕಳವಳ ವ್ಯಕ್ತಪಡಿಸಿದರು.

ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ 60 ಸಾವಿರಕ್ಕೂ ಹೆಚ್ಚು ನೌಕರರು ಹಾಗೂ ಈ ಸಂಸ್ಥೆ ಕಟ್ಟಿ ಬೆಳಸಿದ 40 ಸಾವಿರ ಪಿಂಚಣಿದಾರರಿಗೆ ತೊಂದರೆಯಾಗಲಿದೆ. ಆದ್ದರಿಂದ ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣ ಮಾಡಬಾರದು' ಆಗ್ರಹಿಸಿದರು

ಪ್ರತಿಭಟನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್, ಎಇಇ ಮಹೇಶ್, ನೌಕರರ ಸಂಘದ ಅಧ್ಯಕ್ಷ ಮುರುಳೀಕೃಷ್ಣ ಸ್ವಾಮಿ, ಕಾರ್ಯದರ್ಶಿ ಸಿದ್ದರಾಜಪ್ಪ, ಎಸ್‌ಸಿ, ಎಸ್‌ಟಿ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ ಸದಸ್ಯ ಮಂಜುನಾಥ್, ಅಧ್ಯಕ್ಷ ಪ್ರಶಾಂತ್, ಕಾರ್ಯದರ್ಶಿ ಸೋಮೇಶ್ವರ, ಎಲ್ಲ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ನೌಕರರ ಬಾಂಧವರು ಭಾಗವಹಿಸಿದ್ದರು.

ಕೊಳ್ಳೆಗಾಲದಲ್ಲೂ ವಿದ್ಯುತ್ ನೌಕರರ ಪ್ರತಿಭಟನೆ




ವಿದ್ಯುತ್ ಇಲಾಖೆಯ ನೌಕರರು ಕೊಳ್ಳೆಗಾಲದಲ್ಲಿ ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಫೆ.12– ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸುವ ಕ್ರಮವನ್ನು ವಿರೋಧಿಸಿ ಕೆಪಿಟಿಸಿಎಲ್ ನೌಕರರು ಗುರುವಾರ ಚೆಸ್ಕಾಂ ಕಚೇರಿ ಮುಂಭಾಗ ಕೆಲಕಾಲ ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಕಚೇರಿಯ ಮುಂಭಾಗದಲ್ಲಿ ಜಮಾಯಿಸಿದ ನೂರಾರು ನೌಕರರು ಹಾಗೂ ಅಧಿಕಾರಿಗಳು ಖಾಸಗಿ ಕರಣವನ್ನು ಖಂಡಿಸಿ ಧಿಕ್ಕಾರ ಕೂಗುವ ಮೂಲಕ ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟಿಸಿ ಗಮನ ಸೆಳೆದರು.

ಸೆಸ್ಕ್ ಇಲಾಖೆ ಕಾರ್ಯಪಾಲಕ ಅಭಿಯಂತರ ಇಂಜಿನಿಯರ್ ತಬಸ್ಸುಮ್ ಅಪ್ಜಾ, ಎಇಇ ಶ್ರೀನಿಧಿ, ರಾಜು.ಎಂ, ಲೆಕ್ಕಾಧಿಕಾರಿ ವಿನೋದ್ ಕುಮಾರ್, ಲೆಕ್ಕಾಧಿಕಾರಿ ಪ್ರಸನ್ನ, ಕೆಪಿಟಿಸಿಎಲ್ ನೌಕರರ ಸಂಘ ಅಧ್ಯಕ್ಷ ಹೆಚ್.ರೇವಣ್ಣ, ಕಾರ್ಯದರ್ಶಿ ಎಂ.ನಂಜುಂಡೇಗೌಡ ಇನ್ನಿತರಿದ್ದರು.

ಜಾನಪದ ಕಲಾವಿದ ಕೈಲಾಸ್ ಮೂರ್ತಿ ನಿಧನ



ಕೊಳ್ಳೇಗಾಲ, ಫೆ.12– ತಾಲೂಕಿನ ಸಿದ್ದಯ್ಯನಪುರ ಗ್ರಾಮದ ಬಹುಮುಖ ಪ್ರತಿಭೆ ಜಾನಪದ ಕಲಾವಿದ ಎಂ.ಕೈಲಾಸ ಮೂರ್ತಿ (38) ಬುಧವಾರ ಮಧ್ಯ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಮೃತರು ತಾಯಿ, ಪತ್ನಿ, ಪುತ್ರ, ಪುತ್ರಿ, ಇಬ್ಬರು ಸಹೋದರರು, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಜಾನವಿ ಜಾನಪದ ಕಲಾ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರು ಆಗಿದ್ದ ಇವರು, ತಮ್ಮ ವೃತ್ತಿ ಜೀವನವನ್ನೇ ಜಾನಪದ ಕಲೆಗೆ ಮುಡಿಪಾಗಿಟ್ಟಿದ್ದರು. ಕನ್ನಡ ಜಾನಪದ ಪರಿಷತ್‌ನ ಅಧ್ಯಕ್ಷರು ಸಹ ಆಗಿದ್ದರು.

ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದ ಇವರು, ವಿಶೇಷವಾಗಿ ಚಾಮರಾಜನಗರ ಜಿಲ್ಲೆಯ ಜಾನಪದ ಉಳಿವಿಗೆ ಶ್ರಮಿಸುತ್ತಿದ್ದರು. ಮಣಿಪುರದ ವಿಶ್ವ ವಿದ್ಯಾನಿಲಯದ ಇಂಫಾಲ ಹೊರನಾಡು ಉತ್ಸವ, ದೂರದರ್ಶನ ವಾಹಿನಿಯಲ್ಲಿ ಗಾನ ಗಾರುಡಿಗ ಕಾರ್ಯಕ್ರಮದಲ್ಲಿ ಜಾನಪದ ಗೀತೆಗಳನ್ನು ಹಾಡುತ್ತಿದ್ದರು. ಚಾಮರಾಜನಗರದಲ್ಲಿ ನಡೆಯುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಇವರಿಗೆ ಸಂದ ಪ್ರಮುಖ ಪ್ರಶಸ್ತಿಗಳಲ್ಲಿ 2016–17ನೇ ಸಾಲಿನ ಜಿಲ್ಲಾ ಯುವ ಪ್ರಶಸ್ತಿ, 2023–24ನೇ ಸಾಲಿನ ಜಾನಪದ ದತ್ತಿ ಪ್ರಶಸ್ತಿ, 2025ನೇ ಸಾಲಿನಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಜಾನಪದ ಪರಿಷತ್ತಿನ ದಶಮಾನೋತ್ಸವ ಜಾನಪದ ಗೌರವ ಪ್ರಶಸ್ತಿ, ಅಂತರರಾಷ್ಟ್ರೀಯ ಜಾನಪದ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಜಾನಪದ ಸಿರಿ ಪ್ರಶಸ್ತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ, ಕರುನಾಡು ಸೇವಾ ಟ್ರಸ್ಟ್ ಮಂಡ್ಯ ವತಿಯಿಂದ 2020ರ ಪ್ರಜಾ ವಿಭೂಷಣ ಪ್ರಶಸ್ತಿ ಇನ್ನು ಅನೇಕ ರಾಜ್ಯ ಮಟ್ಟದ ರಾಷ್ಟ್ರಮಟ್ಟದ ಪ್ರಶಸ್ತಿಗಳು ಸಂದಿವೆ.

ಇವರ ನಿಧನಕ್ಕೆ ಚಾಮರಾಜನಗರ ಜಿಲ್ಲೆಯ ಎಲ್ಲಾ ಕಲಾವಿದರು, ಅಧಿಕಾರಿಗಳು, ರಾಜಕಾರಣಿಗಳು ಶೋಕ ವ್ಯಕ್ತಪಡಿಸಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮವಾದ ಕೊಳ್ಳೇಗಾಲ ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ ಗುರುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ ಸಿಐಟಿಯು ಪ್ರತಿಭಟನೆ

ಜನವಿರೋಧಿ ಕೇಂದ್ರ ಬಜೆಟ್ ವಿರುದ್ಧ ಘೋಷಣೆ; ಚಿತ್ತಿ ಪತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ



ಬೇಡಿಕೆ ಈಡೇರಿಸುವಂತೆ ಸಿಐಟಿಯು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ನೌಕರರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಘಟಕ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ, ಮುಖಂಡ ರಾಮಕೃಷ್ಣ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಅಗ್ರಹಾರ ಬೀದಿಯ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ ಕೆಲಕಾಲ ರಸ್ತೆ ತಡೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಜನವಿರೋಧಿ ಕೇಂದ್ರ ಬಜೆಟ್‌ಗೆ ಧಿಕ್ಕಾರ ಎಂದು ಬರೆದಿದ್ದ ಭಿತ್ತಿಪತ್ರಕ್ಕೆ ಬೆಂಕಿಹಚ್ಚಿ ಅಕ್ರೋಶ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ಮಾತನಾಡಿ, ಶಿಕ್ಷಣ ಇಲಾಖೆ ಎಲ್‌ಕೆಜಿ, ಯುಕೆಜಿ ನಡೆಸುವುದನ್ನು ನಿಲ್ಲಿಸಿ, ಅಂಗನವಾಡಿ ಕೇಂದ್ರಗಳಲ್ಲಿಯೇ ನಡೆಸಬೇಕು. ಮತ್ತು ಅಗತ್ಯವಿರುವ ಬಜೆಟ್ ಕೊಡಬೇಕು. ಅಂಗನವಾಡಿ ನೌಕರರಿಗೆ ದ್ರೋಹ ಬಗೆದ 4 ಕಾರ್ಮಿಕ ಸಂಹಿತೆಗಳು ರದ್ದುಪಡಿಸಬೇಕು ಶಾಸನ ಬದ್ಧ ಸವಲತ್ತುಗಳನ್ನು ನೀಡದ "ಶ್ರಮಶಕ್ತಿ ನೀತಿ" 2025 ಬೇಡವೇ ಬೇಡ. ಅಂಗನವಾಡಿ ನೌಕರರಿಗೂ ಮುಟ್ಟಿನ ರಜೆ ನೀಡಬೇಕು. 456 ಲಕ್ಷ ಸ್ಕಿಮ್ ಕಾರ್ಮಿಕರ ಸೇವಾ ಷರತ್ತುಗಳ ಸುಧಾರಣೆಗೆ ಪ್ರತ್ಯೇಕ ವೇತನ ಆಯೋಗ ರಚಿಸಬೇಕು ಎಂದು ಒತ್ತಾಯಿಸಿದರು.

ಐಸಿಡಿಎಸ್ ಯೋಜನೆಯನ್ನು ಖಾಯಂ ಮಾಡಬೇಕು, ಖಾಯಂ ಮಾಡುವ ತನಕ ಪ್ರತ್ಯೇಕ ನಿರ್ದೇಶಾನಾಲಯವನ್ನು ರಚಿಸಬೇಕು.

2018 ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಳ ಮಾಡಿಲ್ಲ, ಕೂಡಲೇ ಘಟಕ ವೆಚ್ಚ ಹೆಚ್ಚಳ ಮಾಡಬೇಕು ಮತ್ತು ಸ್ಥಳೀಯ ಆಹಾರ–ಪದಾರ್ಥಗಳನ್ನು ನೀಡಬೇಕು.

2018ರಿಂದ ಅಂಗನವಾಡಿ ನೌಕರರಿಗೆ ಕೇಂದ್ರ ಸರ್ಕಾರ ವೇತನ ಹೆಚ್ಚಳ ಮಾಡಲಿಲ್ಲ, ಇಂದಿಗೂ ಅಂಗನವಾಡಿ ಕಾರ್ಯಕರ್ತೆಗೆ 2700 ರೂ., ಸಹಾಯಕಿಗೆ 1350 ರೂ. ಗಳನ್ನು ಮಾತ್ರವೇ ನೀಡುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರ ಕೂಡಲೇ ಕನಿಷ್ಠ ವೇತನವನ್ನಾದರೂ ಜಾರಿ ಮಾಡಬೇಕು. ಎಫ್‌ಆರ್‌ಎಸ್‌ನ್ನು ರದ್ದು ಮಾಡಬೇಕು ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ವೈಫೈ ವ್ಯವಸ್ಥೆ ನೀಡಬೇಕು. ಅಂಗನವಾಡಿ ನೌಕರರನ್ನು ಚುನಾವಣಾ ಕೆಲಸಗಳಿಂದ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಚುನಾವಣಾಧಿಕಾರಿಗಳು ಅಂಗನವಾಡಿ ಕಾರ್ಯಕರ್ತರ ಮೇಲೆ ಶಿಸ್ತುಕ್ರಮ ಜರುಗಿಸಬಾರದು. ಖಾಸಗಿ ಅಂಗನವಾಡಿ ವಿಚಾರಗಳಲ್ಲಿ ನೌಕರರ ಬಂಧನವಾದಾಗ ವಿಚಾರಣೆ ನಡೆಸದೆ ಏಕಮುಖವಾಗಿ ಕೆಲಸದಿಂದ ವಜಾ ಮಾಡುವುದನ್ನು ನಿಲ್ಲಿಸಬೇಕು. ಅಂಗನವಾಡಿ ನೌಕರರನ್ನು 3 ಮತ್ತು 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕು. ಅಂಗನವಾಡಿ ನೌಕರರನ್ನು ಖಾಯಂ ಮಾಡುವ ತನಕ 26 ಸಾವಿರ ಕನಿಷ್ಠ ವೇತನ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷೆ ಗುರುಮಲ್ಲಮ್ಮ, ಕಾರ್ಯದರ್ಶಿ ದೇವಮಣಿ, ಚಾಮರಾಜನಗರ ತಾಲೂಕು ಕಾರ್ಯದರ್ಶಿ ಶಾಹಿದಾಬಾನು, ಖಜಾಂಚಿ ಗುರುಲಿಂಗಮ್ಮ ಸಂತೇಮರಹಳ್ಳಿ ಅಧ್ಯಕ್ಷ ಪಾರ್ವತಮ್ಮ, ಕಾರ್ಯದರ್ಶಿ ತೊಳಸಮ್ಮ, ಕೊಳ್ಳೇಗಾಲ ತಾಲೂಕು ಅಧ್ಯಕ್ಷೆ ಶಾಂತಮ್ಮ ಯಳಂದೂರು ತಾಲೂಕು ಅಧ್ಯಕ್ಷೆ ಮೀನಾಕ್ಷಿ, ಬಿಸಿಯೂಟ ಜಿಲ್ಲಾಧ್ಯಕ್ಷೆ, ಶಿವಮ್ಮ ಇತರರು ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಫೆ.12– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಫೆ.14 ರಂದು 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ತಾಲೂಕಿನ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕೋಡಿಮೋಳೆ, ಚಾ.ನಗರ ಟೌನ್–1, ಜಿಲ್ಲಾಧಿಕಾರಿ ಕಚೇರಿ, ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ರೈಲ್ವೆ ಬಡಾವಣೆ, ಕೆಹೆಚ್‌ಪಿ ಕಾಲೊನಿ, ಪೊಲೀಸ್ ಕ್ವಾರ್ಟಸ್, ಜೂನಿಯರ್ ಕಾಲೇಜ್, ಗುಂಡ್ಲುಪೇಟೆ ರಸ್ತೆ, ಮಾದಾಪುರ, ದೊಡ್ಡರಾಯಪೇಟೆ, ಮಂಗಲ, ಕಾಗಲವಾಡಿ, ಹರದನಹಳ್ಳಿ, ಬೇಡರಪುರ, ಟಿ.ಕೆ. ಮೋಳೆ, ಶಿವಪುರ, ರಾಮಸಮುದ್ರ, ಕರಿನಂಜನಪುರ, ನ್ಯಾಯಲಯ ರಸ್ತೆ, ಗೂಳಿಪುರ, ಹೊಂಗನೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪಡಿತರ ಅಕ್ಕಿ ಅಕ್ರಮ ಸಾಗಣೆ; ಆರೋಪಿ ಬಂಧನ

ಕೊಳ್ಳೇಗಾಲ, ಫೆ.12– 18ಕ್ಕೂ ಅಧಿಕ ಪಡಿತರ ಅಕ್ಕಿ ಮೂಟೆಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪಿಯನ್ನು ಪಟ್ಟಣ ಪೊಲೀಸರು ಗುರುವಾರ ಬಂಧಿಸಿ ಅಕ್ಕಿ ಮೂಟೆಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ ಆರೋಪಿಯನ್ನು ತಿ.ನರಸೀಪುರ ಜುನ್ಯೆಲ್ ಎಂದು ಗುರುತಿಸಲಾಗಿದೆ.

ತಾಲೂಕಿನ ಹಳೇ ಅಣಗಳ್ಳಿ ಗ್ರಾಮದ ರಸ್ತೆಯಲ್ಲಿ ಓಮಿನಿ ಕಾರಿನಲ್ಲಿ ಅಕ್ರಮವಾಗಿ 18 ಮೂಟೆ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಟಿ.ನರಸೀಪುರ ಟೌನ್ ವಾಸಿ ಜುನ್ಯೆಲ್ ಎಂಬಾತನನ್ನು ಬಂಧಿಸಲಾಗಿದ್ದು ಈತನಿಂದ 786 ಕೆ.ಜಿ ತೂಕದ ಅಕ್ಕಿ ಸಮೇತ ಮಾರುತಿ ಒಮ್ನಿಯನ್ನು ವಶಪಡಿಸಿಕೊಳ್ಳಲಾಗಿದೆ.

ಈತ ಕೊಳ್ಳೇಗಾಲದ ಸುತ್ತಮುತ್ತ ಕಡಿಮೆ ಬೆಲೆಗೆ ಅಕ್ಕಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಕಾರಿನಲ್ಲಿಟ್ಟುಕೊಂಡು ಸಾಗಾಣಿಕೆ ಮಾಡುವಾಗ ಹಳೇ ಅಣಗಳ್ಳಿ ಗ್ರಾಮದಲ್ಲಿ ಖಚಿತ ಮಾಹಿತಿ ಮೇರೆಗೆ ಆಹಾರ ನೀರಿಕ್ಷಕ ಪ್ರಸಾದ್, ಟೌನ್ ಎಸ್‌ಐ ವರ್ಷ, ಪೇದೆಗಳಾದ ಶಿವಮಂಜು, ರಾಜು, ಬಸವರಾಜು, ದ್ವಾರಕೀಶ್, ನಾಗರಾಜು ಇನ್ನಿತರರು ದಾಳಿ ನಡೆಸಿ ಆರೋಪಿ ಬಂಧಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ಚಾಮರಾಜನಗರ ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನಿರ್ದೇಶಕರ ಅವಿರೋಧ ಆಯ್ಕೆ





ಚಾಮರಾಜನಗರ: ಚಾಮರಾಜನಗರ ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ವೀರಭದ್ರನಾಯಕ (ಪರಿಶಿಷ್ಟ ಪಂಗಡ ಮೀಸಲು), ಬಸವಣ್ಣ (ಪರಿಶಿಷ್ಟ ಜಾತಿ ಮೀಸಲು), ರಾಜು ಹೊಸೂರು (ಹಿಂದುಳಿದ ವರ್ಗ–ಬಿ ಮೀಸಲು), ಬಸವರಾಜು ಎಂ, (ಹಿಂದುಳಿದ ವರ್ಗ–ಎ.ಮೀಸಲು), ಮಂಜುಳ. ಸಿ.ಎಸ್, ಸ್ನೇಹಲಕ್ಷ್ಮೀ.ಎಸ್. (ಮಹಿಳಾ ಮೀಸಲು) ಸಾಮಾನ್ಯ ವರ್ಗದಿಂದ ಮಹೇಂದ್ರ ಸಿ, ಎಂ.ಇ. ಮಂಜುನಾಥ್, ರಾಮಸಮುದ್ರ ಬಾಬು, ಆರ್.ರಾಜೇಂದ್ರ, ಎಂ.ಲಿಂಗಪ್ಪ, ಜಿವಿ.ವೀರಭದ್ರಪ್ಪ, ಎಂ.ಜಿ. ಶ್ರೀಕಾಂತ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿ ಎಂ.ಪಿ.ಪದ್ಮ ನಾಭ, ಸಹಾಯಕ ಚುನಾವಣಾಧಿಕಾರಿ ಮಂಜುಕುಮಾರ್ ಕರ್ತವ್ಯ ನಿರ್ವಹಿಸಿದರು.

ಚಾಮರಾಜನಗರ ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆಯಾದ ನೂತನ ನಿರ್ದೇಶಕರಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಖಜಾಂಚಿ ಪುಟ್ಟರಾಜು ಹಾಗೂ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ದಲಾಯತ್, ಸೇವಕರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಖಾಲಿ ಇರುವ ಒಂದು ದಲಾಯತ್, ಸೇವಕರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಹುದ್ದೆಗೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದನುಸಾರ ಗೌರವಧನದ ಸೌಲಭ್ಯಗಳಿರುತ್ತದೆ. ಆಸಕ್ತರು ನಿಗದಿತ ನಮೂನೆಯಲ್ಲಿ ಮತ್ತು ಸಂಬಂಧಿಸಿದ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಾಮರಾಜನಗರ ಕಚೇರಿಯಿಂದ ಪಡೆದು ಸಲ್ಲಿಸಬೇಕು.

'ಆಲ್ಫಾ' ಚಿತ್ರದ ಟ್ರೇಲರ್‌ಗೆ ಶ್ರೀಮುರಳಿ ಸಾಥ್



ಹೇಮಂತ್‌ಕುಮಾರ್ ನಾಯಕನಾಗಿ ನಟಿಸಿರುವ 'ಆಲ್ಫಾ' ಚಿತ್ರದ ಟ್ರೇಲರನ್ನು ನಟ ಶ್ರೀಮುರಳಿ ಇತ್ತೀಚೆಗೆ ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಶ್ರೀಮುರಳಿ, 'ಆಲ್ಫಾ' ಚಿತ್ರದ ಟ್ರೇಲರ್ ನೋಡಿದಾಗ ಹೇಮಂತ್ ಮೊದಲ ಚಿತ್ರಕ್ಕೆ ಮಾಡಿಕೊಂಡಿರುವ ತಯಾರಿ ನೋಡಿ ಬಹಳ ಸಂತೋಷವಾಯಿತು, ಇಡೀ ಚಿತ್ರತಂಡದ ಶ್ರಮ ಈ ಟ್ರೇಲರ್‌ನಲ್ಲಿ ಕಾಣುತ್ತಿದೆ. ಚಿತ್ರತಂಡಕ್ಕೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.

ನಾನು ಶ್ರೀಮುರಳಿ ಅವರ ಅಭಿಮಾನಿ. ನಾನು ನಾಯಕನಾಗಲೂ ಅವರ 'ಉಗ್ರಂ' ಚಿತ್ರವೇ ಸ್ಫೂರ್ತಿ. ಇದೀಗ ಅವರಿಂದಲೇ ನನ್ನ ಮೊದಲ ಚಿತ್ರದ ಟ್ರೇಲರ್ ಹೊರಬಂದಿದ್ದು, ನನಗೆ ಬಹಳ ಖುಷಿಯಾಗಿದೆ. ನಾಯಕನಾಗಬೇಕೆಂಬುದು ನನ್ನ ಬಹುದಿನಗಳ ಆಸೆ. ಅದೀಗ ಈಡೇರಿದೆ. ನಿರ್ದೇಶಕ ವಿಜಯ್ ಸೇರಿದಂತೆ ಚಿತ್ರತಂಡ ತುಂಬಾ ಸಹಕಾರ ನೀಡಿತು, ಅಚ್ಯುತಕುಮಾರ್, ಅವಿನಾಶ್‌ರಂಥ ಹಿರಿಯ ನಟರ ಜೊತೆಗೆ ನಟಿಸಿದ್ದು ಸಂತಸವಾಗಿದೆ. ಅನೂಪ್ ಸೀಳಿನ್ ಅವರ ಸಂಗೀತದ ಎಲ್ಲಾ ಹಾಡುಗಳು ಚೆನ್ನಾಗಿವೆ. ನಮ್ಮ ಚಿತ್ರ ಫೆಬ್ರವರಿ 20ರಂದು ಬಿಡುಗಡೆಯಾಗುತ್ತಿದೆ ಎಂದು ನಾಯಕ ನಟ ಹೇಮಂತ್‌ಕುಮಾರ್ ಹೇಳಿದರು.

ನಂತರ ಮಾತನಾಡಿದ ಚಿತ್ರದ ನಿರ್ದೇಶಕ ವಿಜಯ್, ಈಗಾಗಲೇ ಟೀಸರ್, ಟ್ರೇಲರ್ ಹಾಗೂ ಹಾಡುಗಳ ಮೂಲಕ ಜನರನ್ನು ತಲುಪಿರುವ ನಮ್ಮ ಆಲ್ಫಾ ಚಿತ್ರ ಫೆಬ್ರವರಿ 20ರಂದು ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಎಲ್ಲರೂ ನಮ್ಮ ಚಿತ್ರವನ್ನು ಚಿತ್ರಮಂದಿರಗಳಲ್ಲೇ ನೋಡಿ ಎಂದರು.



ಬಿಗ್‌ಬಾಸ್ ಖ್ಯಾತಿಯ ಕಾರ್ತಿಕ್ ಮಹೇಶ್ ಮಾತನಾಡುತ್ತ, ಈ ಚಿತ್ರದಲ್ಲಿ ನಾನು ಈವರೆಗೂ ಮಾಡಿರದಂಥ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದರು.

ನಾಯಕಿಯರಾದ ಆಯನಾ, ಗೋಪಿಕ ಸುರೇಶ್, ಕಲಾವಿದರಾದ ಅವಿನಾಶ್, ಅಚ್ಯುತಕುಮಾರ್, ವಿನಯ್ ಬಿದ್ದಪ್ಪ, ಗಿರಿರಾಜ್, ಸಂಗೀತ ನಿರ್ದೇಶಕ ಅನೂಪ್ ಸೀಳಿನ್, ಗಾಯಕ ವ್ಯಾಸರಾಜ್ ಸೋಸಲೆ ಇವರೆಲ್ಲ ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿದರು.

'ತ್ರಿಕಾರಂ' ಸಾಂಗ್ ಬಿಡುಗಡೆ



ಹೊಸ ಪ್ರತಿಭೆಗಳ 'ತ್ರಿಕಾರಂ' ಸದ್ಯ ಹಾಡುಗಳಿಂದ ಚಂದನವನದಲ್ಲಿ ಸದ್ದು ಮಾಡುತ್ತಿರುವ ಚಿತ್ರ ಹೌದು ಈಗಾಗಲೇ ಶೀರ್ಷಿಕೆ ಗೀತೆಯಿಂದ ಗಮನ ಸೆಳೆದಿದ್ದ 'ತ್ರಿಕಾರಂ' ಚಿತ್ರದ 'ಸೀದಾ ನಿಂತ್ರೂ ಲೋಕ ಉಲ್ಟಾ ಕಾಣ್ತಿದೆ ...' ಎಂಬ ಸಾಂಗ್ ಇತ್ತೀಚೆಗೆ ಪಿನ್ 2 ಪಿನ್ ಮ್ಯೂಸಿಕ್ ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆ ಆಗಿದೆ. ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತ ಬಂದಿರುವ ದಿಲೀಪ್ ಕುಮಾರ್ ಜಿ.ಆರ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ತಮ್ಮ ಮೊದಲ ನಿರ್ದೇಶನದ ಚಿತ್ರದ ಬಗ್ಗೆ ಮಾತನಾಡಿದ ದಿಲೀಪ್, 'ಈ ಚಿತ್ರವನ್ನು ನಾವು ಗೆಲ್ಲಿಸಲೇಬೇಕು ಎಂದು 6-7 ತಿಂಗಳು ಕುಳಿತು ಕಥೆ ಮೇಲೆ ಕೆಲಸ ಮಾಡಿದ್ದೇವೆ. ಇದೊಂದು ಡಿಫರೆಂಟ್ ಆಗಿರುವ ಸಿನಿಮಾ. ದೈವ ಮತ್ತು ಡೆವಿಲ್ ನಡುವೆ ಹೋರಾಟದ ಕಥೆ ಎನ್ನಬಹುದು. ಹೊಸದುರ್ಗದಲ್ಲಿ ಸಂಪೂರ್ಣ ಶೂಟಿಂಗ್ ಮಾಡಲಾಗಿದೆ. ಇದು ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಚಿತ್ರವಾಗಿದ್ದು, ಒಬ್ಬ ವ್ಯಕ್ತಿ ತನ್ನ ಊರನ್ನು ಕಾಪಾಡಿಕೊಳ್ಳಲು ಹೋರಾಡುವ ಕಥೆ ಕೂಡ ಇದರಲ್ಲಿದೆ' ಎಂದು ಚಿತ್ರದ ಬಗ್ಗೆ ಮಾಹಿತಿ ನೀಡಿದರು.

ಅಂದಂಗೆ ಈ ಚಿತ್ರವನ್ನು ಗಣೇಶ್ ಮೂರ್ತಿ ಸದ್ಗುರು ಸಿನಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ನಿರ್ಮಾಣ ಮಾಡಿದ್ದಾರೆ. ಜೊತೆಗೆ ಚಿತ್ರದಲ್ಲಿ ವಿಲನ್ ಪಾತ್ರ ಕೂಡ ನಿರ್ವಹಿಸಿದ್ದಾರೆ. 'ನಾವು ಕಷ್ಟಪಟ್ಟು ಇಷ್ಟಪಟ್ಟು ಈ ಸಿನಿಮಾ ಮಾಡಿದ್ದೇವೆ. ಒಳ್ಳೆಯ ಕಂಟೆಂಟ್ ಇಟ್ಟುಕೊಂಡು ಮಾಡಿದ ಚಿತ್ರವಿದು. ನಮ್ಮ ಹೀರೋ ತಾಂತ್ರಿಕವಾಗಿ ಕೂಡ ಕೆಲಸ ಮಾಡಿದ್ದಾರೆ. ಚಿತ್ರಕ್ಕಾಗಿ ಕಲಾವಿದರ, ತಂತ್ರಜ್ಞರ ಶ್ರಮ ತುಂಬಾ ಇದೆ' ಎನ್ನುತ್ತಾರೆ ನಿರ್ಮಾಪಕರು. ಇನ್ನು ಚಿತ್ರದ ನಾಯಕ ಹರ್ಷವರ್ಧನ್ ಮಾತನಾಡಿ, 'ನಾನು ಕೋ ಡೈರೆಕ್ಟರ್ ಆಗಿ ಹಲವು ಸಿನಿಮಾಗಳಿಗೆ ಕೆಲಸ ಮಾಡಿದ್ದು, ಹೀರೋ ಆಗಿ ಇದು ಮೊದಲ ಸಿನಿಮಾ. ಈ ಚಿತ್ರಕ್ಕೆ ನಾನು ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲು ಹೋಗಿದ್ದೆ. ನಂತರ ನಿರ್ದೇಶಕರು ಹೀರೋ ಮಾಡಿದರು. ಇದರಲ್ಲಿ ನಂದು ಒಂದು ಪರೋಡಿ, ಇನ್ನೊಂದು ಮೈತಾಲಜಿ ತರ ಪಾತ್ರ ಇರಲಿದೆ' ಎಂದು ಹೇಳಿದರು.

ನಂತರ ಚಿತ್ರದ ನಾಯಕಿ ನಿಶ್ವಿತಾ ಶೆಟ್ಟಿ 'ನಾನು ದ್ವಿಪಾತ್ರದಲ್ಲಿ ಅಭಿನಯ ಮಾಡಿದ್ದು ಪೌರ್ಣಮಿ ಒಂದು ಪಾತ್ರ. ಇನ್ನೊಂದು ಪಾತ್ರ ಸಸ್ಪೆನ್ಸ್ ಆಗಿರಲಿದೆ. ಜಂಬದ ಹುಡುಗಿ ಮತ್ತು ಮುಗ್ಧ ಪಾತ್ರ ಮಾಡಿದ್ದೇನೆ' ಎನ್ನುವರು. ನಟ ನಾಗೇಂದ್ರ ಅರಸ 'ಶೀರ್ಷಿಕೆಯಲ್ಲೇ ಪವರ್ ಫುಲ್ ಇದೆ. ಹೊಸದುರ್ಗದ ಕಡೆಯ ನಿರ್ಮಾಪಕರು ಚಿತ್ರರಂಗಕ್ಕೆ ಬಂದಿದ್ದಾರೆ. ಸಾಂಗ್ ನೋಡಿದಾಗ ಪ್ರಾಮಿಸಿಂಗ್ ಆಗಿದೆ. ನಾನಿಲ್ಲಿ ಎರಡು ಶೇಡ್ ಇರುವ ಪಾತ್ರ ಮಾಡಿದ್ದೇನೆ. ಅದರ ಬಗ್ಗೆ ಹೆಚ್ಚು ಹೇಳಲಾಗದು' ಎಂದರು. ವೇದಿಕೆಯಲ್ಲಿ ಛಾಯಾಗ್ರಾಹಕ ಯಾಶಿನ ಹೊನ್ನಾಳಿ, ಸಂಗೀತ ನಿರ್ದೇಶಕ ವಿವೇಕ್ ಚಕ್ರವರ್ತಿ, ಸಾಹಿತ್ಯ ಬರೆದಿರುವ ಚೇತನ ಮತ್ತು ಕೇಶವ, ನೃತ್ಯ ನಿರ್ದೇಶಕ ಕಂಬಿರಾಜ್ ತಮ್ಮ ಅನುಭವ ಹಂಚಿಕೊಂಡರು. ಕಾರ್ಯಕ್ರಮಕ್ಕೆ ರವೀಂದ್ರ, ನಿರ್ಮಾಪಕ ಅಣಜಿ ನಾಗರಾಜ್, ನಟ ಶಿವರಾಜ್ ಕೆ.ಆರ್.ಪೇಟೆ ಅತಿಥಿಗಳಾಗಿ ಆಗಮಿಸಿ ತಂಡಕ್ಕೆ ಶುಭ ಹಾರೈಸಿದರು.



ಸಾಹಸಿ ಚಂದ್ರುಗೆ 'ಗೌರವ ಡಾಕ್ಟರೇಟ್'



ಕಬ್ಜ ಖ್ಯಾತಿಯ ನಿರ್ದೇಶಕ, ನಿರ್ಮಾಪಕ ಆರ್. ಚಂದ್ರು ಅವರ 45ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಸಿನಿಮಾ ಜೊತೆಗೆ ಶಿಕ್ಷಣ, ಸಾಹಿತ್ಯ ಹಾಗೂ ಸಮಾಜ ಸೇವೆಯನ್ನು ಗುರ್ತಿಸಿ ಮಣಿಪುರ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಘೋಷಿಸಿದೆ.

ಶಿಡ್ಲಘಟ್ಟ ತಾಲೂಕಿನ ಕೇಶವಾರದ ರೈತ ಕುಟುಂಬದಲ್ಲಿ ಜನಿಸಿದ ಚಂದ್ರು 20 ವರ್ಷಗಳ ಹಿಂದೆ 100 ರೂ ಇಟ್ಟುಕೊಂಡು ಬೆಂಗಳೂರಿಗೆ ಬಂದರು. ರೈಟರ್ ಆಗಿ ವೃತ್ತಿ ಪ್ರಾರಂಭಿಸಿ ನಿರ್ದೇಶಕ, ನಿರ್ಮಾಪಕನಾಗಿ ಮೈಲುಗಲ್ಲು ಸೃಷ್ಟಿಸಿದ್ದಾರೆ.

ಈ ಸಂಭ್ರಮದಲ್ಲಿ ಮಾತನಾಡಿದ ಆರ್. ಚಂದ್ರು 'ನನ್ನ ತಂದೆಗೆ ನಾನು ಡಾಕ್ಟರ್ ಓದ ಬೇಕೆಂದು ತುಂಬಾ ಇಷ್ಟವಿತ್ತು. ಆದರೆ ನಾನು ನನ್ನ ಇಷ್ಟದ ಚಿತ್ರರಂಗ ಆಯ್ಕೆ ಮಾಡಿಕೊಂಡೆ. ಅವರ ಆಸೆ ಈ ರೂಪದಲ್ಲಿ ಕೈಗೂಡಿದೆ. ಈ ಗೌರವವನ್ನು ನನ್ನ ತಂದೆಗೆ ಅರ್ಪಣೆ ಮಾಡುತ್ತೇನೆ. ನಾನು ಡಾಕ್ಟರ್ ಚಂದ್ರು ಆಗಿ ರುವ ಬದಲು ನಿರ್ದೇಶಕ ಚಂದ್ರು ಆಗಿಯೇ ಇರಲು ಇಷ್ಟಪಡುತ್ತೇನೆ. ಹಾಗೆಯೇ ಪ್ರೇಕ್ಷಕ ಮೊದಲು ನಮ್ಮ ಮನೆ ಊಟ (ಸಿನಿಮಾ) ಇಷ್ಟಪಡುವಂತೆ ಆಗಬೇಕು ಎಂದರು.

ಇದೇ ಸಂದರ್ಭದಲ್ಲಿ ಕೆ.ಎ.ಎಸ್ ಆಫೀಸರ್ ಮಂಜಪ್ಪ, ನಿರ್ಮಾಪಕ ಉದಯ ಮೆಹ್ತಾ, ಜಿಮ್ ರವಿ, ನವರಸನ್ ಸೇರಿದಂತೆ ಹಲವು ಗಣ್ಯರು ಚಂದ್ರುಗೆ ಶುಭ ಹಾರೈಸಿದರು.

ಸಿನಿಪದಬಂಧ-614



ಉಮ್ಮತ್ತೂರು ಇಂದುಶೇಖರ್
ಮೊ.9880820462

	1	2			3	4		5		6
7				8						
9						10				
11				12		13				14
15						16		17		
		18								
19							20			

ಹೆಸರು ________

ವಿಳಾಸ ________

____

ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1. ಗೋಲ್ಡನ್ ಸ್ಟಾರ್ ಗಣೇಶ್ - ವೇದಿಕಾಳ 'ಮಿಲನ' 3
3. ಜಗ್ಗೇಶ್ ಅಲಂಕರಿಸಿದ ಪ್ರೀತಿಯ ಪೀಠ 6
9. ವಿಷ್ಣುವರ್ಧನ್ ಕಟ್ಟಿದ ಎಳೆಯರ ಗುಂಪು 5
10. ಪಟ್ಟಾಭಿರಾಮ ರೆಡ್ಡಿಯ ಪುಲ ಗಾಳಿ 5
11. ಋಷಿಗಳಲೊಬ್ಬನ ಜೊತೆ ಮೃಗರಾಜ ಬರಲು ಸಿಕ್ಕ ನಟ 5
13. ಬಾಲರಾಜ್‌ನ ಶಿವನ ಭಯಂಕರ ನೃತ್ಯ 5
15. ಎಂದೂ ನಾಶವಾಗದ ರವಿ ಕಾರಂಜಿಯವರ ಚಿತ್ರ 5
16. ಟೈಗರ್ ಪ್ರಭಾಕರ್ ಕಟ್ಟಿದ ನಮ್ಮ ದೇಶ ಶ್ರೇಷ್ಠವಾಗಿದೆ 5
19. ಸುದೀಪ್, ಸಮೀರಾ, ಚಿರಂಜೀವಿ ಸರ್ಜಾ ಅಭಿನಯಕ್ಕೆ ಅಯ್ಯಪ್ಪ ಪಿ. ಶರ್ಮಾ ನಿರ್ದೇಶಕ 6
20. ರಮೇಶ್ ಅರವಿಂದ್ "ಕೊಲೆಗಾರ" 3

ಮೇಲಿನಿಂದ ಕೆಳಕ್ಕೆ

2. ಎಸ್. ಮಹೇಂದರ್ - ಶೃತಿ ಅಭಿನಯದ ಚಿತ್ರ 4
4. ವಿಷ್ಣು ನೇತೃತ್ವದ ವಿಗ್ರಹಚೋರರಿಗೆ ಜೋಸೈಮನ್ ನಿರ್ದೇಶಕ 6
5. ಸಾಹಸ ನಿರ್ದೇಶಕ ಬಾಬುವಿನ ಹೆಸರಿನ ಹಿಂದೆ ಕುದುರೆ ಇದೆ 2
6. ಬೆಣ್ಣೆಯಂತಿರುವ ನಟಿ 4
7. ರವಿಚಂದ್ರನ್ ಶ್ರೇಷ್ಠವಾದ ವ್ಯಕ್ತಿ 5
8. ಗುರುಬ್ರಹ್ಮ ಚಿತ್ರದ ನಾಯಕಿ ಒಳ್ಳೆಯವಳು 3
12. ಸುತ್ತಮುತ್ತಲಿನ ಹಳ್ಳಿಗಳಿಗೆ ಬಿ.ಸಿ. ಪಾಟೀಲ್ ಪ್ರಮುಖ ವ್ಯಕ್ತಿ 6
14. ಋತುವಿನಲ್ಲಿ ಕೆ. ಶಿವರಾಂ ಬರೆದ ಪದ್ಯ 5
15. ರವಿಚಂದ್ರನ್ ಅಭಿನಯದಲ್ಲಿ ಘಟಿಸಲಾಗದ ಚಿತ್ರ 4
16. ಶ್ರೀಮುರಳಿಯ ತೀವ್ರತೆಯ ಅಬ್ಬರ 3
17. ಪುನೀತ್ ಅದೃಷ್ಟಶಾಲಿ 4
18. ಪಂಚಮ _ _ 2

ಸಿನಿ ಪದಬಂಧ 613ರ ಉತ್ತರ

ಕ	ರಿ	ಮ	ಲೆ				ಪ			
ಳ್ಳ		ಜ್ಞ		ಕೋ	ದಂ	ಡ	ರಾ	ಮ		ಜಿ
ರ				ಕಿ			ಜಿ			ಲೇ
ಸಂ	ಶ	ಯ	ಫ	ಲ		ಶ್ವೇ	ತ	ಗು	ಲಾ	ಬಿ
ತೆ		ಕ್ಷ		ವಾ					ಲಿ	
			ವಾ	ಣಿ	ಜ	ಯ	ರಾಂ			
	ದೀ					ಮ		ನಾ		ರಂ
ರೂ	ಪಾ	ಯಿ	ರಾ	ಜ		ಕಿಂ	ದ	ರಿ	ಜೋ	ಗಿ
ಪಿ			ಜ			ಕ				ತ
ಣಿ		ವೀ	ರಾ	ಧಿ	ವೀ	ರ		ಜಾ		ರಂ
			ಣಿ				ರ	ಣ	ರಂ	ಗ

ವಿಜೇತರು: ಶಿವಾಂಬಿಕ ನಾರಾಯಣಮೂರ್ತಿ ಆಚಾರ್, ನಂ.164, 1ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಅರವಿಂದನಗರ, ಮೈಸೂರು-570016

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಸ್ಟಾರ್' ಟ್ರೇಲರ್ ಬಿಡುಗಡೆ





ನೈಜ ಘಟನೆಯೊಂದನ್ನು ಆಧಾರವಾಗಿಟ್ಟು ಕೊಂಡು ವಿಜಯ ಸೂರ್ಯ ಆಕ್ಷನ್ ಕಟ್ ಹೇಳಿರುವ ಚಿತ್ರ ಸ್ಟಾರ್. ಸಾಹಸ ನಿರ್ದೇಶಕ ಪ್ರಕಾಶ್ ಅವರ ಪುತ್ರ ಶರತ್ ಪ್ರಕಾಶ್ ನಾಯಕನಾಗಿ ನಟಿಸಿರುವ ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಲಯನ್ ಕ್ರಿಯೇಶನ್ಸ್ ಅಡಿಯಲ್ಲಿ ಶರತ್ ಪ್ರಕಾಶ್ ಅವರೇ ನಿರ್ಮಿಸಿರುವ ಈ ಚಿತ್ರಕ್ಕೆ 'ಭೂಮಿಗೆ ಹತ್ರ' ಎಂಬ ಅಡಿಬರಹವಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶರತ್ ನಮ್ಮ ತಂದೆ ಅಣ್ಣಾವ್ರ ಕಾಲದಿಂದಲೂ ಚಿತ್ರಗಳಲ್ಲಿ ಫೈಟರ್ ಆಗಿ ಸಾಕಷ್ಟು ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಪ್ಯಾಟೆ ಮಂದಿ ಕಾಡಿಗೆ ಬಂದರು ಶೋನಲ್ಲಿ ವಿಜೇತನಾದ ನಂತರ ಒಂದಷ್ಟು ಅವಕಾಶಗಳು ಬಂದವು. ಸುಮಾರು 25 ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಕ್ಕೆ ಬಣ್ಣ ಹಚ್ಚಿದ್ದರೂ ಒಂದು ಬ್ರೇಕ್ ಸಿಕ್ಕಿಲ್ಲ. ನಿರ್ದೇಶಕರು ಹೇಳಿದ ಒನ್ ಲೈನ್ ನನಗೆ ಇಷ್ಟವಾಯಿತು. ರೌಡಿಸಂ ಅಲ್ಲದೆ ತಂದೆ ಮಗಳ ಬಾಂಧವ್ಯ, ತಾಯಿ ಮಗನ ಸಂಬಂಧ, ಪ್ರೀತಿ ಪ್ರೇಮದಂಥ ಎಲ್ಲಾ ಮನರಂಜನಾತ್ಮಕ ಅಂಶಗಳು ಚಿತ್ರದಲ್ಲಿವೆ ಎಂದು ಹೇಳಿದರು.

ನಿರ್ದೇಶಕ ವಿಜಯ್ ಸೂರ್ಯ ಮಾತನಾಡಿ ಚಿತ್ರದ ಪ್ರತಿ ಸನ್ನಿವೇಶಗಳು ನಮ್ಮ ಸುತ್ತಮುತ್ತ ನಡೆಯುತ್ತಿವೆ ಎನಿಸುತ್ತದೆ. ನಾಯಕನಿಗೆ 'ಸ್ಟಾರ್' ಹೆಸರು ಬರಲು ಕಾರಣವೇನು ಎನ್ನುವುದು ಸಿನಿಮಾ ನೋಡಿದಾಗ ತಿಳಿಯುತ್ತದೆ. ಬೆಂಗಳೂರು, ಸ್ಥಳೀಯ ಸ್ಲಂಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಚಿತ್ರದ ನಾಯಕಿಯಾಗಿ ರಜತ, ರಕ್ಷ ನಟಿಸಿದ್ದಾರೆ. ಮೂರು ಹಾಡುಗಳಿಗೆ ವಿಕಾಸ್ ವಸಿಷ್ಠ ಸಂಗೀತ ಸಂಯೋಜನೆಯಿದೆ.

ಮನು ಕುಲದ ಮೌಲ್ಯ ಸಾರುವ 'ಮರಳಿ ಮನಸಾಗಿದೆ'

ಮನುಕುಲದ ಮೌಲ್ಯಗಳನ್ನು ಸಾರುವ ಕಥಾಹಂದರ ಒಳಗೊಂಡ ಚಿತ್ರ 'ಮರಳಿ ಮನಸಾಗಿದೆ", ಈವಾರ ತೆರೆಕಾಣುತ್ತಿದೆ. ನಾಗರಾಜ್ ಶಂಕರ್ ಅವರ ನಿರ್ದೇಶನವಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು, ಈ ಚಿತ್ರದ ನಾಯಕನಾಗಿ ಅರ್ಜುನ್ ವೇದಾಂತ್, ನಾಯಕಿಯರಾಗಿ ನಿರೀಕ್ಷಾ ಶೆಟ್ಟಿ ಹಾಗೂ ಸ್ಮೃತಿ ವೆಂಕಟೇಶ್ ಅಭಿನಯಿಸಿದ್ದಾರೆ. ವಿನು ಮನಸು ಅವರ ಸಂಗೀತ ಸಂಯೋಜನೆಯ ಹಾಡುಗಳು ಸಂಗೀತಪ್ರಿಯರ ಮನ ಗೆದ್ದಿವೆ.

ನಿರ್ದೇಶಕ ನಾಗರಾಜ್ ಶಂಕರ್ ಮಾತನಾಡುತ್ತ ಯುವಜನತೆಗೆ ಹತ್ತಿರವಾದ ಕಂಟೆಂಟ್ ಈ ಚಿತ್ರದಲ್ಲಿದ್ದು, ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಚಿತ್ರವೂ ಇದಾಗಿದೆ. ಜತೆಗೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಮಹತ್ವದ ವಿಷಯ ಕೂಡ ಚಿತ್ರದಲ್ಲಿದೆ ಎಂದು ಹೇಳಿದರು

ನಿರ್ಮಾಪಕ ಮುದ್ದೇಗೌಡ್ರ ನವೀನ್ ಕುಮಾರ್ ಮಾತನಾಡುತ್ತ ನಾನು ದಾವಣಗೆರೆಯವನು. ದರ್ಶನ್‌ರ ಅಭಿಮಾನಿಯೂ ಹೌದು. ದಾವಣಗೆರೆಯಲ್ಲೇ ಚಿತ್ರೀಕರಣ ಆರಂಭಿಸಿ, ಕರ್ನಾಟಕದ ಬೇರೆ ಬೇರೆ ಲೊಕೇಶನ್‌ಗಳಲ್ಲಿ ಶೂಟಿಂಗ್ ನಡೆಸಿದ್ದೇವೆ. ಚಿತ್ರ ತುಂಬಾ ಚೆನ್ನಾಗಿ ಬಂದಿದೆ ಎಂದು ಹೇಳಿದರು. ನಾಯಕ ಅರ್ಜುನ್ ವೇದಾಂತ್ ಮಾತನಾಡುತ್ತ ನಿರ್ದೇಶಕರು ನನಗೆ ಈ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಮನೋಜ್. ಪರಿಶುದ್ಧ ಮನರಂಜನೆಯ ಚಿತ್ರವಿದು ಎಂದರು.

ಇದೊಂದು ಸಂಗೀತ ಪ್ರಧಾನ ಕಥಾಹಂದರ ಒಳಗೊಂಡ ಚಿತ್ರ, ಸುಂದರ ಹಾಡುಗಳು ಚಿತ್ರದಲ್ಲಿ ಹೈಲೈಟಾಗಿವೆ. ವಿನು ಮನಸು ಅವರು ಕಂಪೋಜ್ ಮಾಡಿರುವ ಮತ್ತೆ ಮತ್ತೆ ಕೇಳಬೇಕೆನಿಸುವ ಹಾಡುಗಳ ಜತೆಗೆ ಯುವಜನತೆಗೆ ಹತ್ತಿರವಾದ ಕಥಾಹಂದರ ಹಾಗೂ ಸಂಬಂಧಗಳ ಮೌಲ್ಯ ತಿಳಿಸುವ ಚಿತ್ರವೂ ಹೌದು.



ಈ ಚಿತ್ರದ ಹಾಡುಗಳು ಈಗಾಗಲೇ ಎ 2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದ್ದಲ್ಲದೆ, ಸಂಗೀತ ಪ್ರಿಯರ ಮನ ಗೆದ್ದು ಚಿತ್ರದ ಬಗ್ಗೆ ಹೆಚ್ಚಿನ ನಿರೀಕ್ಷೆ ಹುಟ್ಟುಹಾಕಿವೆ. 'ಮರಳಿ ಮನಸಾಗಿದೆ' ಚಿತ್ರದ ಉಳಿದ ಪಾತ್ರಗಳಲ್ಲಿ ರಘು ಸೀರುಂಡೆ, ಸಂಗೀತ ನಟಿಸಿದ್ದಾರೆ. ಈ ಚಿತ್ರದ ಛಾಯಾಗ್ರಾಹಕರಾಗಿ ಹಾಲೇಶ್, ಸಂಕಲನಕಾರರಾಗಿ ಹರೀಶ್ ಕೊಮ್ಮೆ ಹಾಗೂ ವಿಜಯ್ ಕುಮಾರ್ ಅವರು ಕಾರ್ಯನಿರ್ವಹಿಸಿದ್ದಾರೆ.

ಕಾರ್ಮಿಕ ವಿರೋಧಿ ಹೊಸ ಕಾರ್ಮಿಕ ಕಾಯ್ದೆಗಳ ರದ್ದಿಗೆ ಆಗ್ರಹಿಸಿ

ತಿ.ನರಸೀಪುರ, ನಂ.ಗೂಡಲ್ಲಿ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ





ತಿ.ನರಸೀಪುರ ಹಾಗೂ ನಂಜನಗೂಡಲ್ಲಿ ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ/ನಂಜನಗೂಡು, ಫೆ12– ಭಾರತ್ ಬಂದ್‌ಗೆ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಹಿನ್ನೆಲೆಯಲ್ಲಿ ಗುರುವಾರ ತಿ.ನರಸೀಪುರ ಹಾಗೂ ನಂಜನಗೂಡಲ್ಲಿ ಕಾರ್ಮಿಕ ವಿರೋಧಿ ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ತಿ.ನರಸೀಪುರ: ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮತ್ತು ತಾಲೂಕು ಅಕ್ಷರ ದಾಸೋಹ ನೌಕರರ ಸಂಘದ ಪದಾಧಿಕಾರಿಗಳು ಅಲ್ಲಿಂದ ಮೆರವಣಿಗೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಭಗವಾನ್ ವೃತ್ತ ಮಾರ್ಗವಾಗಿ ತಾಲೂಕು ಕಚೇರಿಗೆ ತಲುಪಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಡಿವೈಎಫ್‌ಐ ತಾಲೂಕು ಘಟಕದ ಅಧ್ಯಕ್ಷ ಸಿ.ಪುಟ್ಟಮಲ್ಲಯ್ಯ ಮಾತನಾಡಿ, ಕೇಂದ್ರ ಸರ್ಕಾರ ಹಳೇ 29 ಕಾರ್ಮಿಕ ಕಾಯ್ದೆಗಳನ್ನು ರದ್ದುಪಡಿಸಿ 4 ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದ್ದು, ಇದರಲ್ಲಿ ಕಾರ್ಮಿಕರ ವೇತನ, ಕೆಲಸದ ಅವಧಿ, ಪಿಂಚಣಿ, ಉದ್ಯೋಗ ಭದ್ರತೆ ಮತ್ತು ರಜೆ ಸೇರಿದಂತೆ ಉದ್ಯಮದಾರರಿಗೆ ಅನುಕೂಲವಾಗುವಂತೆ ಕಾನೂನು ರೂಪಿಸಲಾಗಿದೆ. ಇದರಿಂದ ಖಾಸಗಿ ವಲಯದಲ್ಲಿ ದುಡಿಯುವ ಕಾರ್ಮಿಕರು ಬೀದಿ ಪಾಲಾಗಲಿದ್ದಾರೆ. ಹಾಗಾಗಿ ಇಂದು ದೇಶದಾದ್ಯಂತ ಮುಷ್ಕರ ನಡೆಸುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಸಂಘಟನೆಯಿಂದ ಪ್ರತಿಭಟನೆ ಆಯೋಜಿಸಿದ್ದೇವೆ. ಕೂಡಲೇ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅವೈಜ್ಞಾನಿಕ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಶಶಿಕುಮಾರ್ ಮಾತನಾಡಿ, ಹಳೇ ಕಾರ್ಮಿಕ ಕಾಯ್ದೆಗಳಲ್ಲಿ 30ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿದ ಕಾರ್ಖಾನೆಗಳನ್ನು ಮುಚ್ಚಬೇಕಾದರೆ ಸರ್ಕಾರದ ಪೂರ್ವಾನುಮತಿ ಕಡ್ಡಾಯವಾಗಿತ್ತು. ಆದರೆ ಹೊಸ ಕಾರ್ಮಿಕ ಸಂಹಿತೆಗಳಲ್ಲಿ ಈ ಮಿತಿಯನ್ನು 300ಕ್ಕೆ ಏರಿಸಲಾಗಿದೆ. ದೇಶದಲ್ಲಿ 300 ಕ್ಕಿಂತ ಕಡಿಮೆ ಕಾರ್ಮಿಕರು ಇರುವ ಕಾರ್ಖಾನೆಗಳು ಶೇ.85% ಇದ್ದು, ಜಾರಿಗೊಂಡಿರುವ ಹೊಸ ಕಾರ್ಮಿಕ ಸಂಹಿತೆಗಳಿಂದ ಕೇಂದ್ರ ಸರ್ಕಾರ ಶೇ.1 ಉದ್ಯಮದಾರರಿಗೋಸ್ಕರ ಶೇ.85 ಕಾರ್ಮಿಕರನ್ನು ಬೀದಿಗೆ ದಬ್ಬಿದೆ. ಇದರಿಂದ ಕಾರ್ಮಿಕರ ಜೀವನ ಅತಂತ್ರವಾಗಿದೆ. ಅಲ್ಲದೆ ಹೊಸ ಕಾರ್ಮಿಕ ಸಂಹಿತೆಗಳಲ್ಲಿ 'ನಿಗದಿತ ಅವಧಿ ಕಾರ್ಮಿಕ ಪದ್ಧತಿ' ಜಾರಿಯಿಂದ ಬಂಡವಾಳಶಾಹಿಗಳು ಕಾರ್ಮಿಕರನ್ನು ತಮಗಿಷ್ಟ ಬಂದ ವೇಳೆಯಲ್ಲಿ ಕಾರ್ಮಿಕರ ನೇಮಕ ಮತ್ತು ಕೆಲಸದಿಂದ ವಜಾ ಮಾಡುವ ಅಧಿಕಾರ ಪಡೆದಿರುವುದರಿಂದ ಕಾರ್ಮಿಕರಿಗೆ ಯಾವುದೇ ಉದ್ಯೋಗ ಭದ್ರತೆ ಇರುವುದಿಲ್ಲ ಹಾಗಾಗಿ ಬಂಡವಾಳಶಾಹಿಗಳ ಪರವಾಗಿರುವ ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದು ಪಡಿಸಬೇಕು ಒತ್ತಾಯಿಸಿದರು. ಇದೇ ವೇಳೆ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಗ್ರಾಪಂ ನೌಕರರ ಸಂಘದ ತಾಲೂಕು ಅಧ್ಯಕ್ಷ ಕೇತುಪುರ ನಾಗರಾಜು, ಗ್ರಾಪಂ ಸ್ವಚ್ಛತಾ ವಾಹಿನಿ ಮುಖಂಡರಾದ ದಿವ್ಯಾ, ಕಟ್ಟಡ ಕಾರ್ಮಿಕ ಸಂಘಟನೆ ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ಸಿ.ಕೃಷ್ಣ, ಶಕುಂತಲಾ, ಡಿವೈಎಫ್‌ಐ ತಾಲೂಕು ಕಾರ್ಯದರ್ಶಿ ಸಿ.ಬಿ.ನವೀನ್ ಕುಮಾರ್, ಸಿ.ಬಿ.ಮಲ್ಲೇಶ, ಎಂ.ಶಿವಲಿಂಗಶೆಟ್ಟಿ, ಪ್ರೀಮಿಯರ್ ಕಂಪನಿ ಮುಖಂಡ ಗೋವಿಂದ, ಜಯರಾಮ್, ಜಿ.ಆರ್.ಮಹೇಶ್, ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಉಮಾ, ಪದಾಧಿಕಾರಿಗಳಾದ ಸಾವಿತ್ರಮ್ಮ, ಗೌರಮ್ಮ, ಭಾರತಿ, ಪದ್ಮ, ರುಕ್ಮಿಣಿ, ನಾಗಮ್ಮ, ಲಕ್ಷ್ಮಿ, ಸುಭದ್ರ, ಪ್ರೇಮ, ಸರಿತ, ಯಶೋಧ ಹಾಗೂ ಇನ್ನಿತರರು ಭಾಗವಹಿಸಿದ್ದರು.

ನಂಜನಗೂಡು: ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಸಿಐಟಿಯು ನೇತೃತ್ವದಲ್ಲಿ ಜಮಾಯಿಸಿದ ಕಾರ್ಮಿಕ ಸಂಘಟನೆ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಸಿಐಟಿಯು ಜಿಲ್ಲಾ ಕಾರ್ಯಾಧ್ಯಕ್ಷ ಜಗದೀಶ್ ಮಾತನಾಡಿ, ನರೇಗಾ ಯೋಜನೆಯಿಂದ ಜನಸಾಮಾನ್ಯರಿಗೆ ಅನುಕೂಲವಾಗಿತ್ತು. ಆದರೆ ಇದೀಗ ಆ ಯೋಜನೆ ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸುವ ಮೂಲಕ ಕೇಂದ್ರ ಗಾಂಧೀಜಿ ಅವರ ಹೆಸರು ಕೈಬಿಟ್ಟಿದೆ. ಜನಪರ ಕಾಯ್ದೆಗಳನ್ನು ಬದಲಾಯಿಸುತ್ತಾ ಬಂಡವಾಳಶಾಹಿಗಳ ಪರ ಕಾಯ್ದೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು. ಕಾರ್ಮಿಕ ಸಮಿತಿಗಳನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು. ಅಲ್ಲದೇ ಅಧಿವೇಶನದಲ್ಲಿ ಚರ್ಚಿಸಿ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಂಬಳ ಹೆಚ್ಚು ಮಾಡಬೇಕು. ದುಡಿಯುವ ಮಹಿಳೆಯರ ಕೆಲಸ ಖಾಯಂ ಮಾಡಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಸುನಂದ ಮಾತನಾಡಿದರು. ಇದೇ ವೇಳೆ ಪ್ರತಿಭಟನಾಕಾರರು ಹುಲ್ಲಹಳ್ಳಿ ವೃತ್ತದಲ್ಲಿ ಕೇಂದ್ರ ಬಜೆಟ್ ಪ್ರತಿ ಸುಟ್ಟು ಹಾಕಿ, ಮಾನವ ಸರಪಳಿ ರಚಿಸಿ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಪ್ರತಿಭಟನೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಾದ ಚಂದ್ರಿಕಾ, ಲೀಲಾವತಿ, ಮಂಜುಳ, ಭಾಗ್ಯ, ಮಹದೇವಮ್ಮ, ಸುನೀತ, ಮಂಗಳಮ್ಮ ಉಪಸ್ಥಿತರಿದ್ದರು.

ಹುಣಸೂರಲ್ಲೂ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ



ಹುಣಸೂರಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಹುಣಸೂರು, ಫೆ.12–ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಾರ್ಮಿಕ ಸಂಘಗಳ ಜಂಟಿ ಸಮಿತಿ ಕರೆ ನೀಡಿದ್ದ ದೇಶವ್ಯಾಪ್ತಿ ಸಾರ್ವತ್ರಿಕ ಮುಷ್ಕರದ ಅಂಗವಾಗಿ ಪಟ್ಟಣದಲ್ಲಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಪಟ್ಟಣದ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಸಿಐಟಿಯು ಸಂಯೋಜಿತ ಕಾರ್ಮಿಕರು ಹಾಗೂ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಕೇಂದ್ರ, ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋಧಿ ಮಸೂದೆಗಳು ವಾಪಸ್ಸಾಗಲಿ, ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಯಾಗಲಿ. ದುಡಿಯುವ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡಬೇಕು. ರೈತ ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಮತ್ತು ಕಾರ್ಮಿಕ ವಿರೋಧಿ ಮಸೂದೆಗಳನ್ನು ಜಾರಿಗೊಳಿಸುವ ಮೂಲಕ ಮತ್ತೆ ಗುಲಾಮಗಿರಿ ಪದ್ಧತಿ ಜಾರಿಗೆ ತರಲು ಹುನ್ನಾರ ನಡೆಸುತ್ತಿವೆ. ಅಧಿಕಾರಕ್ಕೆ ಬರುವ ಮುನ್ನಾ ರೈತಪರ ಇರುತ್ತೇವೆ ಎಂದು ಹೇಳಿದ್ದ ಕೇಂದ್ರ ಸರ್ಕಾರ ಬಳಿಕ ರೈತ ವಿರೋಧಿ ಮಸೂದೆಗಳನ್ನು ಜಾರಿ ಮಾಡುತ್ತಿದೆ. ರೈತರ ಭೂಮಿಗಳನ್ನು ಬಂಡವಾಳಶಾಹಿಗಳಿಗೆ ಕೊಡಲು ಮುಂದಾಗುತ್ತಿದೆ. ಆ ಮೂಲಕ ಕಾರ್ಮಿಕರಿಗೆ ಅನ್ಯಾಯ ಮಾಡಲು ಹೊರಟಿದೆ ಇಂತಹ ನೀತಿಗಳ ವಿರುದ್ಧ ಹೋರಾಟ ಅವಶ್ಯಕ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ವರಿ, ಸಿಐಟಿಯು ತಾಲೂಕು ಸಂಚಾಲಕ ಬಸವರಾಜು ಮಾತನಾಡಿದರು. ಈ ವೇಳೆ ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣಗೌಡ, ತಾಲೂಕು ಅಧ್ಯಕ್ಷ ಎಂ.ಸಿ.ಚಂದ್ರಶೇಖರ್, ಅಕ್ಷರ ದಾಸೋಹ ನೌಕರರ ಸಂಘ ತಾಲೂಕು ಅಧ್ಯಕ್ಷೆ ಮಂಜುಳ, ರಾಜಮ್ಮ, ಶೋಭ, ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಬೀರೇಶ್ವರ, ಪುಟ್ಟರಾಜು, ಅಕ್ಷರ ದಾಸೋಹ ನೌಕರರ ಸಂಘದ ಕಾರ್ಯದರ್ಶಿ ಹೇಮಾ, ಖಜಾಂಚಿ ಶಿವಮ್ಮ, ಮುಖಂಡರಾದ ನಳಿನ, ನವೀನಮ್ಮ, ಮೀನಾ, ಗಿರಿಜಾ ಇನ್ನಿತರರಿದ್ದರು.

ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರಿಗೆ ಸನ್ಮಾನ



ಶಾಸಕ ಎಂ.ಅಶ್ವಿನ್ ಕುಮಾರ್ ಅವರನ್ನು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಸನ್ಮಾನಿಸಿದರು.

ತಿ.ನರಸೀಪುರ ಫೆ12– ಜೆಡಿಎಸ್ ಪಕ್ಷದ ನೂತನ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಬಳಿಕ ವಿವಿಧ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪಟ್ಟಣಕ್ಕೆ ಆಗಮಿಸಿದ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಅವರನ್ನು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಸನ್ಮಾನಿಸಿದರು.

ಕನ್ವಿತ ಡೆವಲಪರ್ಸ್ ಮಾಲೀಕ ರಂಗರಾಜಪುರ ಎಂ.ಸಿದ್ದರಾಜು ಮಾತನಾಡಿ, ಸರಳ, ಸಜ್ಜನಿಕೆ ವ್ಯಕ್ತಿತ್ವದ ಮೂಲಕ ಸಾಮಾನ್ಯ ಜನರ ಕೈಗೆ ಸಿಗುವ ಶಾಸಕರಾಗಿದ್ದ ಎಂ.ಅಶ್ವಿನ್ ಕುಮಾರ್ ಅವರು ಪಕ್ಷದ ಜಿಲ್ಲಾಧ್ಯಕ್ಷರಾಗಿರುವುದು ಹೆಮ್ಮೆಯ ವಿಷಯ. ಹೀಗಾಗಿ ಕ್ಷೇತ್ರದ ಕಾರ್ಯಕರ್ತರು ಹಾಗೂ ಮುಖಂಡರು ಮುಂದಿನ ದಿನಗಳಲ್ಲಿ ಅಭಿನಂದನಾ ಕಾರ್ಯಕ್ರಮ ಆಯೋಜಿಸಿ ಅವರನ್ನು ಅದ್ಧೂರಿಯಾಗಿ ಸನ್ಮಾನಿಸಲಾಗುವುದು ಎಂದರು.

ಈ ವೇಳೆ ಜೆಡಿಎಸ್ ಮುಖಂಡರಾದ ಸ್ಫೂರ್ತಿ ಡೆವಲಪರ್ಸ್ ಮಾಲೀಕ ಎಂ.ಪಿ.ಮಧು, ಗಗನ್ ಉಪಸ್ಥಿತರಿದ್ದರು.

ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆ

ಬಸಂತ್ ಅಧ್ಯಕ್ಷ, ಎಸ್.ಮಹದೇವಯ್ಯ ಉಪಾಧ್ಯಕ್ಷರಾಗಿ ಆಯ್ಕೆ



ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ನಿರ್ದೇಶಕರು ಹಾಗೂ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರು ಅಭಿನಂದಿಸಿದರು.

ಕೆ.ಆರ್.ನಗರ, ಫೆ.12– ಪಟ್ಟಣದ ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಕೆ.ಎನ್.ಬಸಂತ್ ಹಾಗೂ ಉಪಾಧ್ಯಕ್ಷರಾಗಿ ಎಸ್.ಮಹ ದೇವಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಳೆದ ಜ.31ರಂದು ಬ್ಯಾಂಕ್‌ನ 13 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು. ಪಟ್ಟಣದ ಬ್ಯಾಂಕ್ ಆವರಣದಲ್ಲಿ 2026–31ನೇ ಸಾಲಿಗೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಎನ್.ಬಸಂತ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಎಸ್.ಮಹದೇವಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮೈಸೂರಿನ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಚೇರಿಯ ಎಂ.ಎನ್.ಸೋಮಶೇಖರ್ ಪ್ರಕಟಿಸಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಹೆಚ್.ಎಸ್.ಲೋಕೇಶ್, ಕೆ.ಎನ್.ರಮೇಶ್ ರಾವ್ ಕದಂ, ಅಶೋಕ ಕುಮಾರ್, ಸಿ.ಪಿ.ಎಸ್.ಲೋಕೇಶ್, ಹೆಚ್.ಟಿ.ಗೋಪಾಲೇಗೌಡ, ಜೆ.ವೆಂಕಟೇಶ್, ಡಾ.ಎಂ.ಪಿ.ಸುಮತಿ, ವೀಣಾ ಕುಮಾರ್, ಮರಿಲಿಂಗಾಚಾರ್, ಚೇತನ, ಎಲ್.ರಂಗನಾಥ್, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಸಿ.ಸುರೇಶ್, ವ್ಯವಸ್ಥಾಪಕ ಎಂ.ಪಿ.ಸುಹಾಸ್‌ಗೌಡ ಇದ್ದರು.

ಬ್ಯಾಂಕ್ ನೂತನ ಅಧ್ಯಕ್ಷ ಕೆ.ಎನ್.ಬಸಂತ್ ಮಾತನಾಡಿ, ನಮ್ಮ ಬ್ಯಾಂಕ್ ಅನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಮೂಲಕ ಪ್ರಸ್ತುತ ಇರುವ 820 ಕೋಟಿ ವ್ಯವಹಾರವನ್ನು 1 ಸಾವಿರ ಕೋಟಿಗೆ ಬೆಳೆಸಲು ಶ್ರಮಿಸುತ್ತೇನೆ. ಸಂಪೂರ್ಣ ಸಾಲ ವಸೂಲಾತಿ ಮಾಡುವ ಮೂಲಕ ಆಡಳಿತ ಮಂಡಳಿ ಮತ್ತು ಸರ್ವ ಸದಸ್ಯರು ನನ್ನ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಬ್ಯಾಂಕ್ ಶಾಖೆಯನ್ನು ಜಿಲ್ಲೆಯ ಬೇರೆ ತಾಲೂಕುಗಳಿಗೂ ವಿಸ್ತರಿಸುವ ಗುರಿ ಹೊಂದಲಾಗಿದೆ. ಅಲ್ಲದೆ ಎಟಿಎಂಗಳನ್ನು ಹೆಚ್ಚಿಸುವುದು. ಸ್ವಂತ ಆ್ಯಪ್ ಅಭಿವೃದ್ಧಿ ಪಡಿಸಿ ಬ್ಯಾಂಕ್ ಅನ್ನು ಗ್ರಾಹಕ ಸ್ನೇಹಿಯಾಗಿಸುವುದು. ಸಣ್ಣಪುಟ್ಟ ವ್ಯಾಪಾರಿಗಳು, ಸಣ್ಣ ಉದ್ಯಮಿಗಳಿಗೆ ಸಾಲ ಸೌಲಭ್ಯಗಳನ್ನು ನೀಡಿ ಆರ್ಥಿಕಾಭಿವೃದ್ಧಿಗೆ ಶ್ರಮಿಸುವ ಮೂಲಕ ಬ್ಯಾಂಕ್‌ನ ಧ್ಯೇಯೋದ್ದೇಶಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿಗಳು, ಸ್ನೇಹಿತರು ಹಾಗೂ ಅಭಿಮಾನಿಗಳು ಅಭಿನಂದಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡ ಮಹೇಶ್, ಕಸಾಪ ತಾಲೂಕು ಅಧ್ಯಕ್ಷ ಡಿಂಡಿಮ ಶಂಕರ್, ಪುರಸಭಾ ಮಾಜಿ ಅಧ್ಯಕ್ಷರಾದ ತಮ್ಮನಾಯಕ, ಸುಬ್ರಹ್ಮಣ್ಯ, ಮಾಜಿ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಕೆ.ಎಲ್.ಜಗದೀಶ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಆಲ್ಪಾ ಕಾಲೇಜು ಕಾರ್ಯದರ್ಶಿ ವೈ.ಎಸ್.ಸುಬ್ರಮಣ್ಯ, ಮುಖಂಡರಾದ ನಾರಾಯಣ್, ಜಯಂತ್, ಕೇಶವ್, ಮಹದೇವ್, ಕೇಬಲ್ ಮಂಜು, ಚಂದ್ರಶೇಖರ್ ಸೇರಿದಂತೆ ಇನ್ನಿತರರಿದ್ದರು.

ಬೆಟ್ಟದಪುರದಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ

ಬೆಟ್ಟದಪುರ, ಫೆ.12– ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನದ ಅಂಗವಾಗಿ ಗ್ರಾಮದ ಪ್ರಥಮ ದರ್ಜೆ ಕಾಲೇಜಿನಲ್ಲಿ ರೆಡ್‌ಕ್ರಾಸ್ ಸಮಿತಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಟ್ಟದಪುರ ಇವರ ಸಹಯೋಗದಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಯಿತು.

ಆರೋಗ್ಯ ಸಹಾಯಕಿ ದೇವಕಿ ಜಂತು ಹುಳುಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು. ಆರೋಗ್ಯ ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಆರೋಗ್ಯಕರ ವ್ಯಕ್ತಿಗಳು ದೇಶ ಮತ್ತು ಸಮಾಜದ ಆಸ್ತಿಯಾಗುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ದೇವಕಿ, ಪ್ರಾಂಶುಪಾಲ ಭರತ್ ರಾಜ್ ಅರಸ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ರಘುವೀರ್ ಹಾಗೂ ರೆಡ್‌ಕ್ರಾಸ್ ಸಮಿತಿ ಸಂಯೋಜಕಿ ಕಾವ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚುಂಚನಕಟ್ಟೆ ಶ್ರೀರಾಮನ ಹುಂಡಿಯಲ್ಲಿ 5.68 ಲಕ್ಷ ಸಂಗ್ರಹ



ಚುಂಚನಕಟ್ಟೆ, ಫೆ.12– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯದ ಹುಂಡಿಯಲ್ಲಿ 5.68 ಲಕ್ಷ ರೂ. ಸಂಗ್ರಹವಾಗಿದೆ.

ಗುರುವಾರ ಸಾಲಿಗ್ರಾಮ ತಹಸೀಲ್ದಾರ್ ರುಕೀಯಾ ಬೇಗಂ, ಚುಂಚನಕಟ್ಟೆ ನಾಡ ಕಚೇರಿಯ ಉಪ ತಹಸೀಲ್ದಾರ್ ಮಹೇಶ್ ಅವರ ನೇತೃತ್ವದಲ್ಲಿ ಶ್ರೀರಾಮ ದೇವಾಲಯದ ಹುಂಡಿವನ್ನು ತೆರೆದು ಹಣ ಎಣಿಸಲಾಯಿತು.

ಈ ವೇಳೆ ಯಾವುದೇ ಬೆಳ್ಳಿ–ಚಿನ್ನಾಭರಣ ಸಂಗ್ರಹವಾಗಿಲ್ಲ. ಸಂಗ್ರಹವಾದ ಕಾಣಿಕೆ ಹಣವನ್ನು ಹಳಿಯೂರು ಎಸ್‌ಬಿಐ ಶಾಖೆಯ ಕ್ಯಾಷಿಯರ್ ಸುರೇಶ್, ಸಿಬ್ಬಂದಿಗಳಾದ ಮಲ್ಲಿಕಾ, ಚೈತನ್ಯ ಅವರ ಸಮ್ಮುಖದಲ್ಲಿ ದೇವಾಲಯದ ಖಾತೆಗೆ ಜಮಾ ಮಾಡಲಾಯಿತು.

ಈ ವೇಳೆ ರಾಜಸ್ವ ನಿರೀಕ್ಷಕ ಚಿದಾನಂದ ಬಾಬು, ಗ್ರಾಮ ಅಧಿಕಾರಿಗಳಾದ ಮೇಘ, ಸುನೀಲ್, ಕಾವೇರಿ, ಪ್ರಿಯ, ಪಾರು ಪತ್ತೇದಾರ್ ವಿನಯ್, ಮುಜರಾಯಿ ಇಲಾಖೆಯ ನವ್ಯ, ಸಹಾಯಕರಾದ ವಸಂತ್ ಕುಮಾರ್, ತೇಜಸ್ ಮೂರ್ತಿ, ರವಿಂದ್ರ ನಾಥ್, ಕೃಷ್ಣಮೂರ್ತಿ, ಮಹೇಶ್, ಸುಮಿತ್ರ, ನಾಡಕಚೇರಿಯ ಕೆಸ್ತೂರು ವಿಜಿ ಇದ್ದರು.

ಮುನ್ನೆಚ್ಚರಿಕೆ ಕ್ರಮವಾಗಿ ಚುಂಚನಕಟ್ಟೆ ಉಪ ಪೊಲೀಸ್ ಠಾಣೆಯ ಉಪ ಠಾಣಾಧಿಕಾರಿ ದೊರೆಸ್ವಾಮಿ ನೇತೃತ್ವದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ವಿದ್ಯಾರ್ಥಿನಿಗೆ ಬಹುಮಾನ ವಿತರಣೆ



ತಿ.ನರಸೀಪುರದ ಲಿಟಲ್ ಫ್ಲವರ್ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತಳಾದ ವಿದ್ಯಾರ್ಥಿನಿ ಜಿ.ವೈ.ನಿಧಿ ಅವರಿಗೆ ಶಾಲೆಯ ಹೆಚ್.ಎಂ.ಸಿಸ್ಟರ್ ಅರ್ಚನಾ ಬಹುಮಾನ ವಿತರಿಸಿದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ 19 ಕರುಗಳ ರಕ್ಷಣೆ

ಗೂಡ್ಸ್ ವಾಹನ ವಶ, ಓರ್ವ ಆರೋಪಿ ಬಂಧನ



ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ ಕರುಗಳನ್ನು ಪೊಲೀಸರು ರಕ್ಷಿಸಿರುವುದು.

ಹುಣಸೂರು, ಫೆ.12– ಟಾಟಾ ಏಸ್ ಮಿನಿ ಗೂಡ್ಸ್ ವಾಹನದಲ್ಲಿ ಕಸಾಯಿ ಖಾನೆಗೆ ಅಕ್ರಮವಾಗಿ ಕರುಗಳನ್ನು ಸಾಗಿಸುತ್ತಿರುವುದನ್ನು ಪತ್ತೆ ಹಚ್ಚಿದ ಡಿವೈಎಸ್‌ಪಿ ರವಿ ನೇತೃತ್ವದ ಪೊಲೀಸರ ತಂಡ ವಾಹನ ಸಮೇತ 19 ಕರುಗಳನ್ನು ವಶಕ್ಕೆ ಪಡೆದು ಓರ್ವ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹುಣಸೂರಿನ ಶಬ್ಬೀರ್ ನಗರದ ಅಫ್ರಿದ್ ಶರೀಫ್ ಬಂಧಿತ ಆರೋಪಿ.

ವಿವರ: ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಿಂದ ಹಿರಿಕ್ಯಾತನಹಳ್ಳಿ–ಕಟ್ಟೆಮಳಲವಾಡಿ, ಹುಣಸೂರು ಮಾರ್ಗವಾಗಿ ಕೇರಳಕ್ಕೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಬುಧವಾರ ಮುಂಜಾನೆ ಡಿವೈಎಸ್‌ಪಿ ರವಿ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಎಸ್‌ಐ ರಾಧ ಮತ್ತವರ ತಂಡ ಕಟ್ಟೆಮಳಲವಾಡಿ ಸೇತುವೆ ಬಳಿ ವಾಹನ ತಪಾಸಣೆ ನಡೆಸಿದ ವೇಳೆ 19 ಕರುಗಳನ್ನು ತುಂಬಿರುವುದನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದು ಚಾಲಕ ಕಂ ಮಾಲೀಕ ಅಫ್ರಿದ್ ಶರೀಫ್‌ನನ್ನು ವಿಚಾರಣೆಗೊಳಪಡಿಸಿದ ವೇಳೆ ಆತ ಸತ್ಯಾಂಶ ಒಪ್ಪಿಕೊಂಡ ಮೇರೆಗೆ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ.

ಇದೇ ವೇಳೆ ಕೆಲ ಮಿನಿ ಗೂಡ್ಸ್ ವಾಹನಗಳಲ್ಲಿ ಜಾನುವಾರುಗಳನ್ನು ಸಾಗಿಸುತ್ತಿರುವುದನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡರೂ, ಅವು ರೈತರಿಗೆ ಸೇರಿರುವ ಬಗ್ಗೆ ದಾಖಲಾತಿ ಪಡೆದು ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 19 ಕರುಗಳನ್ನು ಪಿಂಜಾರಾಪೋಲ್‌ಗೆ ಕಳುಹಿಸಲಾಗಿದೆ.

ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ

ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಅದ್ಧೂರಿ ಆಚರಣೆ



ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಕೇಕ್ ಕತ್ತರಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.





ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬದ ಅಂಗವಾಗಿ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ, ಫೆ.12– ಪಟ್ಟಣದಲ್ಲಿ ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಶಾಸಕ ಅನಿಲ್ ಚಿಕ್ಕಮಾದು ಅವರ 37ನೇ ವರ್ಷದ ಹುಟ್ಟುಹಬ್ಬವನ್ನು ಗುರುವಾರ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅಭಿಮಾನಿಗಳು ಅದ್ಧೂರಿಯಾಗಿ ಆಚರಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಅವರ ಅನುಪಸ್ಥಿತಿಯಲ್ಲಿ ಹುಟ್ಟುಹಬ್ಬ ಆಚರಿಸಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶಾಸಕರಿಗೆ ದೇವರು ಆಯಸ್ಸು, ಆರೋಗ್ಯ, ಅಧಿಕಾರ ಕರುಣಿಸಲಿ. ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಶ್ರಮಿಸುವಂತಾಗಲಿ ಎಂದು ಪ್ರಾರ್ಥಿಸಿ ಪಟ್ಟಣದ ಪ್ರಸಿದ್ಧ ಶ್ರೀವರದರಾಜಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲದೇ ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ಪ್ರಸಾದ ವಿತರಿಸಿದರು.

ಬಳಿಕ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು ಜಮಾಯಿಸಿದ ಮುಖಂಡರು ಶಾಸಕ ಅನಿಲ್ ಚಿಕ್ಕಮಾದು ಅವರ ಬೃಹತ್ ಕಟೌಟ್ ಎದುರು ಕೇಕ್ ಕತ್ತರಿಸಿದರು. ನಂತರ ಸಾರ್ವಜನಿಕರಿಗೆ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಸಿದರು. ಬೆಳಗಿನ ಉಪಹಾರ ವಿತರಿಸಿದರು.

ನಂತರ ಹೆಚ್.ಡಿ.ಕೋಟೆ ಹಾಗೂ ಸರಗೂರು ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಅಲ್ಲದೇ ಕೋಟೆಯ ಸರ್ಕಾರಿ ಶಾಲೆಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸಿದರು.

ಇದೇ ವೇಳೆ ಸರಗೂರಿನಲ್ಲೂ 'ಕೈ' ಮುಖಂಡರು ಹಾಗೂ ಕಾರ್ಯಕರ್ತರು ಕೇಕ್ ಕತ್ತರಿಸುವ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಅವರ ಹುಟ್ಟುಹಬ್ಬ ಆಚರಿಸಿದರು. ಉಳಿದಂತೆ ಶಾಸಕರ ತಾಯಿ ನಾಗಮ್ಮ ಅವರು ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷಾ, ಮಾದಪ್ಪ, ಮುಖಂಡರಾದ ನಾಗನಹಳ್ಳಿ ಪ್ರದೀಪ, ಹಿರೇಹಳ್ಳಿ ಸೋಮೇಶ್, ಮೈಮುಲ್ ಅಧ್ಯಕ್ಷ ಈರೇಗೌಡ, ಹೆಚ್.ಸಿ.ಮಂಜುನಾಥ್, ಭಾಗ್ಯಲಕ್ಷ್ಮಿ, ನರಸೀಪುರ ರವಿ, ಶಿವಪ್ಪ ಕೋಟೆ, ಪರಶಿವಮೂರ್ತಿ, ಶಿವಮಲ್ಲಪ್ಪ, ಜಿನ್ನಹಳ್ಳಿ ರಾಜನಾಯಕ, ಹೊಂಡಾ ನಯಾಜ್, ಗಣೇಶಾಚಾರ್, ಕುಲುಮೆ ರಾಜು, ಕ್ಯಾತನಹಳ್ಳಿ ನಾಗರಾಜು, ಶಂಭುಲಿಂಗನಾಯಕ, ಬಿ.ಸಿ.ಬಸಪ್ಪ, ಮೊಳೆಯೂರು ಆನಂದ, ಬೈಪಾಸ್ ಮಂಜು, ಬಿ.ವಿ.ಬಸವರಾಜ್, ಹೀರೋ ಜಯರಾಮ್, ಬೊಪ್ಪನಹಳ್ಳಿ ಭಾಸ್ಕರ, ವಡ್ಡರಗುಡಿ ರವಿ, ನರಸಿಂಹಮೂರ್ತಿ, ಮಧು ಕುಮಾರ್, ಅನಿಲ್, ಸುಬ್ರಹ್ಮಣ್ಯ, ಕಂದೇಗಾಲ ಶಿವರಾಜ್, ಕೆಂಡಗಣ್ಣೇಗೌಡ, ತಿಮ್ಮರಾಜ್, ನಾಗರಾಜು, ಪುಟ್ಟಸ್ವಾಮಿ, ಬಾಲಯ್ಯ, ಗುರುಸ್ವಾಮಿ, ಸ್ಟುಡಿಯೋ ಪ್ರಕಾಶ್, ಮುರಳಿ, ನವೀನ್ ದಾಸ್, ಬಿರ್ವಾಳ್ ಚಿಕ್ಕಣ್ಣ, ಸೌಮ್ಯ ಮಂಜುನಾಥ್, ಅಶೋಕ, ಅಜರ್, ಶಶಿ, ಪಾಟೀಲ್, ಸಿದ್ದರಾಮ, ಕಬಿನಿ ಹೇಮಂತ, ವನಸಿರಿ ಉಮೇಶ, ಶಂಕರ, ಮಲ್ಲೇಶ್, ವೆಂಕಿ, ನೆನಪು ರವಿ ಇತರರಿದ್ದರು.

ನನ್ನ ಹುಟ್ಟುಹಬ್ಬವನ್ನು ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸರ್ಕಾರಿ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿಗಳನ್ನು ವಿತರಿಸಿ ಹಾಗೂ ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಸರಳವಾಗಿ ಆಚರಿಸಿರುವ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳಿಗೆ ನನ್ನ ಧನ್ಯವಾದಗಳು.

– ಅನಿಲ್ ಚಿಕ್ಕಮಾದು, ಶಾಸಕ.

ಮೈಸೂರಲ್ಲಿ ಪ್ರತಿಭಟನೆಗೆ ಸೀಮಿತಗೊಂಡ ಭಾರತ್ ಬಂದ್

ಕಾರ್ಮಿಕ ವಿರೋಧಿ ನೀತಿಗಳ ಕೈ ಬಿಡಲು ಜನಸಾಮಾನ್ಯರು, ರೈತರ ಆಗ್ರಹ

ಮೈಸೂರು, ಫೆ.12(ಎಂಕೆ)– ಕೇಂದ್ರ ಸರ್ಕಾರದ ಕಾರ್ಮಿಕ, ಕೃಷಿ ಮತ್ತು ಆರ್ಥಿಕ ನೀತಿಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಬೆಂಬಲದೊಂದಿಗೆ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್ ಹಿನ್ನೆಲೆಯಲ್ಲಿ ಸಂಯುಕ್ತ ಹೋರಾಟ ಕರ್ನಾಟಕ–ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ವತಿಯಿಂದ ಮೈಸೂರಿನಲ್ಲಿ ಸಾರ್ವತ್ರಿಕ ಮುಷ್ಕರ ಹಾಗೂ ಬೃಹತ್ ಪ್ರತಿಭಟನೆ ರ್‍ಯಾಲಿ ನಡೆಸಲಾಯಿತು.

ಮೈಸೂರಿನ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡ ಸಾವಿರಾರು ಮಂದಿ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಲೇಬರ್ ಕೋಡ್ ರದ್ದುಗೊಳಿಸಬೇಕು. ನರೇಗಾ ಯೋಜನೆ ಪುನರ್ ಸ್ಥಾಪಿಸಿ, ವಿಬಿಜಿ.ರಾಮ್‌ಜಿ ಕಾಯ್ದೆ ರದ್ದುಗೊಳಿಸಬೇಕು. ಭೂ ಸುಧಾರಣಾ ಮತ್ತು ಎಪಿಎಂಸಿ ಜಾನುವಾರು ಸಂರಕ್ಷಣಾ ಕಾಯ್ದೆ ಹಿಂಪಡೆಯಬೇಕು. ಭೂ ಸ್ವಾಧೀನ ಕಾಯ್ದೆ ಹಿಂಪಡೆಯಬೇಕು. ವಿದ್ಯುಚ್ಛಕ್ತಿ ಖಾಸಗೀಕರಣ ಆಗಬಾರದು. ಬೀಜ ಮಸೂದೆ ಕಾಯ್ದೆ ಹಿಂಪಡೆಯಬೇಕು. ವಿಮಾ ತಿದ್ದುಪಡಿ ಕಾಯ್ದೆ ರದ್ದಾಗಬೇಕು. ಕರ್ನಾಟಕ ಸರ್ಕಾರ ಕಾರ್ಮಿಕ ಸಂಹಿತೆಗಳಿಗೆ ಈಗ ತಂದಿರುವ ಗೆಜೆಟ್ ನೋಟಿಫಿಕೇಷನ್‌ನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಗಾಂಧಿ ವೃತ್ತದಿಂದ ಆರಂಭವಾದ ಪ್ರತಿಭಟನಾ ಬೃಹತ್ ರ್‍ಯಾಲಿ ಗಾಡಿ ಚೌಕದ ಮೂಲಕ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಆಯುರ್ವೇದ ಸರ್ಕಲ್‌ನಿಂದ ಇರ್ವಿನ್ ರಸ್ತೆ ಮಾರ್ಗವಾಗಿ ನೆಹರು ಸರ್ಕಲ್‌ನಿಂದ ಅಶೋಕ ರಸ್ತೆ ಮಾರ್ಗವಾಗಿ ದೊಡ್ಡ ಗಡಿಯಾರ ಸುತ್ತುವರಿದು ವಾಪಸ್ ಗಾಂಧಿ ವೃತ್ತದಲ್ಲಿ ಮುಕ್ತಾಯಗೊಂಡಿತು.

ರ್‍ಯಾಲಿಯುದ್ದಕ್ಕೂ ಖಾಯಂ ಉದ್ಯೋಗ–ಖಾತ್ರಿಪಡಿಸಿ, ಉದ್ಯೋಗ ಖಾತ್ರಿ ನಮ್ಮ ಹಕ್ಕು, ಕನಿಷ್ಠ ವೇತನವನ್ನು ನುಂಗಿ ಹಾಕುವ ಲೇಬರ್ ಕೋಡ್ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರಲ್ಲದೆ ನುಡಿದಂತೆ ನಡೆಯುತ್ತೇವೆ ಎಂದು ಹೇಳುವ ರಾಜ್ಯ ಸರ್ಕಾರ ರೈತ ವಿರೋಧಿ ಧೋರಣೆಗಳನ್ನು ಮುಂದುವರೆಸುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ಬಳಿಕ ನಡೆದ ಬಹಿರಂಗ ಸಭೆಯಲ್ಲಿ ಕೇಂದ್ರ ಸರ್ಕಾರ ಕಾರ್ಮಿಕ, ಕೃಷಿ ಮತ್ತು ಆರ್ಥಿಕ ನೀತಿಗಳನ್ನು ರದ್ದುಗೊಳಿಸುವ ವರೆಗೂ ನಿರಂತರವಾಗಿ ಹೋರಾಟ ನಡೆಸುವ ನಿರ್ಣಯ ಕೈಗೊಳ್ಳಲಾಯಿತು. ಕಾರ್ಮಿಕ ಸಂಘಟನೆಯ ದೇವದಾಸ್, ಚಂದ್ರಶೇಖರ್ ಮೇಟಿ, ಶೇಷಾದ್ರಿ, ರೈತ ಮುಖಂಡರಾದ ಹೊಸಕೋಟೆ ಬಸವರಾಜು, ಕೆಂಚಲೂರು ಮರಂಕಯ್ಯ, ದಸಂಸ ಬೆಟ್ಟಯ್ಯ ಕೋಟೆ, ಚೋರನಹಳ್ಳಿ ಶಿವಣ್ಣ, ಶಂಭುಲಿಂಗಸ್ವಾಮಿ, ಮಹಿಳಾ ಮುಖಂಡರಾದ ಮಹಾದೇವಮ್ಮ ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.



ಮೈಸೂರಿನಲ್ಲಿ ಗುರುವಾರ ಕರ್ನಾಟಕ–ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ವತಿಯಿಂದ ಸಾರ್ವತ್ರಿಕ ಮುಷ್ಕರ ಹಾಗೂ ಬೃಹತ್ ಪ್ರತಿಭಟನೆ ರ್‍ಯಾಲಿ ನಡೆಸಲಾಯಿತು.

ಪ್ರತಿಭಟನೆಗೆ ಸೀಮಿತವಾದ ಭಾರತ್ ಬಂದ್...

ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್ ಮೈಸೂರಿನಲ್ಲಿ ಪ್ರತಿಭಟನೆಗಷ್ಟೇ ಸೀಮಿತವಾಗಿತ್ತು. ಎಂದಿನಂತೆ ಅಂಗಡಿ–ಮಳಿಗೆಗಳು, ಹೋಟೆಲ್‌ಗಳು, ಸರ್ಕಾರಿ ಮತ್ತು ಖಾಸಗಿ ಕಚೇರಿಗಳು ತೆರೆದಿದ್ದು, ಸಾರಿಗೆ ವ್ಯವಸ್ಥೆ ಯಥಾಸ್ಥಿತಿಯಲ್ಲಿತ್ತು. ಅಲ್ಲದೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಭದ್ರತೆಯನ್ನು ಒದಗಿಸಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ		(ದೂ: 2521923)
ಕಾ ದಿ ಫಾರೆಸ್ಟ್ (ತ)		4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್		(ದೂ: 2422871)
ರಕ್ಕಸಪುರದೋಳ್ (ಕ)		4 ಪ್ರದರ್ಶನಗಳು
ಬಾಲಾಜಿ		(ದೂ: 2497199)
ಓ ರೋಮಿಯೋ (ಹಿ)		3 ಪ್ರದರ್ಶನಗಳು
ಮಹದೇಶ್ವರ		(ಮೊ:9900820093)
45 ಫೇಸ್ ದಿ ಇಯರ್ (ಕ)		4 ಪ್ರದರ್ಶನಗಳು
ಗಾಯಿತ್ರಿ		
ಲ್ಯಾಂಡ್ ಲಾರ್ಡ್ (ಕ)		4 ಪ್ರದರ್ಶನಗಳು
ರಾಜಕಮಲ್		
ಪೂಕಿ (ತ)		4 ಪ್ರದರ್ಶನಗಳು
ಸಂಗಂ		
ಮೈ ಲಾರ್ಡ್(ತ)		4 ಪ್ರದರ್ಶನಗಳು
ಲಿಡೋ		
ಕರ್ಣ (ಕ) + ಶಿವಲೀಲಾ (ಕ)		3+1 ಪ್ರದರ್ಶನಗಳು
ತಿಬ್ಬಾದೇವಿ		
–		–
ಪ್ರಭಾ		
ಓ ಸುಂದರ ರಾಕ್ಷಸಿ (ಕ) + ದೈವ (ಕ)		2+2 ಪ್ರದರ್ಶನಗಳು

ಮಹಿಳೆ ಕಳೆದುಕೊಂಡಿದ್ದ ಚಿನ್ನದ ಮಾಂಗಲ್ಯ ಸರ ರೈಲು ಬೋಗಿ ಕಮೋಡ್‌ನಲ್ಲಿ ಪತ್ತೆ!



ಮೈಸೂರು, ಫೆ.12 (ಆರ್‌ಕೆ)– ಮಹಿಳಾ ಪ್ರಯಾಣಿಕರೊಬ್ಬರು ಕಳೆದುಕೊಂಡಿದ್ದ ಚಿನ್ನದ ಮಾಂಗಲ್ಯ ಸರ ರೈಲು ಬೋಗಿಯ ಕಮೋಡ್‌ನಲ್ಲಿ ಪತ್ತೆಯಾಗಿದೆ.

ಬೆಂಗಳೂರಿನ ಮಾರತಹಳ್ಳಿಯ ಕಾವೇರಿ ಬಡಾವಣೆ ನಿವಾಸಿ ಕೆ.ಗಣೇಶ್ ರಾಮನ್ ಅವರ ಪತ್ನಿ ಗಾಯಿತ್ರಿ ತಮ್ಮ ಮಂಗಳಸೂತ್ರ ಕಳೆದುಕೊಂಡಿದ್ದರು. ಫೆ.8 ರಂದು ಸಂಜೆ ಪತಿ ಗಣೇಶ್ ರಾಮನ್‌ರೊಂದಿಗೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ನಿಲ್ದಾಣದಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಮೈಸೂರಿಗೆ ಹೊರಟಿದ್ದ ಮಾರ್ಗ ಮಧ್ಯೆ ಗಾಯಿತ್ರಿಯವರು ತಮ್ಮ ಬಳಿ ಇದ್ದ 16 ಗ್ರಾಂ ತೂಗುವ ಮಾಂಗಲ್ಯ ಸರ ಕಳೆದುಕೊಂಡಿದ್ದರು.

ಮೈಸೂರಿಗೆ ತಲುಪಿದಾಗ ಮಾಂಗಲ್ಯ ಸರ ನಾಪತ್ತೆಯಾಗಿರುವುದು ಗಮನಕ್ಕೆ ಬಂದಿತು. ತಕ್ಷಣ ದಂಪತಿ ರೈಲ್ವೆ ರಕ್ಷಣಾ ದಳ (ಆರ್‌ಪಿಎಫ್) ದ ಅಧಿಕಾರಿಗಳಿಗೆ ದೂರು ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಕಾರ್ಯೋನ್ಮುಖರಾದ ಆರ್‌ಪಿಎಫ್ ಇನ್ಸ್‌ಪೆಕ್ಟರ್ ಎಸ್.ಪಿ. ಹರೀಶ್, ಕಾನ್ಸ್‌ಟೇಬಲ್ ಕನ್ಹಯ ಸಿಂಗ್ ಹಾಗೂ ರೈಲ್ವೆ ಮೆಕ್ಯಾನಿಕಲ್ ಸಿಬ್ಬಂದಿ ಶೋಧ ನಡೆಸಿದಾಗ ರೈಲು ಬೋಗಿಯ ಕಮೋಡ್‌ನಲ್ಲಿ 2 ಲಕ್ಷ ರೂ. ಮೌಲ್ಯದ 16 ಗ್ರಾಂ ತೂಗುವ ಚಿನ್ನದ ಮಾಂಗಲ್ಯ ಸರ, ದೇವರ ತಾಳಿ ಪತ್ತೆಯಾಯಿತು. ಇನ್ಸ್ ಪೆಕ್ಟರ್ ಎಸ್.ಪಿ.ಹರೀಶ್, ಮರುದಿನ (ಫೆ9) ಮಾಂಗಲ್ಯ ಸರ ಕಳೆದುಕೊಂಡಿದ್ದ ಗಾಯಿತ್ರಿ ಮತ್ತು ಅವರ ಪತಿಯನ್ನು ಕರೆಸಿಕೊಂಡು ಆಭರಣವನ್ನು ಅವರಿಗೆ ಹಸ್ತಾಂತರಿಸಿದರು.

ಉಚಿತ ಔಷಧಿಗೆ ಆಗ್ರಹಿಸಿ ವಿವಿಧ ಸಂಘಟನೆಗಳಿಂದ ಆರೋಗ್ಯ ಹಕ್ಕಿನ ಜಾಥ



ವಿವಿಧ ಪ್ರಗತಿಪರ ಸಂಘಟನೆಗಳಿಂದ ಆರೋಗ್ಯ ಹಕ್ಕಿನ ಜಾಥಾ ನಡೆಸಲಾಯಿತು.

ಮೈಸೂರು, ಫೆ.12(ಎಂಕೆ)– ನೆರೆ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ರಾಜಸ್ತಾನದ ಮಾದರಿಯಲ್ಲಿ ರಾಜ್ಯದಲ್ಲಿ ಎಲ್ಲರಿಗೂ ಉಚಿತ ಔಷಧಿ ನೀಡುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳಿಂದ ಗುರುವಾರ ಆರೋಗ್ಯದ ಹಕ್ಕಿನ ಜಾಥಾ ನಡೆಸಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಗೋಪಾಲಗೌಡ ಆಸ್ಪತ್ರೆ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ಕಚೇರಿಯವರೆಗೆ ಜಾಥಾ ನಡೆಸಿ ಆರೋಗ್ಯ ಹಕ್ಕಿನ ಕಾಯ್ದೆ ಜಾರಿಗೆ ಬರಲಿ ಎಂದು ಆಗ್ರಹಿಸಿದರಲ್ಲದೆ ಬೀದಿ ನಾಟಕದ ಮೂಲಕ ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಬಡವರಿಗೆ ಆಗುತ್ತಿರುವ ಸಂಕಷ್ಟವನ್ನು ತೆರೆದಿಟ್ಟರು.

ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿಯೊಬ್ಬರಿಗೂ ಗುಣಮಟ್ಟದ ಔಷಧಗಳು ಉಚಿತವಾಗಿ ಲಭ್ಯವಾಗಬೇಕು. ಸರ್ಕಾರಿ ಆಸ್ಪತ್ರೆ ವೈದ್ಯರು ಯಾವುದೇ ಕಾರಣಕ್ಕೂ ಔಷಧಗಳನ್ನು ಹೊರಗಡೆ ಖರೀದಿಸಲು ಚೀಟಿ ಬರೆದುಕೊಡಬಾರದು. ಆರೋಗ್ಯ ರಕ್ಷಣೆಯನ್ನು ಮೂಲಭೂತ ಹಕ್ಕನ್ನಾಗಿ ಮಾಡುವ ಕಾನೂನು ಬೇಕು ಎಂದು ಒತ್ತಾಯಿಸಿದರು.

ಹಾಗೆಯೇ ಈ ಕೂಡಲೇ ಸರ್ಕಾರಿ ಆಸ್ಪತ್ರೆ ಖಾಸಗೀಕರಣ(ಪಿಪಿಪಿ) ಮಾಡುವ ಯೋಜನೆ ಕೈ ಬಿಡಬೇಕು. ಯಾವುದೇ ಕಾರಣಕ್ಕೂ ಸರ್ಕಾರಿ ಆಸ್ಪತ್ರೆಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಬಾರದು. ಇದರ ಬದಲು ಸಾರ್ವಜನಿಕರ ಆರೋಗ್ಯ ವ್ಯವಸ್ಥೆಯನ್ನು ಬಲಗೊಳಿಸಬೇಕು. ಖಾಸಗಿ ವಲಯದಲ್ಲಿ ಆಸ್ಪತ್ರೆಗಳ ಶುಲ್ಕವನ್ನು ನಿಯಂತ್ರಿಸಬೇಕೆಂದು ಹಕ್ಕೊತ್ತಾಯ ಮಂಡಿಸಿದರು.

ಸರ್ವೋದಯ ಕರ್ನಾಟಕ ಪಕ್ಷದ ಉಗ್ರನರಸಿಂಹೇಗೌಡ, ಮೈಸೂರು ಕೊಳಚೆ ನಿವಾಸಿಗಳ ಒಕ್ಕೂಟ ಆರ್. ದಾಸ್, ಪ್ರಧಾನ ಕಾರ್ಯದರ್ಶಿ ಹೆಚ್. ಪ್ರಸಾದ್, ಗೌರವ ಕಾರ್ಯದರ್ಶಿ ಯತಿರಾಜ್, ಧ್ವನಿ ಮಹಿಳಾ ಒಕ್ಕೂಟದ ಅಧ್ಯಕ್ಷ ವಸಂತ, ಗೌರವಾಧ್ಯಕ್ಷೆ ಶೋಭಾ, ಚಂದ್ರಕಲಾ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಅಂತರರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ

● ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ ● ಡಬ್ಬಲ್ ಡೆಕ್ಕರ್ ಸೇರಿ ಮೆಟ್ರೋ ಯೋಜನೆಗೆ ಕೇಂದ್ರ ನಿರಾಕರಣೆ; ಚರ್ಚಿಸುವ ನಿರ್ಧಾರ

ಬೆಂಗಳೂರು, ಫೆ.12(ಕೆಎಂಶಿ)–ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಸಾವಿರ ದಿನ ಪೂರೈಸುತ್ತಿರುವ ಸಂದರ್ಭದಲ್ಲೇ ಬೆಂಗಳೂರಿನಲ್ಲಿ ಎರಡು ದಿನಗಳ ಅಂತರರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ತಿಂಗಳ 13 ಹಾಗೂ 14ರಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಜೆಜೆ ಟಾಟಾ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ಭಾರತದಲ್ಲಿ 6,628 ಅಣೆಕಟ್ಟುಗಳಿದ್ದು, ಕರ್ನಾಟಕದಲ್ಲಿ 231 ಅಣೆಕಟ್ಟುಗಳಿವೆ. ಜಲಾಶಯಗಳ ಸುರಕ್ಷತೆ ಕುರಿತು ದೇಶದೆಲ್ಲೆಡೆ ಚರ್ಚೆಗಳು ನಡೆಯುತ್ತಿವೆ. ಒಂದೂವರೆ ವರ್ಷಗಳ ಹಿಂದೆ ಜೈಪುರದಲ್ಲಿ ಸಮ್ಮೇಳನ ಆಯೋಜಿಸಲಾಗಿತ್ತು. ಈಗಿನ ಸಮಾವೇಶಕ್ಕೆ ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಕೇಂದ್ರ ಜಲಶಕ್ತಿ ಆಯೋಗ ಅನೇಕ ಸಲಹೆ ಮಾರ್ಗದರ್ಶನ ನೀಡಿದೆ.

ಜಲಾಶಯಗಳ ಸುರಕ್ಷತೆ ಸಂಬಂಧ 46 ಸಂಶೋಧನಾ ವರದಿಗಳನ್ನು ಮಂಡಿಸಲಾಗುತ್ತಿದೆ. ಕೇಂದ್ರ ಸಚಿವರಾದ ವಿ.ಸೋಮಣ್ಣ, ರಾಜ್ ಭೂಷಣ್ ಚೌಧರಿ, ರಾಜ್ಯದ ಸಚಿವ ಎನ್.ಎಸ್. ಬೋಸರಾಜು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ವಿಶ್ವದ 10 ದೇಶಗಳ 25 ಅಂತರರಾಷ್ಟ್ರೀಯ ತಜ್ಞರು ಸೇರಿದಂತೆ 400ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ತಾಂತ್ರಿಕ ವಿಚಾರ ಸಂಕಿರಣ, ವಸ್ತುಪ್ರದರ್ಶನ ಇರಲಿವೆ.

ಕರ್ನಾಟಕದ ಹಿತಾಸಕ್ತಿಗೆ ಈ ಅವಕಾಶ ಬಳಸಿಕೊಳ್ಳುತ್ತಿದ್ದೇವೆ. ಅಣೆಕಟ್ಟುಗಳು ನೀರಾವರಿ, ಇಂಧನ ಉತ್ಪಾದನೆ, ಪ್ರವಾಹ ನಿಯಂತ್ರಣ, ನೀರು ಸರಬರಾಜು ಹಾಗೂ ಮಣ್ಣಿನ ಸಂರಕ್ಷಣೆಯ ಸುದೀರ್ಘ ಯೋಜನೆ ಗಮನದಲ್ಲಿಟ್ಟುಕೊಂಡು ಸಮ್ಮೇಳನ ಆಯೋಜಿಸಲಾಗುತ್ತಿದೆ. ಕರ್ನಾಟಕದಲ್ಲಿನ ಶೇಕಡ 75ರಷ್ಟು ಅಣೆಕಟ್ಟೆಗಳು 25 ವರ್ಷಕ್ಕಿಂತ ಹಳೆಯದಾಗಿವೆ. ಇವುಗಳ ಸಂರಕ್ಷಣೆ ವಿಷಯದಲ್ಲಿ ರಾಜಿ ಸಾಧ್ಯವಿಲ್ಲ. 58 ಅಣೆಕಟ್ಟುಗಳ ಸುರಕ್ಷತೆಗೆ 1,500 ಕೋಟಿ ರೂ. ವೆಚ್ಚದಲ್ಲಿ ದುರಸ್ಥಿ ಕಾಮಗಾರಿ ಅಂದಾಜಿಸಲಾಗಿದೆ.

ಜಲಾಶಯಗಳಲ್ಲಿ ಹೈಡ್ರೋ ಪವರ್, ಕುಡಿಯುವ ನೀರಿನ ಯೋಜನೆಗಳು ನಡೆಯುತ್ತಿವೆ. ಅಣೆಕಟ್ಟೆಯ ಸುರಕ್ಷತೆಗೆ ಕಾಳಜಿ ವಹಿಸಬೇಕಿದೆ. ಕೇಂದ್ರ ಸರ್ಕಾರ ವಿಶ್ವ ಬ್ಯಾಂಕ್ ಹಾಗೂ ಎಐಐಬಿ ಬಾಹ್ಯ ಬೆಂಬಲದೊಂದಿಗೆ ಅಣೆಕಟ್ಟೆ ಪುನರ್ವಸತಿ ಮತ್ತು ಸುಧಾರಣಾ ಯೋಜನೆಯ ಎರಡನೇ ಹಂತ ಅನುಷ್ಠಾನಗೊಳಿಸುತ್ತಿದೆ. ತುಂಗಭದ್ರಾ ಅಣೆಕಟ್ಟು ಕ್ರೆಸ್ಟ್‌ಗೇಟ್‌ಗಳ ಬದಲಾವಣೆ ಕಾರ್ಯ ಆರಂಭವಾಗಿದೆ. ರಾಜ್ಯದ ಎಲ್ಲಾ ಅಣೆಕಟ್ಟುಗಳ ಸುರಕ್ಷತೆ ಸಮೀಕ್ಷೆ ನಡೆಸಿದ್ದು, ಆದ್ಯತೆ ಮೇರೆಗೆ ದುರಸ್ಥಿ ಕಾಮಗಾರಿ ಕೈಗೊಂಡಿದ್ದೇವೆ ಎಂದರು.

ಡಬ್ಬಲ್ ಡೆಕ್ಕರ್‌ಗೆ ಕೇಂದ್ರ ನಿರಾಕರಣೆ: ಡಬ್ಬಲ್ ಡೆಕ್ಕರ್ ಸೇರಿದಂತೆ ಮೆಟ್ರೋ ಯೋಜನೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿರುವ ವಿಚಾರ ತಿಳಿದಿಲ್ಲ. ಬೆಂಗಳೂರಿನಲ್ಲಿ ಈಗಾಗಲೇ ನಿರ್ಮಾಣವಾಗಿರುವ ಡಬ್ಬಲ್ ಡೆಕ್ಕರ್ ಮೇಲ್ಸೇತುವೆಯನ್ನು ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ ನೋಡಿದ್ದಾರೆ. ಯೋಜನೆ ವೆಚ್ಚದಲ್ಲಿ ಮೆಟ್ರೊ ಸಂಸ್ಥೆ ಶೇಕಡ 50 ಅನುದಾನ ನೀಡಿದರೆ, ಕರ್ನಾಟಕ ಸರ್ಕಾರ ಶೇಕಡ 50 ಅನುದಾನ ಭರಿಸಲಿದೆ. ರಸ್ತೆ ಅಗಲೀಕರಣ ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಈ ಯೋಜನೆ ಮಾಡಲಾಗುತ್ತಿದೆ.

ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರವೇ ಸೂಚಿಸಿದ್ದು, ತಾಂತ್ರಿಕ ಮರುಪರಿಶೀಲನೆಗೆ ಸಲಹೆ ನೀಡಿರಬಹುದು.

ಡಬ್ಬಲ್ ಡೆಕ್ಕರ್ ಮೆಟ್ರೋ ರೈಲಿಗೆ ಪ್ರಯಾಣಿಕರ ಸಂಖ್ಯೆ ಕಡಿಮೆ ಆಗಲಿದೆ ಎಂಬುದು ಸರಿಯಲ್ಲ. ರಸ್ತೆ ಪ್ರಯಾಣಿಕರೇ ಬೇರೆ, ಮೆಟ್ರೋ ಬಳಸುವ ಪ್ರಯಾಣಿಕರೇ ಬೇರೆ, ಯೋಜನೆಯಲ್ಲಿ ಸಮಸ್ಯೆ ಎದುರಾದರೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚೆ ಮಾಡುತ್ತೇನೆ ಎಂದರು.

ವಿಪಕ್ಷ ನಾಯಕ ರಾಹುಲ್ ಗಾಂಧಿ ಸದಸ್ಯತ್ವ ರದ್ದಿಗೆ ಬಿಜೆಪಿ ನಿಲುವಳಿ ಪ್ರಸ್ತಾವನೆ

ನವದೆಹಲಿ: ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಮುಗಿಬಿದ್ದಿರುವ ಆಡಳಿತರೂಢ ಬಿಜೆಪಿ, ಇದೀಗ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಗೊಳಿಸಲು ನೋಟಿಸ್ ಸಲ್ಲಿಸಿದೆ.

ರಾಹುಲ್ ಗಾಂಧಿ ಅವರ ಸದಸ್ಯತ್ವ ವನ್ನು ರದ್ದುಗೊಳಿಸುವಂತೆ ನಾನು 'ನಿಲುವಳಿ ಪ್ರಸ್ತಾವನೆ' ಸಲ್ಲಿಸಿದ್ದೇನೆಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಗುರುವಾರ ಹೇಳಿದ್ದಾರೆ.

ಭಾರತ–ಅಮೆರಿಕ ವ್ಯಾಪಾರ ಒಪ್ಪಂದ, ಕೇಂದ್ರ ಬಜೆಟ್ ಅನ್ನು ಟೀಕಿಸಿ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಭಾಷಣ ಮಾಡಿದ್ದರು. ಇದಾದ ಒಂದು ದಿನದ ನಂತರ ಈ ಬೆಳವಣಿಗೆ ನಡೆದಿದೆ.

ಸಂಸತ್ ಭವನದ ಸಂಕೀರ್ಣದಲ್ಲಿ ಪಿಟಿಐ ಜತೆ ಮಾತನಾಡಿದ ದುಬೆ, ತಮ್ಮ ನೋಟಿಸ್‌ನಲ್ಲಿ ರಾಹುಲ್ ಗಾಂಧಿಯವರು ಸೊರೊಸ್ ಫೌಂಡೇಶನ್, ಯುಎಸ್‌ಐಡಿ, ಫೋರ್ಡ್ ಫೌಂಡೇಶನ್‌ಗಳೊಂದಿಗೆ ಕೈಜೋಡಿಸಿ ವಿದೇಶಗಳಿಗೆ ಹೇಗೆ ಭೇಟಿ ನೀಡುತ್ತಾರೆ ಮತ್ತು ಭಾರತ ವಿರೋಧಿ ಹೇಳಿಕೆಗಳನ್ನು ಉಲ್ಲೇಖಿಸಿದ್ದೇನೆ. ರಾಹುಲ್ ಗಾಂಧಿ ಅವರ ಸಂಸದೀಯ ಸದಸ್ಯತ್ವವನ್ನು ರದ್ದುಗೊಳಿಸಬೇಕು ಹಾಗೂ ಜೀವಿತಾವಧಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು ಎಂದು ನಾನು ಆಗ್ರಹಿಸಿದ್ದೇನೆ ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿ ಫೋಟೋ ಎಡಿಟ್ ಮಾಡಿ ಅವಹೇಳನ: ಶಾಸಕ ಆರಗ ಜ್ಞಾನೇಂದ್ರ ಪಿಎ ಬಂಧನ

ಶಿವಮೊಗ್ಗ, ಫೆ.12– ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡ ಆರೋಪದಡಿ, ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಅವರ ಆಪ್ತ ಸಹಾಯಕನನ್ನು ಪೊಲೀಸರು ಬಂಧಿಸಿದ್ದಾರೆ.

ಹೊಸನಗರ ತಾಲೂಕಿನ ಮಳಲಿ ಗ್ರಾಮದ ನಿವಾಸಿ ಹಾಗೂ ಶಾಸಕರ ಆಪ್ತ ಸಹಾಯಕ ರಾಜೇಶ್ ಹಿರಿಮನೆ ಬಂಧಿತ ಆರೋಪಿ. ಇಲ್ಲಿನ ಜೆ.ಎಂ.ಎಫ್.ಸಿ ನ್ಯಾಯಾಲಯವು ಆರೋಪಿಗೆ ಫೆ.24 ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶ ಹೊರಡಿಸಿದೆ.

ರಾಜೇಶ್ ಹಿರಿಮನೆ ರಾಹುಲ್ ಗಾಂಧಿ ಅವರ ಮುಖದ ಅರ್ಧ ಭಾಗ ಹಾಗೂ ಪಾಕಿಸ್ತಾನ ಸೇನೆಯ ಸಮವಸ್ತ್ರ ಧರಿಸಿದ ಅಧಿಕಾರಿ 'ಅಸಿಮ್' ಫೋಟೋವನ್ನು ಎಡಿಟ್ ಮಾಡಿ ಒಂದಕ್ಕೊಂದು ಸೇರಿಸಿದ್ದರು. ಈ ವಿವಾದಾತ್ಮಕ ಚಿತ್ರಕ್ಕೆ "ONE AGENDA" ಎಂಬ ಟ್ಯಾಗ್ ಲೈನ್ ನೀಡಿ ಫೇಸ್‌ಬುಕ್‌ನಲ್ಲಿ ಹರಿಬಿಡಲಾಗಿತ್ತು. ಇದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಆಕ್ಷೇಪಾರ್ಹ ಪೋಸ್ಟ್ ಗಮನಿಸಿದ ಹೊಸನಗರ–ನಗರ ಪೊಲೀಸರು, ಮೇ 20, 2025 ರಂದೇ ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 353(2) ರ ಅಡಿಯಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಪ್ರಕರಣದ ತನಿಖೆ ಮುಂದುವರಿಸಿದ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಐಎಎಸ್, ಕೆಎಎಸ್ ಪರೀಕ್ಷೆಗೆ ಉಚಿತ ತರಬೇತಿ

ಬೆಂಗಳೂರು.ಫೆ.12– ಬೆಂಗಳೂರಿನ ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನ 25ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ನೂರು ಅಭ್ಯರ್ಥಿಗಳಿಗೆ ಉಚಿತ ಐಎಎಸ್, ಕೆಎಎಸ್ ಪರೀಕ್ಷಾ ಪೂರ್ವ ತರಬೇತಿ ನೀಡಲು ನಿರ್ಧರಿಸಿದೆ. ತರಬೇತಿ ಸಂಪೂರ್ಣ ಉಚಿತವಾಗಿದ್ದು ಹೆಚ್ಚಿನ ಮಾಹಿತಿಗೆ ಬೆಂಗಳೂರಿನ ವಿಜಯನಗರದ ಅತ್ತಿಗುಪ್ಪೆಯಲ್ಲಿರುವ ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನ ದೂರವಾಣಿ ಸಂಖ್ಯೆ–080–23396403, 9686664983 ಮೂಲಕ ಸಂಪರ್ಕಿಸಲು ಪ್ರಕಟಣೆ ಕೋರಿದೆ.

ಅಭಿನಂದನೆ



ಜೆಡಿಎಸ್ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ಮಾಜಿ ಶಾಸಕ ಅಶ್ವಿನ್‌ಕುಮಾರ್ ಅವರನ್ನು ಉದ್ಯಮಿ ಪ್ರಶಾಂತ್ ಹಾಗೂ ಜೆಡಿಎಸ್ ಮುಖಂಡ ಹರ್ಷ ಗೌಡ ಅವರು ಅಭಿನಂದಿಸಿದರು.

ಪಾಠದ ವಿಚಾರದಲ್ಲಿ ವಿದ್ಯಾರ್ಥಿಗಳನ್ನು ಸೆಳೆಯಲು ಸ್ಮಾರ್ಟ್ ಕ್ಲಾಸ್ ಅಗತ್ಯ

ಬೋಧಕರಿಗೆ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ

ಮೈಸೂರು,ಫೆ.12(ಎಂಟಿವೈ)– ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪಾಠ ಕೇಳುವ ವಿಚಾರದಲ್ಲಿ ಸರಿಯಾಗಿ ಗಮನ ಹರಿಸದಿರುವುದರಿಂದ ಬೋಧಕ ವರ್ಗ ಸ್ಮಾರ್ಟ್ ಕ್ಲಾಸ್ ಸೇರಿದಂತೆ ಪರಿಣಾಮಕಾರಿಯಾದ ಬೋಧನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕಾಲೇಜು ಶಿಕ್ಷಣ ಇಲಾಖೆ ಮತ್ತು ಮೈಸೂರು ವಲಯದ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ವತಿಯಿಂದ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಿಗೆ ರೂಸ ಪ್ರಾಯೋಜಿತ ಒಂದು ದಿನದ ಪ್ರಾದೇಶಿಕ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಗಮನವನ್ನು ಹಿಡಿದಿಟ್ಟುಕೊಳ್ಳಲು ಕಷ್ಟವಾಗುತ್ತಿದೆ. ಪಠ್ಯಕ್ರಮವನ್ನು ಗಮನವಿಟ್ಟು ಆಲಿಸದಿರುವುದು ಕಂಡು ಬಂದಿದೆ. ತರಗತಿಯಲ್ಲಿ ಕೇವಲ 10–15 ನಿಮಿಷವಷ್ಟೇ ವಿದ್ಯಾರ್ಥಿಗಳು ಪಠ್ಯಕ್ರಮ ಬೋಧನೆಯನ್ನು ಆಲಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯ ಕೊರತೆ ಉಂಟಾಗುತ್ತಿದೆ ಎಂದು ವಿಷಾದಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಮುಂದುವರೆಯುತ್ತಿದೆ. ಬೋಧನಾ ಕ್ಷೇತ್ರದಲ್ಲಿ ಹಳೆ ಮಾದರಿ ಬೋಧಿಸಿದರೆ ಪ್ರಯೋಜನವಾಗುವುದಿಲ್ಲ. ತಂತ್ರಜ್ಞಾನ ಬೆಳೆದಂತೆ ಇಂದಿನ ಶಿಕ್ಷಣದ ಸ್ವರೂಪ ಬದಲಾಗುತ್ತಿದೆ. ಪ್ರಾಧ್ಯಾಪಕರು ಇಂದಿನ ಶಿಕ್ಷಣ ವ್ಯವಸ್ಥೆಯ ಅಗತ್ಯತೆಗೆ ತಕ್ಕ ಹಾಗೆ ತಮ್ಮನ್ನು ನವೀಕರಿಸಿಕೊಳ್ಳಬೇಕು. ಸ್ಮಾರ್ಟ್ ಕ್ಲಾಸ್ ಸೇರಿದಂತೆ ಪರಿಣಾಮಕಾರಿ ಬೋಧನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಉತ್ತಮ ಸಮಾಜ ನಿರ್ಮಿಸುವ ಸಾಮರ್ಥ್ಯ ಶಿಕ್ಷಕರಿಗಿದೆ ಎಂದು ಹೇಳಿದರು.

ಶಿಕ್ಷಣದ ಉದ್ದೇಶ ಕೇವಲ ನೌಕರಿ ಪಡೆಯುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಬಾರದು. ಶಿಕ್ಷಣದ ಜೊತೆಗೆ ಜ್ಞಾನಾರ್ಜನೆಗೂ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳಿಗೆ ಕೌಶಲಾಧಾರಿತ ಶಿಕ್ಷಣ ನೀಡಬೇಕು. ಇದರೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರು ಮಾಡಬೇಕು. ಜ್ಞಾನ ತುಂಬಬೇಕು. ಜ್ಞಾನದೊಂದಿಗೆ ಜೀವನದ ಮೌಲ್ಯವನ್ನು ಕಲಿಸಬೇಕು. ಮೌಲ್ಯ ಇದ್ದಾಗ ಮಾತ್ರ ಉತ್ತಮ ಬದುಕು ಕಟ್ಟಿಕೊಳ್ಳಬಹುದು. ಉನ್ನತ ಶಿಕ್ಷಣ ಪಡೆಯಲು ಪ್ರೇರೇಪಿಸಬೇಕು. ಕೇವಲ ಕಾಲೇಜು ಶಿಕ್ಷಣಕ್ಕೆ ಮಾತ್ರ ಸೀಮಿತಗೊಳಿಸಬಾರದು. ಉನ್ನತ ಶಿಕ್ಷಣ ಪಡೆದರೆ ಯಾವುದೇ ಕ್ಷೇತ್ರದಲ್ಲಾದರೂ ಬದುಕು ರೂಪಿಸಿಕೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟರು.

ಆನ್‌ಲೈನ್ ಸಂದೇಶ: ಇದೇ ವೇಳೆ ಆನ್‌ಲೈನ್ ಮೂಲಕ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಕುಮಾರಿ ಎನ್.ಮಂಜುಶ್ರೀ ಮಾತನಾಡಿ, ಮೌಲ್ಯ ಮಾಪನ ಮಾಡುವುದು ಕೇವಲ ಅಂಕಗಳನ್ನು ನೀಡುವುದಕ್ಕೆ ಮಾತ್ರವಲ್ಲ. ವಿದ್ಯಾರ್ಥಿಗಳು ವಿಷಯವನ್ನು ಎಷ್ಟು ಗ್ರಹಿಸಿದ್ದಾರೆ ಎಂದು ವಿಶ್ಲೇಷಿಸುವ ಕ್ರಮ. ಇಂದು ಪಾರದರ್ಶಕ, ಕ್ರಿಯಾಶೀಲ ಟೀಕಾ ಮನೋಭಾವವನ್ನು ಹೆಚ್ಚಿಸುವ ಮೌಲ್ಯಮಾಪನ ವಿಧ ಅಗತ್ಯ ಎನಿಸಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಶಿಕ್ಷಣ ಇಲಾಖೆ ಮೈಸೂರು ಪ್ರಾದೇಶಿಕ ವಲಯದ ಜಂಟಿ ನಿರ್ದೇಶಕರಾದ ಡಾ.ಡಿ.ಎಸ್.ಪ್ರತಿಮಾ ಮಾತನಾಡಿ, ಮೌಲ್ಯ ಮತ್ತು ಕೌಶಲ್ಯ ಆಧಾರಿತ ಶಿಕ್ಷಣ ಅಗತ್ಯ. ಆ ನಿಟ್ಟಿನಲ್ಲಿ ಪ್ರಾಧ್ಯಾಪಕರಿಗೆ ಆಯೋಜಿಸಿರುವ ಈ ಕಾರ್ಯಕ್ರಮದ ಮೂಲಕ ಗುಣಮಟ್ಟದ ಶಿಕ್ಷಣ ಮತ್ತು ಒಳಗೊಳ್ಳುವಿಕೆಯನ್ನು ಸಾಧಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಸಂಪನ್ಮೂಲ ವ್ಯಕ್ತಿಯಾಗಿ ಕಾಲೇಜು ಶಿಕ್ಷಣ ಇಲಾಖೆಯ ಪ್ಲೇಸ್ಮೆಂಟ್ ಸೆಲ್ ರಾಜ್ಯ ನೋಡಲ್ ಅಧಿಕಾರಿ ಪ್ರೊ.ಎ.ನಾರಾಯಣ ಪ್ರಸಾದ್ ಮತ್ತು ಮೈಸೂರು ವಿಶ್ವವಿದ್ಯಾಲಯದ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ.ಸುತ್ತೂರು ಎಸ್.ಮಾಲಿನಿ ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಯ ಸಹಾಯಕ ನಿರ್ದೇಶಕರಾದ ನಾಗರತ್ನಮ್ಮ ಮತ್ತು ಎ.ಬಿ. ನಾಗೇಂದ್ರ ಪ್ರಸಾದ್, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ನಟರಾಜ್ ಉಪಸ್ಥಿತರಿದ್ದರು. ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ.ಎಸ್.ಮುತ್ತುರಾಜ್ ಸ್ವಾಗತಿಸಿದರೆ, ವಾಣಿಜ್ಯ ಸಹ ಪ್ರಾಧ್ಯಾಪಕ ಕ್ಯಾಪ್ಟನ್ ಎನ್.ಸಿ.ಶಿವಕುಮಾರ್ ವಂದನಾರ್ಪಣೆ ನೆರವೇರಿಸಿದರು. ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕರಾದ ಬಿ.ಸುಜಾತ ಕಾರ್ಯಕ್ರಮ ನಿರೂಪಿಸಿದರು.



ಮೈಸೂರಿನ ಮಹಾರಾಣಿ ವಾಣಿಜ್ಯ–ನಿರ್ವಹಣಾ ಕಾಲೇಜಿನ ಸಭಾಂಗಣದಲ್ಲಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಿಗಾಗಿ ಆಯೋಜಿಸಿದ್ದ ಪ್ರಾದೇಶಿಕ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಚಾಲನೆ ನೀಡಿದರು.

ಅಪಾಯಕ್ಕಾಗಿ ಕಾದಿದ್ದ ಗುಂಡಿಯನ್ನು ಮುಚ್ಚಿಸಿ ಸಾಮಾಜಿಕ ಕಾಳಜಿ ಮೆರೆದ ಬಂಕ್ ಮಾಲೀಕ



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಬಳಿ ಗುಂಡಿ ಬಿದ್ದ ರಸ್ತೆಗೆ ಕಾಂಕ್ರಿಟ್ ಸುರಿದು ಮುಚ್ಚಿಸುತ್ತಿರುವುದು.

ಮೈಸೂರು, ಫೆ12(ಎಂಟಿವೈ)– ಗುಂಡಿ ಬಿದ್ದಿದ್ದ ರಸ್ತೆಯನ್ನು ಪೆಟ್ರೋಲ್ ಬಂಕ್ ಮಾಲೀಕರೊಬ್ಬರು ಸ್ವಂತ ಖರ್ಚಿನಿಂದ ಮುಚ್ಚಿಸುವ ಮೂಲಕ ತಮ್ಮ ಸಾಮಾಜಿಕ ಕಾಳಜಿಯನ್ನು ತೋರಿದ್ದಾರೆ.

ಹೆಬ್ಬಾಳು ರಿಂಗ್ ರಸ್ತೆಯಿಂದ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಂಭಾಗ ಇನ್ಫೋಸಿಸ್‌ಗೆ ಹೋಗುವ ರಸ್ತೆಯುದ್ದಕ್ಕೂ ಮೊಳಕಾಲುದ್ದದ ಗುಂಡಿಗಳು ಬಿದ್ದಿತ್ತು. ಇದರಿಂದ ವಾಹನ ಸವಾರರು ಸಂಚರಿಸಲು ಪರದಾಡುವಂತಾಗಿತ್ತು. ಅಲ್ಲದೆ, ಗುಂಡಿಗೆ ಬಿದ್ದು ಹಲವು ದ್ವಿಚಕ್ರ ವಾಹನ ಸವಾರರು ಗಾಯಗೊಂಡಿದ್ದರು. ಕಳೆದ ಎರಡು ದಿನದ ಹಿಂದೆಯೂ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿದ್ದರು. ಸಮೀಪದಲ್ಲಿಯೇ ಇದ್ದ ಗ್ಯಾಲೆಕ್ಸಿ ಎನರ್ಜಿ ಸ್ಟೇಷನ್ ಪೆಟ್ರೋಲ್ ಬಂಕ್ ಮ್ಯಾನೇಜರ್ ರವಿ ಇದನ್ನು ಕಣ್ಣಾರೆ ಕಂಡು ಮಾಲೀಕ ವಿಶ್ವಾಸ್ ಕುಮಾರ್ ಅವರ ಗಮನಕ್ಕೆ ತಂದು, ಇಂದು ಬೆಳಗ್ಗೆ ರಸ್ತೆಯಲ್ಲಿ ಬಿದ್ದಿದ್ದ ಅಪಾಯಕಾರಿ ಗುಂಡಿಗಳನ್ನು ಸಿಮೆಂಟ್ ಕಾಂಕ್ರಿಟ್ ಬಳಸಿ ಮುಚ್ಚಿಸಿದ್ದಾರೆ.

ಪ್ರಮುಖವಾಗಿ ದೊಡ್ಡ ಪ್ರಮಾಣದ ಗುಂಡಿಗಳನ್ನು ಕಾಂಕ್ರಿಟ್ ಬಳಸಿ ಮುಚ್ಚಿಸಲಾಗಿದೆ. 8 ಸಾವಿರ ರೂ. ಮೌಲ್ಯದ ಒಂದೂವರೆ ಎಂಕ್ಯೂಬ್ ಕಾಂಕ್ರಿಟ್ ಹಾಗೂ ಕಾರ್ಮಿಕರಿಗೆ 4 ಸಾವಿರ ರೂ ಕೂಲಿ ನೀಡಿ ಒಟ್ಟು 12 ಸಾವಿರ ರೂ. ವೆಚ್ಚ ಮಾಡಿ ರಸ್ತೆ ಗುಂಡಿ ಮುಚ್ಚಿಸಿದ್ದಾರೆ. ಪೆಟ್ರೋಲ್ ಬಂಕ್ ಮಾಲೀಕರ ಈ ಸೇವಾ ಕಾರ್ಯಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಲ್ಲಿನ ರಸ್ತೆ ಗುಂಡಿಗಳು ಅಪಾಯಕಾರಿಯಾಗಿದ್ದು, ಅನೇಕ ವಾಹನಗಳನ್ನು ಜಖಂಗೊಳಿಸಿವೆ. ಇದೀಗ ಕಾಂಕ್ರಿಟ್ ತುಂಬಿ ಗುಂಡಿ ಮುಚ್ಚಿ, ಕ್ಯೂರಿಂಗ್ ಮಾಡಲು ಕ್ರಮ ಕೈಗೊಳ್ಳಲಾಗಿದೆ.

LOANS HUB

ALL LOANS UNDER ONE ROOF

- Business Loans
- Housing Loans
- Mortgage Loans
- Balance Transfer & Top up

TRUSTED SERVICE
NO SERVICE CHARGES

SRI SAI FINANCIAL SERVICES

Railway Gate Road KG Koppal Mysore

Contact :
88844 47314 / 88844 47318

100% TEAK WOOD

FACTORY FINISH DOORS & WINDOWS

@ FACTORY DEPOT RATES

10 YEARS WARRANTY* ISI

9731591267
9901291267

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟು ಬಿಡಿಸಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣ ವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.

ಒಂದು ಗ್ರಾಂ ಚಿನ್ನದ ದರ: 14,800 (24 CT)

9108146123

ಸ್ವಚ್ಛತಾ ಕಾರ್ಯಕ್ಕಾಗಿ ಮಹಿಳಾ ಕೆಲಸಗಾರ್ತಿ ಬೇಕಾಗಿದ್ದಾರೆ

ಸ್ಥಳ: ರಾಜೀವ್ ನಗರ,
ಎನ್‌ಎಚ್ ಆಸ್ಪತ್ರೆಯ ಹಿಂಭಾಗ
ಸಮಯ: ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ
ಸಂಬಳ: ತಿಂಗಳಿಗೆ ₹15,000
ಕೆಲಸ: ಬಟ್ಟೆ ಒಗೆಯುವುದು, ಇಸ್ತ್ರಿ ಮಾಡುವುದು, ಕಸ ಗುಡಿಸುವುದು, ಧೂಳು ಒರೆಸುವುದು, ಮನೆ ಒರೆಸುವುದು, ಅಚ್ಚುಕಟ್ಟಾಗಿ ನಿರ್ವಹಿಸುವುದು.
4 ಜನರ ಕುಟುಂಬ.

ಸಂಪರ್ಕಿಸಿ:
90359 82320

WANTED IMMEDIATELY

for a REPUTED HOSPITAL

- Front Office
- MRD
- ICU / NICU Staff
- Housekeeping
- Security Guards

Preferred experienced for all the posts

Walk-in Direct Interview on
Friday : 13.02.26 | 11am - 3pm

Call : 99860 11601

G9 projects

Designing your Dreams

Vee2 Developers

SHOURYA LAYOUT

20×30 MUDA Approved Sites

31 Lakhs

Adjoining vijayanagar
4th stage, Mysore

8088-707-707

WANTED

For A Leading Venture Across Vertical
SENIOR / JUNIOR CIVIL ENGINEER
8 to 10 Years' Experience in Layout Works
Land Leveling / Drainage Manhole. Road / STP and Overhead Tanks/ Parks/ Waterlines/ Inerior knowledge. Electrical/ Civil Construction Planning and Development/ Labor and Cost/ Knowledge of UGD
With Good Communications and Computer Skils
Salary as per Industry Standards Intrested Candidates can Call or Whats App

76250 81008

MAHATHMA GANDHI B.ED COLLEGE

Sathagalli, Mysuru

Academic Year: 2025-2026

ADMISSION FOR

B.Ed (Last Few Seats Left)

Contact No:
• 0821-2420374 • 93438 28203

Office: Mahathma Gandhi Trust, #27, Sri Lalitha, Sonar Street, Chamaraja Mohalla, Mysore
Email : mahatmagandhitrust@gmail.com

ಸೈಟುಗಳು ಮಾರಾಟಕ್ಕಿದೆ

ಬನ್ನೂರು ರಸ್ತೆ, ಸಮೀಪವಿರುವ ಡೆಲ್ಲಿ ಪಬ್ಲಿಕ್ ಸ್ಕೂಲ್ ಹಾಗೂ ಜ್ಞಾನ ಸರೋವರ ಇಂಟರ್ನ್ಯಾಷನಲ್ ಸ್ಕೂಲ್ ಸಮೀಪ ಅಭಿವೃದ್ಧಿ ಪಡಿಸಿದ ಪದಕಿ ಲೇಔಟ್ ನಲ್ಲಿ 60x40 ಮುಡಾ ಅನುಮೋದಿತ ಸೈಟ್ ಗಳು ಮಾರಾಟಕ್ಕಿದೆ.

ಸಂಪರ್ಕಿಸಿ ಆಸ್ಗರ್ : 9731749500

JOB OPPORTUNITY

Looking for a job in Mysore? Join our reputed textile store team with over 100 employees!

JOB ROLES:

- Sales Men / Sales Women
- Store Manager
- Supervisors
- HR/ Admin Manager
- Accountant / Data Entry
- Sales Executive/ Cashier
- Junior IT Admin
- Digital Marketing Manager
- Content Creator

"We offer an attractive salary package with incentives and perks, along with complimentary snacks, lunch, and tea/coffee twice daily."

Interview date: 18th Feb, 2026

Applications are open for both experienced candidates and freshers.

Sumangali SILKS

81050 01885

ಮೈಸೂರು ಮಿತ್ರ

46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

FOR SALE

Prime Location Site For Sale
43x93
East Facing, 100 Mtr from Ashoka Puram Railway Station Near Bedarakannappa Temple

30x40, 30x50
Residential Sites for Sale Various Locations

Ready to Move-in Houses for SALE
Prime Locations, Vijayanagar
40x60, 50x80

Commercial Property for Sale Dattagalli, 80Ft Road South East Corner, G+2

Commercial Property for Sale
42.5x100
80Ft Road, Near NIE College

Srirampura Commercial Property for Sale
50x80
North Facing, Rent Expected 3 lakhs

40x60
Commercial Site, East Facing Ramakrishna Nagar, 'H' Block

(Brokers Excuse)

9008111454

Fully furnished and equipped Office space for rent



Key Facilities:

- 30 Workstations
- Manager's Chamber
- 10 Computers (ready to use)
- MD Chamber
- Reception Hall
- Workstation Halll
- Kitchen
- 2 Washrooms (separate for Mal & Female)
- 2 Washrooms
- Server Facility

Office Address:
R-112, 8th Main, Hebbal Industrial Area, Mysuru – 570016

9740808996/ 8296017712 / 9880242319
shivananda9771@gmail.com
Shivananda K C

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ರವಿಕುಮಾರ್ ಆರ್. (ಸ್ಮೈಲಿ)

ಇವರು ದಿನಾಂಕ: 04-02-2026ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 14-02-2026 ಶನಿವಾರ ಬೆಳಗ್ಗೆ 10.30 ಕ್ಕೆ ನಮ್ಮ ಸ್ವಗೃಹ ನಂ. 76/3, ಶ್ರೀ ಕೃಷ್ಣ ದೇವಸ್ಥಾನದ ರಸ್ತೆ, ಯರಗನಹಳ್ಳಿ, ಮೈಸೂರು ಇಲ್ಲಿ ಏರ್ಪಡಿಸಲಾಗಿದ್ದು, ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ತಿಳಿದು, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ವರಲಕ್ಷ್ಮಿ ಮತ್ತು ಶ್ರೀ ರಮೇಶ್, ತಮ್ಮ: ಅಕ್ಷಯ್‌ಕುಮಾರ್, ಹೊಟ್ಟೆರಂಗೇಗೌಡರ ಕುಟುಂಬಸ್ಥರು ಹಾಗೂ ಯರಗನಹಳ್ಳಿ ಗ್ರಾಮಸ್ಥರು

SITES FOR SALE

KRS ROAD

30x40 & 30x50

SPRING MEADOWS

Near JK Tyres, Opp. Wipro, RBI Adjacent

Mob: 8310839079

SHAH SINCE 1947 On wheels — SPOT HIRING NOW ! — Hero

Sl. No.	Designation	Salary/ Month	Requirement
1	Sales Executives	18000	1 Year in Automobile
2	Sales Manager	25000	3 Year in Automobile
3	Service Manager	25000	3 Year in Automobile
4	Spare Parts Manager	25000	3 Year in Automobile
5	Front Line Supervisor	18000	1 Year in Automobile
6	Technician	18000	2 Year Mechanic Experience / ITI Mech
7	Tele Caller	14000	Fresher : Kannada & English
8	Digital Marketing	20000	Content Creation Experience

Walk in Interview with Spot Hiring — Carry Resume, Aadhar and DL

Date : 17.02.2026 | Day : Tuesday | Time : 10 AM

Venue : SHAH MOBIKES Nazarbad, Mysore — Clarification call : 97422-97450

